ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೇ, 2008–09ನೇ ಸಾಲಿನ ಪೂರಕ ಅಂದಾಜುಗಳನ್ನು(ಎರಡನೇ ಕಂತು) ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–1)

ಅಧ್ಯಕ್ಷರು: ಮಂಡಿಸಲಾಯಿತು.

(ಆ) **2009–10ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಚರ್ಚೆ**

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ರಾಮನಗರ): ಮಾನ್ಯ ಅಧ್ಯಕ್ಷರೇ, ಈ ದಿನ ಆಯವ್ಯಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. 2009–10ನೇ ಸಾಲಿನ ಆಯವ್ಯಯದ ವಿಚಾರದಲ್ಲಿ ಈಗಾಗಲೇ ಸದನದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಹಲವಾರು ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರುಗಳು ಚರ್ಚೆಯನ್ನು ಮಾಡಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಈ ಒಂದು ಆಯವ್ಯಯವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮೊದಲನೇ ಪುಟದಲ್ಲಿ ಆತ್ಮವಿಶ್ವಾಸದಿಂದ ಹೇಳಿದ್ದಾರೆ. ಸ್ಥಿರತೆ ಮತ್ತು ಅಭಿವೃದ್ಧಿಗಾಗಿ ಮೊನ್ನೆ ನಡೆದಂತಹ ಉಪ ಚುನಾವಣೆಗಳಲ್ಲಿ ಈ ರಾಜ್ಯದ ಜನತೆ ನಮಗೆ ಆಶೀರ್ವಾದ ಮಾಡಿದ್ದಾರೆ. ಅದರಿಂದ ಈ ಸರ್ಕಾರಕ್ಕೆ ಸ್ಥಿರತೆ ಬಂದಿದೆ ಎನ್ನುವ ಮಾತನ್ನು ಸದನದಲ್ಲಿ ಹೇಳಿದರು. ಆದರೆ ಹಲವಾರು ಸಂದರ್ಭದಲ್ಲಿ ಸಾರ್ವಜನಿಕ ಸಭೆಗಳಲ್ಲಿ ನನ್ನ ಕುರ್ಚಿ ಅಲುಗಾಡುತ್ತಿದೆ ಎನ್ನುವ ಸಂಗತಿಯನ್ನು ಅವರೇ ವ್ಯಕ್ತಪಡಿಸಿದ್ದಾರೆ. ಅವರು ಈ ವಿಚಾರವನ್ನು ಯಾವ ದೃಷ್ಟಿಯಿಂದ ಸದನದ ಹೊರಗೆ ಎರಡು ಮೂರು ಬಾರಿ ಪ್ರಸ್ತಾಪ ಮಾಡಿದ್ದರೆ ಎನ್ನುವುದು ನನಗೆ ಅರ್ಥವಾಗದೆ ಇರುವಂತಹ ಸಂಗತಿ. ಸದನದಲ್ಲಿ ಇಷ್ಟು ಆತ್ಮವಿಶ್ವಾಸದಿಂದ ಹೇಳತಕ್ಕವರು, ಸದನದ ಹೊರಗಡೆ ಎರಡು ಮೂರು ಸಾರ್ವಜನಿಕ ಸಭೆಗಳಲ್ಲಿ ಅವರು ವ್ಯಕ್ತಪಡಿಸಿರುವಂತಹ ಅಭಿಪ್ರಾಯವನ್ನು ನೋಡಿದಾಗ ಎಲ್ಲೋ ಒಂದು ಕಡೆ ಹಳಿ ತಪ್ಪಿರಬಹುದು ಎನ್ನುವುದನ್ನು ನಾವು ಅವರ ಈ ದ್ವಂದ್ವ ನಿಲುವಿನಿಂದ ಗಮನಿಸಬಹುದು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಅವರು ಬಜೆಟ್ ಪುಸ್ತಕದ ಮೊದಲನೇ ಪುಟದಲ್ಲಿ 'ನಮ್ಮ ಕನಸಿನ ರಾಮ ರಾಜ್ಯದಲ್ಲಿ ಭಿಕ್ಷುಕನಿಗೂ, ಭೂಪತಿಗೂ ಸರಿಸಮಾನವಾದ ಹಕ್ಕುಗಳು ದೊರೆಯುವುವು' ಎನ್ನುವ ಮಾತನ್ನು ಅವರು ಏನು ವ್ಯಕ್ತಪಡಿಸಿದ್ದಾರೆ, ಅದು

ನಿಜಕ್ಕೂ ಕಾರ್ಯರೂಪಕ್ಕೆ ಬಂದರೆ, ನಾನು ನಿಜಕ್ಕೂ ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಅವರು ಮಾತನ್ನು ಕೃತಿಯಲ್ಲಿ ಇಳಿಸಿದಾಗ ನಾವು ಯಾವುದೇ ರೀತಿಯ ಪಕ್ಷ ಭೇದವನ್ನು ಎಣಿಸದೇ ಅವರಿಗೆ ಇವತ್ತು ಸಾರ್ವಜನಿಕವಾಗಿ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಸಿದ್ಧವಿದ್ದೇವೆ. ಅವರು ಕಳೆದ ವರ್ಷ ಸರ್ಕಾರವನ್ನು ರಚನೆ ಮಾಡಿದ ಮೇಲೆ ವಿರೋಧಪಕ್ಷಗಳು ಈ ರಾಜ್ಯದ ಅಭಿವೃದ್ಧಿಗೆ ಸಹಕಾರವನ್ನು ಕೊಡುತ್ತಿಲ್ಲವೆಂದು, ವಿರೋಧಪಕ್ಷಗಳು ಈ ಅಭಿವೃದ್ಧಿಯನ್ನು ತಡೆಗಟ್ಟಲಿಕ್ಕೆ ಹೊರಟಿದ್ದಾರೆಂಬ ರೀತಿಯ ಮಾತುಗಳನ್ನು ವ್ಯಕ್ತಪಡಿಸಿರುವಂಥಾದ್ದನ್ನು ನಾನು ಗಮನಿಸಿದ್ದೇನೆ. ರೈತರು ರಸಗೊಬ್ಬರ ವಿಷಯದಲ್ಲಿ ಸಂಕಷ್ಟಕ್ಕೆ ಒಳಗಾದಾಗ ಕೇಂದ್ರ ಸರ್ಕಾರದ ಮುಂದೆ ನಾವು ಒಂದು ನಿಯೋಗವನ್ನು ತೆಗೆದುಕೊಂಡು ಹೋಗೋಣವೆಂದು ಹೇಳಿದಾಗ ವಿರೋಧಪಕ್ಷಗಳು ಸಹಕಾರ ಕೊಡಲಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಇದೇ ಸದನದಲ್ಲಿ ಅವರು ಮುಖ್ಯಮಂತ್ರಿಯಾದ ಮೊದಲನೆಯ ದಿವಸ ಇಲ್ಲಿ ಸಭೆಯನ್ನು ನಡೆಸುವಂಥ ಸಂದರ್ಭದಲ್ಲಿ ಆಗಲೇ ಈ ಸಭೆಯಲ್ಲಿ ರಸಗೊಬ್ಬರದ ಕೊರತೆಯ ವಿಷಯದಲ್ಲಿ ನಾನೇ ವಿಷಯವನ್ನು ಪ್ರಸ್ತಾಪ ಮಾಡಿದೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟರು. ಯಾವುದೇ ರೀತಿಯಲ್ಲಿ ರಸಗೊಬ್ಬರದ ಕೊರತೆ ಇಲ್ಲ, ರೈತರು ರಸಗೊಬ್ಬರದ ಬೇಡಿಕೆಯನ್ನು ಏನು ಇಟ್ಟಿದ್ದಾರೆ. ಅದನ್ನು ಸಂಪೂರ್ಣವಾಗಿ ನಾವು ರೈತರಿಗೆ ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆಂಬ ಮಾತನ್ನು ಸದನದ ಗಮನಕ್ಕೆ ಆ ಸಂದರ್ಭದಲ್ಲಿ ತಂದರು. ನಾನು ಮೊದಲೇ ಮುನ್ಸೂಚನೆಯನ್ನು ಕೊಟ್ಟೆ, ಈ ವರ್ಷ ರಸಗೊಬ್ಬರದ ಕೊರತೆ ಪ್ರಾರಂಭವಾಗುತ್ತಿದೆ, ಇದರ ಬಗ್ಗೆ ಗಮನಹರಿಸಿ ಎಂದು ಹೇಳಿದೆ. ಆನಂತರ ನಡೆದ ಘಟನೆಗಳ ಬಗ್ಗೆ ನಾನು ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಏತಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡಿದೆಯೆಂದರೆ ಇಲ್ಲಿ ಅವರು ಆ ವಿಷಯವನ್ನು ತಂದಿರುವಂಥ ಸಂದರ್ಭದಲ್ಲಿ ನಾನು ಈ ವಿಷಯವನ್ನು ಹೇಳಬಯಸುತ್ತಿದ್ದೇನೆ. ಇನ್ನು ಅವರು ವಿದ್ಯುಚ್ಛಕ್ತಿ ಕೊರತೆಯ ವಿಷಯವನ್ನು ಎರಡನೆಯ ಪುಟದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ವಿದ್ಯುಚ್ಛಕ್ತಿಯನ್ನು ತಯಾರು ಮಾಡುವ ಘಟಕಗಳಿಗೆ ನೀರಿನ ಕೊರತೆ ಇರುವುದರಿಂದ, ಇವತ್ತು ವಿದ್ಯುಚ್ಛಕ್ತಿಯ ಉತ್ಪಾದನೆಯು ಕುಂಠಿತವಾಗಿದೆ. ಇಂಥ ಸಂದರ್ಭದಲ್ಲಿ ಹೆಚ್ಚಿನ ಹಣವನ್ನು ಕೊಟ್ಟು ನಾವು ಇವತ್ತು ವಿದ್ಯುಚ್ಛಕ್ತಿಯನ್ನು ಬೇರೆ ಬೇರೆ ಕಡೆಗಳಿಂದ ತರುವ ಪ್ರಯತ್ನ ಮಾಡಿದ್ದೇವೆಂದು ವಿಷಯವನ್ನು ಏನು ಹೇಳಿದ್ದಾರೆ. ಅದರಲ್ಲಿ ಎಷ್ಟರ ಮಟ್ಟಿಗೆ ಯಶಸ್ಸನ್ನು ಕಂಡಿದ್ದೇವೆಂಬುದನ್ನು ರಾಜ್ಯದ ಹಳ್ಳಿಗಳಿಗೆ ಹೋದಾಗ, ರಾಜ್ಯದ ಸಾಮಾನ್ಯ ರೈತರು ವ್ಯಕ್ತಪಡಿಸುವ ಅಭಿಪ್ರಾಯವನ್ನು ಗಮನಿಸಿದಾಗ, ಈ ಒಂದು ಹೆಚ್ಚಿನ ದರವನ್ನು ಕೊಟ್ಟು ವಿದ್ಯುಚ್ಛಕ್ತಿಯನ್ನು ಇವತ್ತು ರೈತರಿಗೆ ಸರಬರಾಜು ಮಾಡಿದ್ದಾರೆಂಬುದನ್ನು ಗಮನಿಸಬಹುದು. ಈ ಸಂದರ್ಭದಲ್ಲಿ ಸನ್ಮಾನ್ಯ

ಮುಖ್ಯಮಂತ್ರಿಯವರು ಈ ವರ್ಷದ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ಈ ಆಯವ್ಯಯವನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಈ ವರ್ಷದ ಬಜೆಟ್‌ನ ವಿಹಂಗಮ ನೋಟವನ್ನು ಸದನದ ಮುಂದಿಟ್ಟಿದ್ದಾರೆ. ಈ ವರ್ಷ ರಾಜಸ್ವ ಲೆಕ್ಕ 1,151.37 ಕೋಟಿ ರೂ.ಗಳ ಹೆಚ್ಚುವರಿ ಹಣವನ್ನು ಏನು ನಮೂದಿಸಿದ್ದಾರೆ, ಇದನ್ನು ನಾವು ಯಾವ ರೀತಿಯಲ್ಲಿ ಈ 1,151ಕೋಟಿ ರೂ.ಗಳನ್ನು ಸರಿದೂಗಿಸಬಹುದೆಂದು ಅವರು ನಿರೀಕ್ಷೆ ಇಟ್ಟುಕೊಂಡಿರುವಂಥಾದ್ದು, ರಾಜ್ಯ ಲೆಕ್ಕ ತೆರಿಗೆಯಲ್ಲಿ 400 ಕೋಟಿ ರೂ.ಗಳು ಹೆಚ್ಚು ಹಣ ಬರುವ ನಿರೀಕ್ಷೆ, ಕೇಂದ್ರ ಸರ್ಕಾರದ ತೆರಿಗೆ ಪಾಲು 500 ಕೋಟಿ ರೂ.ಗಳು ಜಾಸ್ತಿ ಬರುವ ನಿರೀಕ್ಷೆ, ಹಾಗೂ ಕೇಂದ್ರ ಸರ್ಕಾರಗಳ ಅನುದಾನಗಳಿಂದ ಸುಮಾರು 900 ಕೋಟಿ ರೂ.ಗಳು ಹೆಚ್ಚು ಹಣ, ಬರತಕ್ಕಂಥ ಒಂದು ನಿರೀಕ್ಷೆಯನ್ನು ಇಟ್ಟುಕೊಂಡು, ಇವತ್ತು ಈ ವಿಹಂಗಮ ನೋಟದಲ್ಲಿ 1,151.37 ಕೋಟಿ ರೂ.ಗಳು ಹೆಚ್ಚುವರಿ ಹಣವಿದೆಯೆಂಬ ವಿಷಯವನ್ನು ಏನು ಪ್ರಸ್ತಾಪ ಮಾಡಿದ್ದಾರೆ. ನಾನು ನನ್ನ ಒಂದು ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾದರೆ, ಇದು ಒಂದು ರೀತಿಯ ಊಹಾಪೋಹದ ಒಂದು ಅಂಕಿ–ಅಂಶಗಳನ್ನು ನೀಡಿದ್ದಾರೆಂದು ಹೇಳಬಯಸುತ್ತೇನೆ. ಅದಕ್ಕೆ ಕಾರಣವೇನೆಂದರೆ, ನಾವು 2007–08 ಮತ್ತು 2008–09ರ ಬಜೆಟ್‌ಗಳ ಅಂಕಿ–ಅಂಶಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿದಾಗ 2008–09ನೇ ಸಾಲಿನ ರಾಜ್ಯ ತೆರಿಗೆ ಆದಾಯ ಸುಮಾರು 3,000 ಕೋಟಿ ಕಡಿಮೆಯಾಗಿರುವಂಥಾದ್ದು, ಕೇಂದ್ರ ಸರ್ಕಾರದ ತೆರಿಗೆ ಪಾಲು ಸುಮಾರು 800 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿರುವಂಥಾದ್ದು, ಕೇಂದ್ರಸರ್ಕಾರದ ಅನುದಾನದಲ್ಲಿ 500 ಕೋಟಿ ರೂಪಾಯಿಗಳಷ್ಟು ಇವತ್ತು ಕಡಿಮೆಯಾಗಿರುವಂಥಾದ್ದು. ಈ ಎಲ್ಲಾ ಪ್ರಮುಖ ಆದಾಯಗಳಲ್ಲಿ ಪರಿಷ್ಕೃತ ಅಂದಾಜಿನಲ್ಲಿ ಕಡಿಮೆಯಾದ್ದರಿಂದ 2009–10ನೇ ಬಜೆಟ್‌ನಲ್ಲಿ ಜಾಸ್ತಿಯಾಗಬಹುದೆಂಬ ನಿರೀಕ್ಷೆ ಏನು ಇಟ್ಟುಕೊಂಡಿದ್ದಾರೆ. ಇದು ಬಹುಶಃ ಅರ್ಥಹೀನವಾದ ನಿರೀಕ್ಷೆ ಎನ್ನುವಂಥಾ ಮಾತನ್ನು ಹೇಳಬಯಸುತ್ತಿದ್ದೇನೆ. ಈಗಾಗಲೇ ಅವರೇ ಆಯವ್ಯಯವನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಕೇಂದ್ರಸರ್ಕಾರದವರು 16ನೇ ತಾರೀಖಿನಂದು ಬಜೆಟ್ ಏನು ಮಂಡನೆ ಮಾಡಿದರು. ಆ ಬಜೆಟ್‌ನಲ್ಲಿ ನಮ್ಮ ರಾಜ್ಯಕ್ಕೆ ನಿರಾಶಾದಾಯಕವಾದಂಥ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕೇಂದ್ರಸರ್ಕಾರದ ಬಜೆಟ್ ಮಂಡನೆ ಮಾಡಿದ ನಂತರ, ಈಗಾಗಲೇ ನಿರಾಶೆಯಾಗಿದೆಯೆಂಬುದನ್ನು ಇಲ್ಲಿಯ ಬಜೆಟ್ ಅನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಅವರ ತಮ್ಮ ಭಾವನೆಯನ್ನು ಏನು ವ್ಯಕ್ತಪಡಿಸಿದ್ದಾರೆ, ಅದರ ಆಧಾರದ ಮೇಲೆ ಇವತ್ತು ನಾವು ಚರ್ಚೆಯನ್ನು ಮಾಡುವುದಾದರೆ, 2009–10ನೇ ಆಯವ್ಯಯದಲ್ಲಿ ಆರ್ಥಿಕ ಕುಸಿತವನ್ನು ರಾಷ್ಟ್ರ ಮತ್ತು ರಾಜ್ಯದಲ್ಲಿ ಜಾಗತಿಕ ಮಟ್ಟದಲ್ಲಿ ಆಗಿರುವಂಥ ಹಿನ್ನೆಲೆಯಲ್ಲಿ ನಾವು ಏನು ಇವತ್ತು ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಇವತ್ತು ಆ ಒಂದು ಆರ್ಥಿಕ ಬಿಕ್ಕಟ್ಟನ್ನು ಹೆದರಿಸುವಂಥ ಒಂದು

ಅನಿವಾರ್ಯ ಪರಿಸ್ಥಿತಿಗೆ ನಾವು ಏನು ಬಂದಿದ್ದೇವೆ. ಇದರ ಹಿನ್ನೆಲೆಯೊಳಗೆ ಇವತ್ತು ಈ ಅಂಕಿ ಅಂಶಗಳು ವಾಸ್ತವಾಂಶಕ್ಕೆ ದೂರವಾಗಿರುವಂಥ ಅಂಕಿ ಅಂಶಗಳೆಂದು ನಾನು ಹೇಳಬಯಸುತ್ತೇನೆ. ಇದು ಅಷ್ಟೇ ಅಲ್ಲದೇ 2008–09ರ ಆಯವ್ಯಯದಲ್ಲಿ ಏನು ನಿರೀಕ್ಷೆಯನ್ನು ಇಟ್ಟಿದ್ದರು. ಈ ಆರ್ಥಿಕ ಬೆಳವಣಿಗೆ 9% ನಿರೀಕ್ಷೆಯನ್ನು ಏನು ಇಟ್ಟಿದ್ದರು. ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳ ಮಾಹಿತಿಯ ಪ್ರಕಾರವೇ ಇವತ್ತು 7% ಕುಸಿತವನ್ನು ಕಂಡಿದ್ದೇವೆ. ಇದರ ಆಧಾರದ ಮೇಲೆಯೇ ಶೇಕಡಾ ಆರ್ಥಿಕ ಬೆಳವಣಿಗೆಯಲ್ಲಿ 2% ಖೋತಾವನ್ನು ಇವತ್ತು ಏನು ಅನುಭವಿಸುತ್ತಿದ್ದೇವೆ, ಈ ವರ್ಷದಲ್ಲೂ 2009–10ನೇ ಆಯವ್ಯಯದಲ್ಲೂ 2% ಕಡಿಮೆ ಎನ್ನುವಂಥಾದ್ದು ಖಂಡಿತವೆಂದು ಈ ಒಂದು ಅಂಕಿ ಅಂಶಗಳ ಆಧಾರದ ಮೇಲೆ ನಾವು ಊಹಿಸಬಹುದೆಂದು ನನ್ನ ಅಭಿಪ್ರಾಯವಾಗಿದೆ. ಇವತ್ತು ಕೇಂದ್ರಸರ್ಕಾರದಲ್ಲೂ ಆದಾಯ ಖೋತಾ ಅನುಭವಿಸುವಂಥ ನಿರ್ದಿಷ್ಟವಾದಂಥ ಆ ದಿಕ್ಕನ್ನು ನಾವು ಏನು ಕಾಣುತ್ತಿದ್ದೇವೆ. ನಾವು ಕೇಂದ್ರ ಸರ್ಕಾರದ ಬಜೆಟ್ ಅನ್ನು ಅವಲೋಕನ ಮಾಡಿದಂಥ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಅನುದಾನದಲ್ಲಿ 900ಕೋಟಿ ಅನುದಾನ ಮತ್ತು 500 ಕೋಟಿ ರೂಪಾಯಿಗಳ ತೆರಿಗೆ ಪಾಲು ನಮಗೆ ಬರುತ್ತದೆಂಬ ನಿರೀಕ್ಷೆ ಏನು ಇದೆ, ಆ ನಿರೀಕ್ಷೆ ಅನುಕೂಲವಾಗುವಂಥ ಚಿಹ್ನೆಗಳು ಇವತ್ತು ನಮಗೆ ಕಾಣುತ್ತಾ ಇಲ್ಲವೆನ್ನುವ ವಿಚಾರವನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಹಲವಾರು ಕಾರ್ಯಕ್ರಮಗಳನ್ನು ಅನುಷ್ಟಾನಕ್ಕೆ ತರಬೇಕು, ಈ ರಾಜ್ಯದ ಜನತೆಯನ್ನು ಒಂದು ಹೊಸ ರೀತಿಯ ಕನಸಿನ ಲೋಕಕ್ಕೆ ತೆಗೆದುಕೊಂಡು ಹೋಗಬೇಕೆಂದು ಒಂದು ಆತುರದ ನಿರ್ಧಾರಗಳು ಏನು ಇದೆ, ಇವತ್ತು ಹಲವಾರು ವಿಷಯಗಳನ್ನು ಸದನದಲ್ಲಿರುವುದನ್ನೇ ಪ್ರಸ್ತಾಪ ಮಾಡುವುದಾದರೆ ಇದು ಗಾಳಿಗೋಪುರದ ನಿರ್ಧಾರಗಳೆಂದು ನಾನು ಹೇಳಬಯಸುತ್ತೇನೆ. ಇವತ್ತು 2004ನೇ ಇಸವಿಯವರೆಗೆ ಹಿಂದೆ ಇದ್ದಂಥ ರಾಜ್ಯಸರ್ಕಾರಗಳು ಮೂರು ವರ್ಷಗಳ ಕಾಲ ಸತತವಾಗಿ ಬರಗಾಲದ ಹಿನ್ನೆಲೆಯಲ್ಲಿ over draft ಪಡೆಯುವಂಥ ಒಂದು ವಾತಾವರಣ ನಿರ್ಮಾಣವಾಗಿತ್ತು, ನಂತರ ಒಂದು ಆರ್ಥಿಕ ಶಿಸ್ತನ್ನು ಇವತ್ತು ಅನುಷ್ಟಾನಕ್ಕೆ ತರಬೇಕೆಂಬ ಕಾರಣದಿಂದ, 2004ನೇ ಇಸವಿಯಿಂದ ಆರ್ಥಿಕ ಶಿಸ್ತನ್ನು ತರುವಂಥಾದ್ದಕ್ಕೆ ಎಲ್ಲಾ ಸರ್ಕಾರಗಳು ಏನು ಒಂದು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ್ದಾರೆ. ಕಳೆದ ಬಾರಿ 2008–09ಕ್ಕೆ ಈ ಒಂದು ಸರ್ಕಾರ ಮತ್ತೆ over draft ಅನ್ನು ಪಡೆಯುವಂಥ ವಾತಾವರಣ ನಿರ್ಮಾಣವಾಗಿರುವಂಥಾದ್ದು, ಈ ಸರ್ಕಾರದಿಂದ ಸಾಧನೆ ಏನು ಎಂಬುದನ್ನು, ನಾವು ಇವತ್ತು ಹಣ ಸಂಗ್ರಹಣೆ ಮಾಡುವುದರಲ್ಲಿ ಈ ಸಾಧನೆಯನ್ನು ನಾವು ಗಮನಿಸಬಹುದೆಂಬುದನ್ನು ನಾನು ಹೇಳಬಯಸುತ್ತೇನೆ. ನಾವು ಹಿಂದೆ ಮೂರು ವರ್ಷಗಳ ಬರಗಾಲದ ಹಿನ್ನೆಲೆಯಲ್ಲಿ over draft ಅನ್ನು ಪಡೆದಿರುವಂಥ ಘಟನೆಯನ್ನು ಕಂಡೆವು. ಆದರೆ ಅದು ಆದ

ನಂತರ ಈ over draft ಅನ್ನು ಪಡೆಯದೇ ಸರ್ಕಾರಗಳು ಕೆಲಸಗಳನ್ನು ಏನು ನಿರ್ವಹಿಸುತ್ತಿದ್ದವು, ಮೊದಲನೆಯ ಬಾರಿಗೆ ಈ ಸರ್ಕಾರ over draft ಅನ್ನು ಪಡೆಯತಕ್ಕಂಥ ವಾತಾವರಣ ಏನು ಇದೆ, ಅದನ್ನು ನಾನು ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆ over draft ಪಡೆಯುವುದರ ಮುಖಾಂತರವೇ ಈ ಸರ್ಕಾರದ ಆರ್ಥಿಕ ಪರಿಸ್ಥಿತಿಗಳು ಯಾವ ರೀತಿಯಲ್ಲಿದೆಯೆಂಬುದನ್ನು ಇವತ್ತು ಅವರು ಈ ಸದನದ ಮುಂದಿಟ್ಟಿದ್ದಾರೆ, ಈ ರಾಜ್ಯದ ಜನತೆಯ ಮುಂದಿಟ್ಟಿದ್ದಾರೆಂಬ ವಿಚಾರವನ್ನು ಹೇಳಬಯಸುತ್ತೇನೆ.

12–00PM

ಒಂದು ಕಡೆ overdraft ಅನ್ನು ಮಾಡತಕ್ಕಂಥಾದ್ದು, ಮತ್ತೊಂದು ಕಡೆ ರಾಜಸ್ವ ಲೆಕ್ಕದ ಹೆಚ್ಚುವರಿ ಸಂಗ್ರಹ ಎನ್ನುವುದನ್ನು ತೋರಿಸತಕ್ಕಂಥಾದ್ದು ಆಗಿದೆ. ಒಂದು ರೀತಿಯ ಹಾಸ್ಯಾಸ್ಪದವಾಗಿರತಕ್ಕಂಥ ವಿಷಯವನ್ನು ಸದನದ ಮುಂದೆ ಇಟ್ಟಿದ್ದಾರೆ ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಇನ್ನು 2009–10ರ ರಾಜ್ಯ ಸರ್ಕಾರದ ಅಂದಾಜು ಬಜೆಟ್ ಏನಿದೆ, ಅದರ ಬಂಡವಾಳ ಲೆಕ್ಕಕ್ಕೆ ಬಂದರೆ ಅದರಲ್ಲಿ ನಮಗೆಲ್ಲ ಇನ್ನೂ ಆಶ್ಚರ್ಯವಾಗತಕ್ಕಂಥ ಸಂಗತಿಗಳನ್ನು ನಾವು ಕಾಣಬಹುದು ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. 2007–08ರಲ್ಲಿ ನಾವು ಭಾರತ ಸರ್ಕಾರದಿಂದ 1,571.29 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಅಂದಾಜು ಮಾಡಿದ್ದೆವು. ನಮ್ಮ ಅದೃಷ್ಟವೋ ಏನೋ, ಆ ಸಂದರ್ಭದಲ್ಲಿ ಭಾರತ ಸರ್ಕಾರದವರು ಸಂಪೂರ್ಣವಾಗಿ 1,571 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. 2008–09ರಲ್ಲಿ ಇವರು 1,571 ಕೋಟಿ ರೂಪಾಯಿಗಳ ಸಾಲದ ಹಣವನ್ನೇನು ನಿರೀಕ್ಷೆ ಮಾಡಿದ್ದರು, ಅದರಲ್ಲಿ ಇವರಿಗೆ ಬಂದಿರತಕ್ಕಂಥಾದ್ದು ಕೇವಲ 404 ಕೋಟಿ ರೂಪಾಯಿಗಳು. ಈ ವರ್ಷ ಸರ್ಕಾರದವರು ಬಂಡವಾಳ ಲೆಕ್ಕದಲ್ಲಿ 1,040 ಕೋಟಿ ರೂಪಾಯಿಗಳ ಸಾಲದ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಕಳೆದ ವರ್ಷ ಕೇಂದ್ರ ಸರ್ಕಾರ ನಮಗೆ ಕೊಟ್ಟಿರತಕ್ಕಂಥ ಹಣವನ್ನು ನಾವು ಗಮನಿಸಿದಾಗ, ಇವತ್ತಿನ ಕೇಂದ್ರ ಸರ್ಕಾರದ ಆರ್ಥಿಕ ಪರಿಸ್ಥಿತಿಯಲ್ಲಿ 1,040 ಕೋಟಿ ರೂಪಾಯಿಗಳು ಬರತಕ್ಕಂಥಾದ್ದು ನಂಬಿಕೆಗೆ ಸಮಂಜಸವಾಗಿರತಕ್ಕಂಥ ವಿಷಯವೇ ಎನ್ನುವುದನ್ನು ನಾನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ನಿನ್ನೆ ರವಿಯವರು ಚರ್ಚೆ ಮಾಡುತ್ತಿದ್ದರು. ನೀವು ಏನು ಮಾಡಿದ್ದೀರಿ? ನಿಮ್ಮ ಸರ್ಕಾರಗಳು ಏನು ಮಾಡಿದವು? ಸಮ್ಮಿಶ್ರ ಸರ್ಕಾರದಲ್ಲಿ ಏನಾಯಿತು ಎನ್ನುವುದನ್ನೆಲ್ಲಾ ಹೇಳುತ್ತಿದ್ದರು. ಸಮ್ಮಿಶ್ರ ಸರ್ಕಾರದ ಎರಡು ಅವಧಿಯ ಬಜೆಟ್‌ನಲ್ಲಿ ತಾವು ಯಾವುದೇ ರೀತಿಯ ಸಾಲವನ್ನು ಪಡೆಯಲಿಲ್ಲ. 2006–07ರ ಅವಧಿಯಲ್ಲಿ ಸುಮಾರು 233 ಕೋಟಿ ರೂಪಾಯಿಗಳ ಹಳೆಯ ಸಾಲವನ್ನು ಹಿಂತಿರುಗಿಸಿದ್ದೇವೆ. ಹಾಗೆಯೇ, 2007–08ರ ಅವಧಿಯಲ್ಲಿ ಸುಮಾರು 465 ಕೋಟಿ ರೂಪಾಯಿಗಳ ಸಾಲವನ್ನು ಹಿಂತಿರುಗಿಸಿದ್ದೇವೆ. ಸಮ್ಮಿಶ್ರ ಸರ್ಕಾರವನ್ನು ನಡೆಸಿದ ಈ ಎರಡು ವರ್ಷಗಳ ಅವಧಿಯಲ್ಲಿ ನಾವು ಸಾಲವನ್ನು

ಪಡೆಯದೇ, ಹಳೆಯ ಸಾಲವನ್ನು ಹಿಂತಿರುಗಿಸುವಂಥ ಸಾಧನೆಯನ್ನು ಮಾಡಿದ್ದೇವೆ. ಅದು ನಮ್ಮೊಬ್ಬರ ಸಾಧನೆ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಹಿಂದಿನ ಸರ್ಕಾರಗಳು ತೆಗೆದುಕೊಂಡಂಥ ಕೆಲವು ಶಿಸ್ತುಬದ್ಧ ಆರ್ಥಿಕ ನೀತಿಗಳಿಂದ ಆ ಎರಡು ವರ್ಷಗಳಲ್ಲಿ ನಾವು ಸಾಲವನ್ನು ತೀರಿಸತಕ್ಕಂಥಾದ್ದಕ್ಕೆ ಮತ್ತು ಯೋಜನೆಗೆ ಹೆಚ್ಚಿನ ವೆಚ್ಚವನ್ನು ಮಾಡತಕ್ಕಂಥಾದ್ದರಲ್ಲಿ ಯಶಸ್ಸನ್ನು ಕಾಣಲಿಕ್ಕೆ ನಮಗೆ ಸಾಧ್ಯವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಆದರೆ ಈ ವರ್ಷ ಅಂದರೆ 2008–09ರಲ್ಲಿ ಏನಾಗಿದೆ ಎಂದರೆ, ಸರ್ಕಾರವೇ ನಮಗೆ ಕೊಟ್ಟಿರತಕ್ಕಂಥ ಪರಿಷ್ಕೃತ ಅಂದಾಜಿನಲ್ಲಿ 7,845 ಕೋಟಿ ರೂಪಾಯಿಗಳ ಸಾಲವನ್ನು ಬಹಿರಂಗ ಮಾರುಕಟ್ಟೆಯಲ್ಲಿ ಈ ಒಂದೇ ವರ್ಷದಲ್ಲಿ ತರತಕ್ಕಂಥಾದ್ದಕ್ಕೆ ತೀರ್ಮಾನ ಮಾಡಿಕೊಂಡಿದ್ದಾರೆ. ಈ ರೀತಿ ಸಾಲವನ್ನು ಮಾಡಲಿಕ್ಕೆ ನಿಮ್ಮ ಪಾಲು ಎಷ್ಟಿದೆ ಎಂದು ನಿನ್ನೆ ಕೆಲವು ಸದಸ್ಯರು ಚರ್ಚೆ ಮಾಡುತ್ತಿದ್ದರು, ಹಿಂದಿನ ಸರ್ಕಾರಗಳನ್ನು ಟೀಕೆ ಮಾಡುತ್ತಿದ್ದರು. ಕೇವಲ ಒಂದೇ ವರ್ಷದಲ್ಲಿ 7,845 ಕೋಟಿ ರೂಪಾಯಿಗಳನ್ನು ಬಹಿರಂಗ ಮಾರುಕಟ್ಟೆಯಲ್ಲಿ ಸಾಲ ಎತ್ತತಕ್ಕಂಥ ಒಂದು ವಾತಾವರಣ ಇವತ್ತು ನಿರ್ಮಾಣವಾಗಿದೆ. ಹೀಗಿರುವಾಗ, ಈ ಸರ್ಕಾರದ ಸಾಧನೆ ಏನು ಎನ್ನುವುದನ್ನು ಟೀಕೆ ಮಾಡಿದಂಥ ಸದಸ್ಯರು ಅರ್ಥಮಾಡಿಕೊಳ್ಳಬೇಕು ಎಂದು ಹೇಳಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ, ಈ ವರ್ಷ 6,061 ಕೋಟಿ ರೂಪಾಯಿಗಳ ಬಹಿರಂಗ ಮಾರುಕಟ್ಟೆ ಸಾಲದ ಗುರಿಯನ್ನು ಇಟ್ಟುಕೊಂಡಿದ್ದೀರಿ. ಕಳೆದ ಬಾರಿಯ ಅಂದಾಜು ಬಜೆಟ್‌ನಲ್ಲಿ 3,191 ಕೋಟಿ ರೂಪಾಯಿಗಳ ಸಾಲವನ್ನು ನಿರೀಕ್ಷೆ ಇಟ್ಟುಕೊಂಡಿದ್ದೀರಿ. ಆದರೆ ಅದು ಸುಮಾರು 7,800 ಕೋಟಿ ರೂಪಾಯಿಗಳಿಗೆ ಹೋಯಿತು. ಈ ವರ್ಷ ನೀವು ಸುಮಾರು 6,000 ಕೋಟಿ ರೂಪಾಯಿಗಳ ಸಾಲದ ನಿರೀಕ್ಷೆಯನ್ನೇನು ಇಟ್ಟುಕೊಂಡಿದ್ದೀರಿ, ಅದು 10,000 ಅಥವಾ 12,000 ಕೋಟಿ ರೂಪಾಯಿಗಳಿಗೆ ಹೋಗುತ್ತದೆಯೇ ಎನ್ನುವುದನ್ನು ಮುಂದಿನ ದಿನಗಳಲ್ಲಿ ನಾವು ಕಾದು ನೋಡಬೇಕಾಗುತ್ತದೆ. ಏಕೆಂದರೆ, ಕಳೆದ 50–60 ವರ್ಷಗಳಲ್ಲಿ ಸರ್ಕಾರಗಳನ್ನು ನಡೆಸಿದಂಥ ಸನ್ನಿವೇಶದಲ್ಲಿ ಹಿಂದೆ ಇದ್ದಂಥ ಸರ್ಕಾರಗಳ ಬಜೆಟ್‌ನ ಆರ್ಥಿಕ ಪರಿಸ್ಥಿತಿಯಾಗಿದ್ದ 3,500 ಅಥವಾ 4,000 ಕೋಟಿ ರೂಪಾಯಿಗಳಲ್ಲಿ ಆವತ್ತಿನ ಸರ್ಕಾರಗಳು ಕಾರ್ಯಕ್ರಮಗಳನ್ನು ತರಬೇಕಾಗಿತ್ತು. ಆದರೆ, ಇವತ್ತು ನಾವು ನೋಡುತ್ತಿರುವಂತೆ ಯೋಜನಾ ವೆಚ್ಚ 25,000 ಕೋಟಿ, ಈ ವರ್ಷದ ಬಜೆಟ್ 58,000–60,000 ಕೋಟಿಗೆ ಹೋಗಿದೆ ಹಿಂದಿನ ಸರ್ಕಾರಗಳಲ್ಲಿ ಆರ್ಥಿಕ ಪರಿಸ್ಥಿತಿಯ ಇತಿಮಿತಿಗಳೇನಿತ್ತು, ಆ ಒಂದು ಇತಿಮಿತಿಯೊಳಗೆ ಕೆಲಸವನ್ನು ಬೇಗ ಮಾಡಲಿಕ್ಕೆ ಸಾಧ್ಯವಾಗಿಲ್ಲದೇ ಇರಬಹುದು. ಅದು ಹಿಂದಿನ ಸರ್ಕಾರಗಳ ತಪ್ಪು ಎಂದು ಹೇಳಲಿಕ್ಕೆ ಹೋಗುವುದಿಲ್ಲ. ಇವತ್ತು ಈ ಸರ್ಕಾರದವರು ಹೋಗಿ ಕೆಲವು ನೀರಾವರಿ ಕಾಮಗಾರಿಗಳನ್ನು ಉದ್ಘಾಟನೆ ಮಾಡಿ ಬರುತ್ತಾರೆ. ಈ ರೀತಿಯಾಗಿ ತಾವುಗಳು ಸರ್ಕಾರದ ಕಾರ್ಯಕ್ರಮಗಳನ್ನೇನು ಉದ್ಘಾಟನೆ ಮಾಡುತ್ತೀರಿ, ಅದು

ಸ.ಸ.ಸ.ಸ.ಸ.

ಹಿಂದಿನ ಸರ್ಕಾರಗಳು ತೆಗೆದುಕೊಂಡಿರತಕ್ಕಂಥ ನಿರ್ಧಾರಗಳಿಂದ ಆ ಕೆಲಸಗಳು, ಕಾಮಗಾರಿಗಳು ಮುಗಿದಿರತಕ್ಕಂಥಾದ್ದನ್ನು ನೀವು ಹೋಗಿ ಉದ್ಘಾಟನೆ ಮಾಡಿದ್ದೀರೇ ಹೊರತಾಗಿ ನಿಮ್ಮ ಸರ್ಕಾರದ ಹೊಸ ಸಾಧನೆಗಳು ಯಾವುದೂ ಇಲ್ಲ ಎನ್ನುವುದನ್ನು ಮರೆಯಬಾರದು ಎನ್ನುತಕ್ಕಂಥಾದ್ದನ್ನು ಹೇಳಲಿಕ್ಕೆ ಬಯಸುತ್ತೇನೆ. 2008–09ರ ಪರಿಷ್ಕೃತ ಬಜೆಟ್‌ನಲ್ಲಿ 9,235 ಕೋಟಿ ರೂಪಾಯಿಗಳಷ್ಟು ವೆಚ್ಚ ಮಾಡಿದ್ದೇವೆ ಎಂದು ಈ ಸದನದ ಮುಂದೆ ಇಟ್ಟಿದ್ದಾರೆ. 2009–10ರ ಅಂದಾಜು ಬಜೆಟ್‌ನಲ್ಲಿ ಬಂಡವಾಳ ವೆಚ್ಚದಲ್ಲಿರುವ ಯೋಜನಾ ವೆಚ್ಚವನ್ನು 8712.74 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಇಳಿಸಿದ ವೆಚ್ಚವನ್ನೂ ಕೂಡ ಮತ್ತೆ ಸಾಲ ಮಾಡಿ ವೆಚ್ಚ ಮಾಡುವ ನಿರೀಕ್ಷೆಯನ್ನು ಅಂದಾಜು ಬಜೆಟ್‌ನಲ್ಲಿ ನಮೂದಿಸಿದ್ದಾರೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ಏನು ಎನ್ನುವುದನ್ನು ನಾವು ಇದರಿಂದ ಗಮನಿಸಬಹುದು ಎನ್ನುವುದನ್ನು ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಹಾಗೆಯೇ, 2009–10ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆಯನ್ನು ನೋಡಿದರೆ, ನಗರಾಭಿವೃದ್ಧಿ ಇಲಾಖೆಗೆ 15.5% ರಷ್ಟು ಹೆಚ್ಚಿನ ಹಣ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳೇ ಹಲವಾರು ಸಭೆಗಳಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ಬಾರಿ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಸಮಪಾಲನ್ನು ಕೊಡತಕ್ಕಂಥಾದ್ದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಪಡುತ್ತೇವೆ ಎನ್ನುವ ಮಾತನ್ನು ಒಂದು ಕಡೆ ಹೇಳಿದ್ದಾರೆ. ನಗರ ಪ್ರದೇಶಗಳಿಗೆ ಗ್ರಾಮೀಣ ಪ್ರದೇಶಗಳಿಂದ ವಲಸೆ ಬರತಕ್ಕಂಥ ಯುವಕರ ಸಂಖ್ಯೆ ಜಾಸ್ತಿಯಾಗಿದೆ, ಅದನ್ನು ನಾವು ಕಡಿಮೆ ಮಾಡಬೇಕಾದರೆ ಗ್ರಾಮೀಣ ಮಟ್ಟದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು ಎನ್ನತಕ್ಕಂಥ ಮಾತುಗಳನ್ನು ವೇದಿಕೆಗಳ ಮೇಲೆ ಹೇಳುತ್ತಾರೆ. ಆದರೆ, ಇಲ್ಲಿ ಆಯವ್ಯಯವನ್ನು ಮಂಡನೆ ಮಾಡಬೇಕಾದರೆ ಗ್ರಾಮೀಣ ಪ್ರದೇಶಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎನ್ನುವುದನ್ನು ಇವರು ಹಂಚಿಕೆ ಮಾಡಿರುವ ಹಣದ ವಿವರಗಳನ್ನು ನೋಡಿದಾಗ ನಾವು ಕಾಣಬಹುದು ಎನ್ನುವುದನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ರಾಷ್ಟ್ರೀಕೃತ ಬ್ಯಾಂಕುಗಳಿಂದಲೂ 3% ಬಡ್ಡಿದರದಲ್ಲಿ ಈ ರಾಜ್ಯದ ರೈತರಿಗೆ ಸಾಲವನ್ನು ಕೊಡತಕ್ಕಂಥ ಯೋಜನೆಯನ್ನು ತರುತ್ತೇವೆ ಎಂದು ಹೇಳಿದ್ದಾರೆ. ಇವತ್ತು ನಾವು ಕೇಂದ್ರ ಸರ್ಕಾರದ ನೀತಿಗಳನ್ನು ಗಮನಿಸುವುದಾದರೆ, State Bank of Indi|a ಈ ಒಂದು ಬ್ಯಾಂಕನ್ನು ಬಿಟ್ಟರೆ ಇತರ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳು 12% ಬಡ್ಡಿದರದಲ್ಲಿ ಹಣವನ್ನು ಕೊಡುತ್ತಿವೆ. ಇವತ್ತು ಇಡೀ ದೇಶದಲ್ಲಿ ಯಾವುದೇ ರಾಜ್ಯ ಸರ್ಕಾರಗಳು ಅಥವಾ ಕೇಂದ್ರ ಸರ್ಕಾರ 3% ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತಿಲ್ಲ ಎನ್ನುವ ಮಾತನ್ನು ಮುಖ್ಯಮಂತ್ರಿಗಳು ಹೇಳುತ್ತಾರೆ. ಈ ಬಾಬ್ತಿನಲ್ಲಿ ಕೇವಲ 30–35% ರೈತರಿಗೆ ಅನುಕೂಲವಾಗುತ್ತದೆ. ಶಿವಲಿಂಗೇಗೌಡರು ಚರ್ಚೆ ಮಾಡುತ್ತಿದ್ದಾಗ ಹೇಳುತ್ತಿದ್ದುದನ್ನು ನಾನು ಗಮನಿಸಿದೆ. 65% ರೈತರು ಸಾಲ ಇಲ್ಲದೇ ಜೀವನ ಮಾಡುತ್ತಿರತಕ್ಕಂಥವರು

ಇದ್ದಾರೆ. ಅಂದರೆ ಅವರು ಸಾಲವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗದೇ ಇರತಕ್ಕಂಥ ಒಂದು ವಾತಾವರಣವನ್ನು ನಾವು ಈ ದೇಶದಲ್ಲಿ, ಈ ರಾಜ್ಯದಲ್ಲಿ ಕಾಣುತ್ತಿದ್ದೇವೆ. ಸಾಲವನ್ನು ಪಡೆಯಲು ಆಗದೇ ಇರತಕ್ಕಂಥ ರೈತರುಗಳ ಪರಿಸ್ಥಿತಿ ಏನು ಎನ್ನತಕ್ಕಂಥಾದ್ದನ್ನು, ಸರ್ಕಾರದವರು ಗಮನದಲ್ಲಿಟ್ಟುಕೊಂಡಿದ್ದಾರೆಯೇ ಎನ್ನುವುದನ್ನು ಹೇಳುತ್ತೇನೆ. ಈ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ರೈತರಿಗೆ 3% ಬಡ್ಡಿದರದಲ್ಲಿ ಸಾಲವನ್ನು ಕೊಡತಕ್ಕಂಥ ಯೋಜನೆಯನ್ನೇನು ತಂದಿದ್ದೀರಿ, ಇದಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳು ನಿಮಗೆ ಯಾವ ರೀತಿಯ ಸಹಕಾರವನ್ನು ಕೊಡುತ್ತಾರೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ನಾವು ಕಾದು ನೋಡಬೇಕಾಗುತ್ತದೆ. ಏಕೆಂದರೆ, ಸಹಕಾರಿ ಬ್ಯಾಂಕುಗಳಲ್ಲಿ ರೈತರಿಗೆ 3% ಬಡ್ಡಿದರದಲ್ಲಿ ಸಾಲ ಕೊಡತಕ್ಕಂಥಾದ್ದಕ್ಕೂ, ರಾಷ್ಟ್ರೀಕೃತ ಬ್ಯಾಂಕುಗಳು 3% ಬಡ್ಡಿದರದಲ್ಲಿ ರೈತರಿಗೆ ಸಾಲವನ್ನು ಕೊಡತಕ್ಕಂಥಾದ್ದಕ್ಕೂ ಬಹಳ ವ್ಯತ್ಯಾಸವಿದೆ. 3% ಬಡ್ಡಿದರದಲ್ಲಿ ನೀವು ರೈತರಿಗೆ ಸಾಲವನ್ನು ಕೊಡಬೇಕು, ಆ ಹಣವನ್ನು ನಾವು ಒದಗಿಸುತ್ತೇವೆ ಎಂದು ನೀವು ಹೇಳಿದರೂ, ರಾಷ್ಟ್ರೀಕೃತ ಬ್ಯಾಂಕುಗಳು ಯಾವ ರೀತಿ ನಿಮಗೆ ಸ್ಪಂದಿಸುತ್ತವೆ ಎನ್ನತಕ್ಕಂಥಾದ್ದನ್ನು ಮುಂದಿನ ದಿನಗಳಲ್ಲಿ ನಾವು ಕಾದು ನೋಡಬೇಕು. ಇದರ ಜೊತೆಗೆ, 3% ಬಡ್ಡಿದರದಲ್ಲಿ ಸಾಲ ಕೊಡತಕ್ಕಂಥಾದ್ದನ್ನು 50 ಸಾವಿರ ರೂಪಾಯಿಗಳಿಗೆ ಮಾತ್ರ ಮೊಟಕುಗೊಳಿಸಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸಣ್ಣಪುಟ್ಟ ರೈತರು ಹೋದರೆ ಅವರಿಗೆ ಸಾಲವನ್ನು ಕೊಡುತ್ತಾರೆ ಎನ್ನುವುದನ್ನು ನಾನು ಎಲ್ಲೂ ನೋಡಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಣ್ಣಪುಟ್ಟ ರೈತರಿಗೆ ಸಾಲ ಸಿಗತಕ್ಕಂಥಾದ್ದು ಬಹಳ ಕಡಿಮೆ. ಅಂಥ ಸಂದರ್ಭದಲ್ಲಿ 3% ಬಡ್ಡಿದರದಲ್ಲಿ ನಾವು ಸಾಲ ಕೊಡುತ್ತೇವೆ, ಅದರ ಮುಖಾಂತರ ನಾವು ಏನೋ ಒಂದು ದೊಡ್ಡ ಸಾಧನೆ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ತಾವು ಏನು ಹೇಳುತ್ತಿದ್ದೀರಿ, ಅದರಲ್ಲಿ ಎಷ್ಟರ ಮಟ್ಟಿನ ಯಶಸ್ಸನ್ನು ನಾವು ಕಾಣುತ್ತೇವೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ನಾವು ಕಾದು ನೋಡಬೇಕು ಎನ್ನುವುದನ್ನು ಹೇಳಲು ಬಯಸುತ್ತೇನೆ. ಇವತ್ತು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ನಾನು ಪ್ರಮುಖವಾಗಿ ಒಂದು ವಿಷಯವನ್ನು ಕೇಳಲಿಕ್ಕೆಬಯಸುತ್ತೇನೆ. ಶಿಕ್ಷಣ ಕ್ಷೇತ್ರಕ್ಕಾಗಿ 8888 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದೆಂದು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಕಟ ಮಾಡಿದರು. ಮಾರನೇ ದಿವಸದ ಪತ್ರಿಕೆಗಳಲ್ಲಿ 8888 ಕೋಟಿ ರೂಪಾಯಿಗಳನ್ನು ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ಕೊಡುತ್ತಿದೆ ಎಂದು ದೊಡ್ಡ ಅಕ್ಷರಗಳಲ್ಲಿ ಹಾಕಿದ್ದರು. ಇದನ್ನು ನೋಡಿ ನನಗೆ ಆಶ್ಚರ್ಯವಾಯಿತು. 8888 ಕೋಟಿ ರೂಪಾಯಿಗಳನ್ನು ಶಿಕ್ಷಣ ಇಲಾಖೆಗೆ ಕೊಟ್ಟಮೇಲೆ ಈ ವರ್ಷ ಈ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನಾವು ದಾಪುಗಾಲಿಟ್ಟು ಹೋಗುತ್ತೇವೆಯೋ ಎನ್ನುವಂಥ ಹಾಗೂ ಈ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ಒಂದೇ ವರ್ಷದಲ್ಲಿ ತೀರ್ಮಾನ ಮಾಡಿಕೊಂಡಿದ್ದಾರೆಯೋ, ಏನೋ ಎಂದು ಹೇಳಿ ನನಗೇ ಒಂದು ರೀತಿಯ

confusion ಆಯಿತು. ಸದನದಲ್ಲಿರುವ ಹಲವಾರು ಸದಸ್ಯರುಗಳಿಗೆ ನನ್ನನ್ನೂ ಸೇರಿಸಿಕೊಂಡು, ಬಜೆಟ್ ಬಗ್ಗೆ ಚರ್ಚೆ ಮಾಡುತ್ತಾ ಆರ್ಥಿಕ ಅವಲೋಕನ ಮಾಡಬೇಕಾದರೆ, ಈ ಚರ್ಚೆಗಳಿಗೆ ಯಾವ ರೀತಿ ನಾವು ಮಾಹಿತಿಗಳನ್ನು ಸಂಗ್ರಹ ಮಾಡಬೇಕೆನ್ನುವುದಕ್ಕೆ ಇನ್ನೂ ನಮಗೆ ಅನುಭವಗಳು ಸಾಲದು. ಶಿಕ್ಷಣ ಕ್ಷೇತ್ರಕ್ಕೆ 8888 ಕೋಟಿ ರೂಪಾಯಿಗಳು ಎಂದಾಗ ನಾನು ಆಶ್ಚರ್ಯಪಟ್ಟೆ. ಮೊನ್ನೆ banquet hall ನಲ್ಲಿ ಶಿಕ್ಷಣ ಸಚಿವರು ಶಾಲೆಗೆ ಮಕ್ಕಳನ್ನು ಕರೆದುಕೊಂಡು ಬರುವ ಸಂಬಂಧ ಒಂದು ಸಭೆಯಮ್ನ ನಡೆಸಿದರು. ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದನ್ನು ನಾನು ಟಿ.ವಿ.ಯಲ್ಲಿ ನೋಡಿದೆ. ಈ ವರ್ಷ ಶಿಕ್ಷಣ ಇಲಾಖೆಗೆ 8888 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಇದನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕೆಂದು ಹೇಳಿದ್ದನ್ನು ಕೇಳಿದ್ದೇನೆ. ಬಜೆಟ್ ಭಾಷಣದ 80ನೇ ಪುಟದಲ್ಲಿ '2009–10ನೇ ಸಾಲಿನ ವಿಭಾಗಾವಾರು ರಾಜ್ಯ ಯೋಜನಾ ಹಂಚಿಕೆಯಲ್ಲಿ ಶಿಕ್ಷಣ ಇಲಾಖೆ ಇಟ್ಟಿರುವಂಥ 8888 ಕೋಟಿ ರೂಪಾಯಿಗಳು ಎಲ್ಲಿದೆ ಎಂದು ಹುಡುಕಿದಾಗ 2297 ಕೋಟಿ ರೂಪಾಯಿಗಳು ಯೋಜನಾ ವೆಚ್ಚದಲ್ಲಿರುವುದು ಕಂಡುಬರುತ್ತದೆ. 8888 ಕೋಟಿ ರೂಪಾಯಿಗಳೆಂದು ಹೇಳಿ ಮಾಧ್ಯಮದವರನ್ನೂ ದಿಕ್ಕುತಪ್ಪಿಸಿದ್ದೀರಿ. ಮಾಧ್ಯಮದಲ್ಲಿ ಬಂದಿದ್ದನ್ನು ನೋಡಿ 8888 ಕೋಟಿ ರೂಪಾಯಿಗಳನ್ನೂ ಯೋಜನಾ ವೆಚ್ಚಕ್ಕೇ ಕೊಟ್ಟುಬಿಟ್ಟಿದ್ದಾರೆನ್ನುವಂಥ ವಾತಾವರಣ ಜನರಲ್ಲಿ ನಿರ್ಮಾಣವಾಯಿತು. ಇದನ್ನು ಕಳೆದ ವರ್ಷಕ್ಕೆ ಹೋಲಿಸಿದಾಗ, ಕೇವಲ 98 ಕೋಟಿ ರೂಪಾಯಿಗಳು ಮಾತ್ರ ಯೋಜನಾ ವೆಚ್ಚದಲ್ಲಿ ಜಾಸ್ತಿಯಾಗಿದೆ. ನಿನ್ನೆ ಸಿದ್ದರಾಮಣ್ಣರವರು ನಂಜುಂಡಪ್ಪ ವರದಿ ವಿಷಯದಲ್ಲಿ ಪ್ರಸ್ತಾಪ ಮಾಡಿದರು. ಕಳೆದ ಬಾರಿ 2547 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಏನು ಹೇಳಿದ್ದರು, ಇವತ್ತು ಬೆಳಗ್ಗೆ ನಮಗೆ ಕಳೆದ ವರ್ಷದ Action Taken Report ಕೊಟ್ಟಿದ್ದೀರಿ, ಇದರಲ್ಲಿ ನಾನು ನೋಡಿದಾಗ, 2547 ಕೋಟಿ ರೂಪಾಯಿಗಳನ್ನು ನಂಜುಂಡಪ್ಪ ವರದಿಯ ಆಧಾರದ ಮೇಲೆ ಯಾವುದಕ್ಕೆ ಕೊಟ್ಟಿದ್ದೀರಿ ಎನ್ನುವುದು ಇದರಲ್ಲಿ ಹುಡುಕಿದರೂ ಸಿಗುವುದಿಲ್ಲ. ಈ ಬಾರಿ ತಾವು ಏನು ಹೇಳುತ್ತೀರಿ ಎಂದರೆ, "ನಂಜುಂಡಪ್ಪ ವರದಿ ಅನುಷ್ಠಾನದಲ್ಲಿ ಹೊಸ ಹೆಜ್ಜೆ, ಈ ಯೋಜನೆಗೆ 2007–08ರಲ್ಲಿ 1572 ಕೋಟಿ ರೂಪಾಯಿ, 2008–09ರಲ್ಲಿ 2547 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿತ್ತು" ಎಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಆರ್ಥಿಕ ಸಚಿವರಾಗಿದ್ದರು. ಅವರು ಇಷ್ಟು ಹಣವನ್ನು ಎಲ್ಲೆಲ್ಲಿ ಖರ್ಚು ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಹೈದರಾಬಾದ್–ಕರ್ನಾಟಕದ ಅತಿ ಹಿಂದುಳಿದಿರತಕ್ಕಂಥ ವಿಧಾನ ಸಭಾ ಕ್ಷೇತ್ರದ ಸದಸ್ಯರು ಇದರ ಬಗ್ಗೆ ಚರ್ಚೆ ಮಾಡಬೇಕು. ಇದು ಕೇವಲ ಬಜೆಟ್ ಪುಸ್ತಕದಲ್ಲಿದೆಯೇ ಹೊರತು ಯಾವುದೇ ರೀತಿಯ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಈ ವರ್ಷದಲ್ಲಿ, "ಈ ಸಾಲಿನ ವಿಶೇಷ ಅಭಿವೃದ್ಧಿಗಾಗಿ ಮುಂಗಡ ಪತ್ರದಲ್ಲಿ 2574 ಕೋಟಿ ರೂಪಾಯಿಗಳ

ಅನುದಾನವನ್ನು 'ಪ್ರತ್ಯೇಕ'ವಾಗಿ ಒದಗಿಸಲಾಗಿದೆ" ಎಂದು ಹೇಳಿದ್ದಾರೆ. ಅಂದರೆ, ಪ್ರತ್ಯೇಕವಾಗಿ ಒದಗಿಸಲಾಗಿದೆ ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ಬಜೆಟ್ ಭಾಷಣದ 80ನೇ ಪುಟದ ಅನುಬಂಧವನ್ನು ತೆಗೆದು ನೋಡಿದರೆ, ನಂಜುಂಡಪ್ಪ ವರದಿಗೆ ಪ್ರತ್ಯೇಕವಾಗಿ 2574 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ, ಈ ವರ್ಷಕ್ಕೆ 29500 ಕೋಟಿ ರೂಪಾಯಿಗಳ ಯೋಜನಾ ವೆಚ್ಚದ ಭರವಸೆಯನ್ನು ಕೊಟ್ಟಿದ್ದಾರೆ, ನಂಜುಂಡಪ್ಪ ವರದಿಗೆ ವಿಶೇಷವಾಗಿ, ಪ್ರತ್ಯೇಕವಾಗಿ ಹಣ ಇಟ್ಟಿದ್ದೇವೆನ್ನುವುದಕ್ಕೆ ಇಲ್ಲಿ ಯಾವುದೇ ರೀತಿಯ ಮಾಹಿತಿ ಇಲ್ಲ. ಆ 2574 ಕೋಟಿ ರೂಪಾಯಿಗಳನ್ನು 'ಪ್ರತ್ಯೇಕ' ಎಲ್ಲಿ ಇಟ್ಟಿದ್ದಾರೆನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದ ಗಮನಕ್ಕೆ ತರಬೇಕು. ಅದಕ್ಕೇ ನಾನು ಹೇಳಿದ್ದು, ಈ ವರ್ಷದ ಬಜೆಟ್ ಕೇವಲ ಚುನಾವಣೆಯಲ್ಲಿ ತಾತ್ಕಾಲಿಕವಾಗಿ ಮತದಾರರ ಗಮನ ಸೆಳೆಯುವುದಕ್ಕೆ ಮತ್ತೊಮ್ಮೆ ಈ ರಾಜ್ಯದ ಮತದಾರರಿಗೆ ಮಕ್ಮಲ್ ಟೋಪಿಯನ್ನು ಹಾಕಲಿಕ್ಕೆ ಹೊರಟಿರುವ ವಿಶೇಷವಾದ ಬಜೆಟ್ ಇದೆಂದು ಹೇಳಬಯಸುತ್ತೇನೆ. ಇವತ್ತು ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಇಷ್ಟೊಂದು ತರಾತುರಿಯಲ್ಲಿ ಘೋಷಣೆ ಮಾಡಿ 4 ತಿಂಗಳಿಗೆ ಮಾತ್ರ ಲೇಖಾನುದಾನ ತೆಗೆದುಕೊಳ್ಳಲಿಕ್ಕೆ ಹೊರಟಿದ್ದಾರೆ. ಏಕೆ ಈ ತರಾತುರಿ ಬೇಕಿತ್ತು? ಕೇಂದ್ರ ಸರ್ಕಾರವಾದರೆ ಚುನಾವಣೆಗೆ ಹೋಗುತ್ತಿದ್ದಾರೆ, ಅದಕ್ಕೋಸ್ಕರ ಅವರು ಲೇಖಾನುದಾನ ಪಡೆಯಬೇಕಾಗಿತ್ತು, ಪಡೆದಿದ್ದಾರೆ. ಈ ಸರ್ಕಾರ ಇನ್ನೂ ನಾಲ್ಕೂವರೆ ವರ್ಷ ಇರಬೇಕಾದ ಸರ್ಕಾರ. ನೀವು 4 ತಿಂಗಳಿಗೆ ಲೇಖಾನುದಾನವನ್ನು ಏತಕ್ಕೆ ಪಡೆಯುತ್ತಿದ್ದೀರಿ? ಮುಖ್ಯಮಂತ್ರಿಗಳು ಸಾರ್ವಜನಿಕವಾಗಿ ಹೇಳಿದಹಾಗೆ, ಈ ಸರ್ಕಾರವೇನಾದರೂ ಅಲುಗಾಡುತ್ತಿದೆಯೇ? 4 ತಿಂಗಳಿಗೆ ಲೇಖಾನುದಾನವನ್ನು ಪಡೆಯುವ ಇಷ್ಟೊಂದು ತರಾತುರಿ ಏನಿತ್ತು? ಬಜೆಟ್ ಪಾಸ್ ಮಾಡಿಕೊಳ್ಳುವುದಕ್ಕೆ ಮಾರ್ಚ್ 31ನೇ ತಾರೀಖಿನವರೆಗೆ ಅವಕಾಶವಿತ್ತು. ಕೇಂದ್ರ ಸರ್ಕಾರದ ಚುನಾವಣೆ ಘೋಷಣೆಯಾದರೂ ಸರ್ಕಾರ ಲೇಖಾನುದಾನ ಪಡೆಯಲಿಕ್ಕೆ ಅವಕಾಶವಿತ್ತು, ನೀವು ಬಜೆಟ್ ಅನ್ನು ಮಂಡನೆ ಮಾಡಲಿಕ್ಕೆ ಅವಕಾಶವಿತ್ತು. 4 ತಿಂಗಳಿಗೆ ಏಕೆ ತರಾತುರಿಯಲ್ಲಿ ಲೇಖಾನುದಾನ ಪಡೆಯುತ್ತಿದ್ದೀರಿ? ನಿಮಗೇ ಬಹುಶಃ ಈ ಸರ್ಕಾರ ಬಹಳ ದಿವಸ ಇರುವುದಿಲ್ಲವೆನ್ನುವುದು ಈ ರೀತಿಯ ತರಾತುರಿಯಲ್ಲಿ ಬಜೆಟ್ ಅನ್ನು ಮಂಡನೆ ಮಾಡಿರುವುದನ್ನು ಗಮನಿಸಿದಾಗ, ಒಳಗಡೆ ಎಲ್ಲೋ ಒಂದು ಕಡೆ ಈ ಸರ್ಕಾರ ಅಭದ್ರವಾಗಿರುವ ಸರ್ಕಾರ ಎನ್ನುವುದನ್ನು ನೀವೇ ಈ ರಾಜ್ಯದ ಜನತೆಗೆ ತೋರಿಸಲಿಕ್ಕೆ ಈ ಬಜೆಟ್ ಅನ್ನು ತರಾತುರಿಯಲ್ಲಿ ಮಂಡನೆ ಮಾಡಿದ್ದಾರೆ ಎನ್ನುವುದನ್ನು ಹೇಳಬೇಕಾಗುತ್ತದೆ. ಅದೇ ರೀತಿ, ನಗರಾಭಿವೃದ್ಧಿ ಇಲಾಖೆಗೆ 7376 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಅಂದಾಜಿಸಲಾಗಿದೆ ಎಂದು ಹೇಳಿದರು. ಮಾಧ್ಯಮಗಳಲ್ಲಿ ಬೆಂಗಳೂರು ನಗರಕ್ಕೆ ದೊಡ್ಡ ಉಡುಗೊರೆ ಕೊಟ್ಟಿದ್ದಾರೆನ್ನುವ ವ್ಯಾಖ್ಯಾನ ಬಂದಿರುವುದನ್ನು ಗಮನಿಸಿದೆ. ಯೋಜನಾ ವೆಚ್ಚದ

ಹಂಚಿಕೆಯಲ್ಲಿ ನೋಡಿದರೆ, ನಗರಾಭಿವೃದ್ಧಿ ಇಲಾಖೆಗೆ 4573 ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಕಂಡು ಬರುತ್ತದೆ. ನೀವು ಸದನವನ್ನೂ ಒಂದು ಕಡೆ ದಿಕ್ಕುತಪ್ಪಿಸುತ್ತಿದ್ದೀರಿ, ಈ ರಾಜ್ಯದ ಜನರನ್ನೂ ದಿಕ್ಕುತಪ್ಪಿಸತಕ್ಕಂಥ ಕೆಲಸಕ್ಕೆ ಏಕೆ ಹೊರಟಿದ್ದೀರಿ? ಇದು ತಾತ್ಕಾಲಿಕವಾಗಿ ಜನರನ್ನು ಖುಷಿಪಡಿಸುವ ಬಜೆಟ್ ಎನ್ನುವುದನ್ನು ನೀವು ಸಾಬೀತು ಮಾಡಿ ತೋರಿಸಿದ್ದೀರಿ. ಕಳೆದ ಬಾರಿ ಬೆಂಗಳೂರಿಗೆ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ 1800 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದರು. ಆದರೆ, ಸದನದಲ್ಲಿ 2008–09ರ Action Taken Report ಏನು ಕೊಟ್ಟಿದ್ದೀರಿ, ಅನುಪಾಲನಾ ವರದಿಯಲ್ಲಿ ನೋಡಿದರೆ ಅದರಲ್ಲಿ ಒಂದು ಪಕ್ಕದಲ್ಲಿ 1800 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದೇವೆಂದು ಏನು ಹೇಳುತ್ತೀರಿ, ಅದರ ಬಗ್ಗೆ ಚರ್ಚೆಯೇ ಇಲ್ಲ. ಇದು ಸರ್ಕಾರವೇ ಕೊಟ್ಟಿರುವ ವರದಿ. 1800 ಕೋಟಿ ರೂಪಾಯಿಗಳನ್ನು ಕೊಟ್ಟಿರುವ ವಿಷಯದಲ್ಲಿ ಮಾಹಿತಿಯೇ ಇಲ್ಲ. Blank ಇದೆ. 1800 ಕೋಟಿ ರೂಪಾಯಿಗಳನ್ನು ಕೊಡುವ ಬದಲು 300 ಕೋಟಿ ರೂಪಾಯಿಗಳಷ್ಟು ಮಾತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು: ಹಿರಿಯ ಸದಸ್ಯರು ಬಜೆಟ್ ಭಾಷಣದ ಮೇಲೆ ಚರ್ಚೆ ಮಾಡುತ್ತಿರುವಾಗ ಸದಸ್ಯರು ಪರಸ್ಪರ ಈ ರೀತಿ ಮಾತನಾಡುವುದು ಸರಿಯಲ್ಲ. ಇದು ಎಲ್ಲಾ ಸದಸ್ಯರಿಗೂ ಅನ್ವಯವಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಈ ಸರ್ಕಾರ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಗಮನಿಸಬಹುದು. ಕಳೆದ ಬಾರಿ ನಂಜುಂಡಪ್ಪ ವರದಿ ಬಗ್ಗೆ ಏನು ಚರ್ಚೆ ಮಾಡಿದರೋ, 2008–09ರ ಅಂಕಿ ಅಂಶವನ್ನು ತೆಗೆದುಕೊಳ್ಳುವುದಾದರೆ, 2547 ಕೋಟಿ ರೂಪಾಯಿಗಳ ಬಗ್ಗೆ Action Taken Report ನಲ್ಲಿ ಯಾವ ವಿಷಯವೂ ಇಲ್ಲ. ಇದು ಈ ಸರ್ಕಾರ ಬಜೆಟ್‌ನಲ್ಲಿ ಮಂಡನೆ ಮಾಡುವ ಯಾವುದೇ ಮಾಡುವ ಕಾರ್ಯಕ್ರಮವನ್ನು ನೂರಕ್ಕೆ ನೂರು ಭರವಸೆ ಈಡೇರಿಸಿದ್ದೇವೆ, ಪ್ರತಿ ನೂರು ದಿವಸಗಳಿಗೊಮ್ಮೆ ಮುಖ್ಯಮಂತ್ರಿಗಳು ದೊಡ್ಡ ದೊಡ್ಡ ಜಾಹಿರಾತು, colourful ಚಿತ್ರಗಳನ್ನು ಹಾಕಿ ಪುಸ್ತಕಗಳನ್ನು ಬಿಡುಗಡೆ ಮಾಡುತ್ತಾರೆ. ಅದಕ್ಕೆ ಖರ್ಚು ಮಾಡತಕ್ಕಂಥ ಹಣವನ್ನಾದರೂ ಕೊಟ್ಟಿದ್ದರೆ ಯಾವುದಾದರೊಂದು ತಾಲ್ಲೂಕು ಇವತ್ತು ಅಭಿವೃದ್ಧಿ ಆಗುವುದನ್ನು ನಾವು ಗಮನಿಸಬಹುದಿತ್ತು. ಈ ಸರ್ಕಾರ ಬಂದ ಮೇಲೆ ಕರ್ನಾಟಕ ರಾಜ್ಯದ ಹಿಂದಿನ ಎಲ್ಲಾ ಸರ್ಕಾರಗಳ ಕಾರ್ಯಚಟುವಟಿಕೆಗಳನ್ನು ನೋಡಿದಾಗ ಬಹುಶಃ ಜಾಹೀರಾತುಗಳ ಮೇಲೆ ನಡೆಯುತ್ತಿರುವ ಸರ್ಕಾರ ಯಾವುದಾದರೂ ಇದ್ದರೆ ಅದು ಇವತ್ತಿನ ಸರ್ಕಾರವೆಂದು ಹೇಳುವುದಕ್ಕೆ ಬಯಸುತ್ತೇನೆ. ಜಾಹೀರಾತಿಗೆ ಪ್ರತಿ ದಿವಸ ಯಾವುದೇ ಪತ್ರಿಕೆಗಳನ್ನು ತೆಗೆದು ನೋಡಿದರೂ 2–3 ಆದರೂ ಜಾಹೀರಾತುಗಳು ಇದ್ದೇ ಇರುತ್ತವೆ. ಒಂದೇ

subject ನ ಒಂದೇ ಜಾಹೀರಾತು ಸತತವಾಗಿ 4–5 ದಿವಸ ಪೇಪರ್‌ನಲ್ಲಿ ಹಾಕುತ್ತಾರೆ. ಅಭಿವೃದ್ಧಿಯನ್ನು ಯಾವುದೇ ಕಾರಣಕ್ಕೂ ಮಾಡದೇ, ಕೇವಲ ಜಾಹೀರಾತುಗಳ ಮೇಲೆ ಜನರನ್ನು ದಿಕ್ಕುತಪ್ಪಿಸುವ ಕೆಲಸಕ್ಕೇನು ಕೈ ಹಾಕದ್ದೀರಿ, ಅದು ಸರಿಯಲ್ಲ. ನೀವು ಈ ಜಾಹೀರಾತುಗಳ ಮುಖಾಂತರವೇ ಈ ಸರ್ಕಾರವನ್ನು ಶಾಶ್ವತವಾಗಿ ಉಳಿಸಿಕೊಳ್ಳಬಹುದೆನ್ನುವ ಭ್ರಮೆಯಲ್ಲಿದ್ದರೆ ಈ ಜಾಹೀರಾತುಗಳನ್ನು ಕೊಡುವುದರ ಮೂಲಕ ಹಲವಾರು ಸರ್ಕಾರಗಳು ಧೂಳೀಪಟ ಆಗಿರುವುದನ್ನು ನಾವು ನೋಡಿದ್ದೇವೆ. ಮುಂದಿನ ದಿನಗಳು ನಿಮಗೆ ಅದು ಕಾದಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಆ ಜಾಹೀರಾತುಗಳಿಗೆ ಕಳೆದ 9 ತಿಂಗಳಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದ ಮುಂದೆ ಇಡಬೇಕೆಂದು ಮನವಿ ಮಾಡುತ್ತೇನೆ. ಆ ಜಾಹೀರಾತುಗಳಿಗೆ ಕೊಟ್ಟ ಹಣವನ್ನು ಬಹುಶಃ ಯಾವುದಾದರೊಂದು ಜಿಲ್ಲೆಯ ಸಣ್ಣ ಕುಡಿಯುವ ನೀರಿನ ಯೋಜನೆಗೋ ಅಥವಾ ಯಾವುದಾದರೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಶಾಶ್ವತವಾದ ಕಾರ್ಯಕ್ರಮ ಮಾಡಿದ್ದರೆ ರಾಜ್ಯದ ಜನರು ಮೆಚ್ಚಿಕೊಳ್ಳುತ್ತಿದ್ದರೆಂದು ಹೇಳಬಯಸುತ್ತೇನೆ. ಅದೇ ರೀತಿ ನಂಜುಂಡಪ್ಪ ವರದಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರ ಕೊಡುವಾಗ ಮಾಹಿತಿ ಕೊಡಬೇಕೆಂದು ಮನವಿ ಸಲ್ಲಿಸುತ್ತೇನೆ. ಸಾವಯವ ಕೃಷಿಗೆ ಕಳೆದ ಬಾರಿ 100 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದರು. ನೀವು ಕೊಟ್ಟಿರುವ ಇವತ್ತಿನ report ತೆಗೆದು ನೋಡಿದರೆ ಅದಕ್ಕೆ ಇನ್ನೂ 2 ಕೋಟಿ ರೂಪಾಯಿ ಸಹ ಬಿಡುಗಡೆಯಾಗಿಲ್ಲದಿರುವುದು ಕಂಡುಬರುತ್ತದೆ. ಇನ್ನೂ ಅದಕ್ಕೆ ರೂಪುರೇಷೆಗಳನ್ನು ಸಿದ್ಧಮಾಡುತ್ತಿದ್ದೇವೆಂದು ಹೇಳಿದ್ದೀರಿ. ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ನಾನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಏನೋ ಒಂದು ಸಂದರ್ಭದಲ್ಲಿ ಅನಿವಾರ್ಯವಾಗಿ ನಾವು ನೀವು ಇಬ್ಬರೂ ಸೇರಿ ಸಮ್ಮಿಶ್ರ ಸರ್ಕಾರ ನಡೆಸಿದೆವು. ಈಗ ನೀವು ಕರ್ನಾಟಕದ ಚಿತ್ರಣ ಬದಲಾವಣೆ ಮಾಡಲಿಕ್ಕೆ ಕೃಷಿ ಮಿಷನ್ 2020 ಎಂದು ಹೇಳುತ್ತಿದ್ದೀರಿ. ಆಗ ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ ನಾವೂ ನೀವು ಸೇರಿ 2006ರಲ್ಲಿ ರಾಜ್ಯದಲ್ಲಿ Agriculture Policy ಅನ್ನು ಜನತೆಯ ಮುಂದಿಟ್ಟೆವು. ಅದಕ್ಕೆ ನೀವೂ ಸಹ ಪಾಲುದಾರರಿದ್ದೀರಿ. ಈ ರಾಜ್ಯಕ್ಕೆ Agriculture Policy ಅನ್ನು ಆ ಸಂದರ್ಭದಲ್ಲಿ ಅಳವಡಿಸಬೇಕೆಂದು ನಾವು ಏನು ತಂದೆವು, ಅದನ್ನಾದರೂ ಸರಿಯಾದ ರೀತಿಯಲ್ಲಿ implement ಮಾಡಿದ್ದರೆ ಕೃಷಿ ಇಲಾಖೆಯಲ್ಲಿ ಎಷ್ಟೋ ಅನುಕೂಲಗಳು ಆಗುತ್ತಿದ್ದವು ಎನ್ನುವುದನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಅದೇ ರೀತಿ ಸಮ್ಮಿಶ್ರ ಸರ್ಕಾರ ನಡೆಸಿದ ಸಂದರ್ಭದಲ್ಲಿ ಈಗಿನ ಮುಖ್ಯಮಂತ್ರಿಗಳು ಆಗಿನ ಸಂವಾದ ಕಾರ್ಯಕ್ರಮಕ್ಕೆ ಬರಲಿಲ್ಲ. ಆ ಕಾರ್ಯಕ್ರಮದಲ್ಲಿ ಈ ರಾಜ್ಯದ ಎಲ್ಲಾ ರೈತರುಗಳು ಸೇರಿ ಅಂದು ಕೆಲವು ಸಲಹೆಗಳನ್ನು ಕೊಟ್ಟ ಆಧಾರದ ಮೇಲೆ ನಾವು ಇವತ್ತಿನ ಆರ್ಥಿಕ ಇಲಾಖಾ ಪ್ರಧಾನ

ಕಾರ್ಯದರ್ಶಿಯವರ ನೇತೃತ್ವದಲ್ಲಿ ಹಲವಾರು agricultural experts ಅನ್ನು, ಹಲವಾರು ಇಲಾಖೆಗಳ Principal Secretaryಗಳನ್ನು ಆ ಒಂದು ಕಮಿಟಿಗೆ ನೇಮಿಸಿದ್ದು ಆ ಕಮಿಟಿ ಒಂದು ರಿಪೋರ್ಟ್ ಕೊಟ್ಟಿತ್ತು. ಆ ಕಮಿಟಿ ರಿಪೋರ್ಟ್ ಅನ್ನು ಮತ್ತು ನಮ್ಮ Agriculture Policy ಅನ್ನು ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರವೇ ಮೆಚ್ಚಿಕೊಂಡಿತ್ತು. 2006ರ ಸಂದರ್ಭದಲ್ಲಿ ನಾವೇನು ಪಾಲಿಸಿ ತಂದಿದ್ದೆವು, ಆ ಸಂಬಂಧ ಬಂದ ಒಂದು article ಅನ್ನು ಹೇಳಬಯಸುತ್ತೇನೆ. S.L. Rao ಎನ್ನುವವರು Plan for progress ಎಂದು ಒಂದು article ಬರೆದಿದ್ದಾರೆ. Agriculture Policy ಅನ್ನು ನಾವೇನು introduce ಮಾಡಿದೆವು, ಅದರ ಆಧಾರದ ಮೇಲೆ ಹಲವಾರು ವಿಷಯಗಳನ್ನು ಅವರು ಪ್ರಸ್ತಾಪಿಸಿದ್ದಾರೆ. "The Karnataka Agriculture Policy of 2006 has many practical suggestions to achieve 4.5% growth" ಎಂದು ಆ ಸಂದರ್ಭದಲ್ಲಿ ನಾವು Agriculture Policy ಅನ್ನು ತಂದ ಹಿನ್ನೆಲೆಯೊಳಗೆ ಒಬ್ಬರು comment ಮಾಡುತ್ತಾರೆ, ಅದರಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಹೇಳುವುದಿಲ್ಲ. ನಾವು ಇವತ್ತು agriculture ನಲ್ಲಿ 4.5% growth ಕಾಣಬೇಕೆಂದು ಹೇಳುತ್ತೇವೆ. ನೀವೇ ಸದನಕ್ಕೆ ಕೊಟ್ಟ ಮಾಹಿತಿ ಪ್ರಕಾರ two point something ನಾವು ಕುಸಿತ ಕಂಡಿದ್ದೇವೆ. ಇದಕ್ಕೆ ಏನು ಕಾರಣ? ನೀವು ರೈತರಿಗೆ 3% ಬಡ್ಡಿ ದರದಲ್ಲಿ ಸಾಲ ಕೊಡುವ ಯೋಜನೆಯನ್ನು ನಾವು ತಂದು ವಿಕ್ರಮ ಮಾಡಿದ್ದೇವೆ, ದೇಶದಲ್ಲಿ ಯಾರೂ ಈ ತರಹ ಮಾಡಲಿಲ್ಲ ಎಂದು ಹೇಳಿದ್ದೀರಿ. ಆದರೆ, ಈ ವರ್ಷ ಏಕೆ ಆಹಾರ ಉತ್ಪಾದನೆಯಲ್ಲಿ ಕಡಿತವಾಗಿದೆ? Agricultureಗೆ ಇಷ್ಟೊಂದು ಒತ್ತು ಕೊಟ್ಟು ರೈತರ ಮಗನಾಗಿ ನಾನು ಸರ್ಕಾರ ನಡೆಸುತ್ತಿದ್ದೇನೆ, ರೈತರಿಗೆ ಅನಾನುಕೂಲವಾದರೆ ನಾನು ಒಂದು ಸೆಕೆಂಡ್ ಸಹ ಅಧಿಕಾರದಲ್ಲಿರುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ, ಇವತ್ತು ನೀವು ಗ್ರಾಮೀಣ ಅಭಿವೃದ್ಧಿ ಯೋಜನೆಗೆ ಕೊಟ್ಟಿರುವುದನ್ನು ನಿಮ್ಮ ಗಮನಕ್ಕೆ ತರುವುದಾದರೆ ಬಜೆಟ್ ಭಾಷಣದ 16ನೇ ಪುಟದಲ್ಲಿ ಹೇಳಿರುವ ಹಾಗೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ 3063 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ, ಅನುಬಂಧ–1ರಲ್ಲಿ ನೋಡಿದರೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಯೋಜನಾ ವೆಚ್ಚ 1502 ಕೋಟಿ ರೂಪಾಯಿ ಎಂದು ಇದೆ. ಸರ್ಕಾರ ಇಲ್ಲಿ ಕೊಡುವ ಮಾಹಿತಿಗಳನ್ನು ನೋಡಿದಾಗ ಯಾವ ರೀತಿ ಜನರನ್ನು ದಿಕ್ಕು ತಪ್ಪಿಸಲಿಕ್ಕೆ ಹೊರಟಿದ್ದಾರೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಸಾವಯವ ಕೃಷಿಗೆ ಜನರನ್ನು educate ಮಾಡುತ್ತೇವೆ, ನಾವೆಲ್ಲ ಸಾವಯವ ಕೃಷಿಗೆ ಹೋಗುವ ಮುಖಾಂತರ ಆಹಾರೋತ್ಪಾದನೆಯಲ್ಲಿ ದಾಖಲೆ ನಿರ್ಮಾಣ ಮಾಡುವ ಕಡೆಗೆ ಗಮನಕೊಡಬೇಕೆಂದು ಹೇಳಿದ್ದೀರಿ, ಕಾರ್ಯಕ್ರಮ ಹಾಕಿದ್ದೀರಿ. ಯಾವ ಆಧಾರದ

ಮೇಲೆ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೀರಿ? ಬೆಂಗಳೂರು ನಗರದಲ್ಲಿ ಡಾ: ಅಬ್ದುಲ್ ಕಲಾಂರವರನ್ನು ಕರೆಸಿ ಅವರ ಮೂಲಕ ಕೃಷಿಗೆ ಸಂಬಂಧಿಸಿದಂತೆ ಪ್ರಮಾಣವಚನ ಸ್ವೀಕಾರ ಮಾಡುವ ಸಮಾರಂಭ ಮಾಡಿದ್ದೀರಿ. ಒಳ್ಳೆಯ ಉದ್ದೇಶವಿಟ್ಟುಕೊಂಡು ಮಾಡಿದ್ದರೆ ನಾನು ನಿಮಗೆ ಅಭಿನಂದಿಸುತ್ತೇನೆ. ಡಾ: ಅಬ್ದುಲ್ ಕಲಾಂರವರನ್ನು ದಿಕ್ಕು ತಪ್ಪಿಸಿ ನೀವು ಕೇಸರೀಕರಣ ಮಾಡಲಿಕ್ಕೆ ಹೊರಟದ್ದಿರೋ ಏನೋ ಗೊತ್ತಿಲ್ಲ. ಸಾವಯವ ಕೃಷಿಗೆ ಉತ್ತೇಜನ ಕೊಡುತ್ತೇವೆಂದು ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ವಿಧಾನಸೌಧದ ಮುಂದೆ ಕರೆಸಿ ಪ್ರಮಾಣ ವಚನ ಸ್ವೀಕಾರ ಮಾಡಿಸಿ ಅವರನ್ನೂ ದಿಕ್ಕುತಪ್ಪಿಸುವ ಕೆಲಸಕ್ಕೆ ಕೈಹಾಕಿ ಅವರಿಗಿರುವ ಹೆಸರನ್ನು ಉಳಿಸುತ್ತೀರೋ, ಬೆಳೆಸುತ್ತೀರೋ ಎನ್ನುವುದನ್ನು ಮುಂದಿನ ದಿನಗಳಲ್ಲಿ ಕಾದು ನೋಡಬೇಕಾಗುತ್ತದೆ. ಸಾವಯವ ಕೃಷಿ ಮಿಷನ್ ಮಾಡಿ ಯಾರೋ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡಿದ್ದೀರಿ. ಅವರ background ಏನು? ಎನ್ನುವುದನ್ನು ಸದನದ ಮುಂದಿಡಬೇಕಾಗುತ್ತದೆ. ಯಾವ ಆಧಾರದ ಮೇಲೆ ಆ ಸಾವಯವ ಕೃಷಿಗೆ ಪ್ರೋತ್ಸಾಹ ಕೊಡುವುದಕ್ಕೆ ಒಂದು ಕಮಿಟಿ ಮಾಡಿಕೊಂಡಿದ್ದೀರಿ, ಆ ಕಮಿಟಿಗೆ ಯಾವ ಆಧಾರದ ಮೇಲೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡಿದ್ದೀರಿ? ಅವರ ಹಿನ್ನೆಲೆ ಏನು ಎಂಬುದನ್ನು ಸದನದ ಮುಂದೆ ತರಬೇಕೆಂದು ಹೇಳಬಯಸುತ್ತೇನೆ. ಯಾವ ಆಧಾರದ ಮೇಲೆ 2000 ರೂಪಾಯಿ ಕೊಡುತ್ತೇವೆಂದು ಹೇಳಿದಿರಿ? ಅದನ್ನು ಯಾವ ಹಳ್ಳಿಗಾದರೂ ಕೊಟ್ಟಿರುವುದು ನಮ್ಮ ಗಮನಕ್ಕಂತೂ ಬಂದಿಲ್ಲ. ಕಳೆದ ಬಾರಿ 100 ಕೋಟಿ ರೂಪಾಯಿ ಎಂದು ಹೇಳಿದಿರಿ. ವಿಧಾನಸೌಧದ ಮುಂದೆ ಭಾಷಣ ಮಾಡುತ್ತಾ ಈ ವರ್ಷ ಸಾವಯವ ಕೃಷಿಗೆ ಉತ್ತೇಜನ ಕೊಡಲಿಕ್ಕೆ 200 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದಿರಿ. ಆದರೆ, ಇಲ್ಲಿ ಮತ್ತೆ 100 ಕೋಟಿ ರೂಪಾಯಿ ಎಂದು ಪುನರುಚ್ಚಾರ ಮಾಡಿಕೊಂಡಿದ್ದೀರಿ. ಇವತ್ತು ನೀವು ಕೃಷಿ ವಿಶ್ವವಿದ್ಯಾನಿಲಯ, ತೋಟಗಾರಿಕಾ ವಿಶ್ವವಿದ್ಯಾನಿಲಯ ಮಾಡುತ್ತೇನೆಂದು ಹೇಳಿದಿರಿ. ನಾನು ಸದನದ ಗಮನಕ್ಕೆ ತರಬಯಸುವುದೇನೆಂದರೆ, ವಿಶ್ವವಿದ್ಯಾನಿಲಯಗಳನ್ನು ಜಿಲ್ಲೆ ಜಿಲ್ಲೆಗಳಲ್ಲಿ ಪ್ರಾರಂಭ ಮಾಡುವುದರ ಮುಖಾಂತರ ಅದರ ಘನತೆಯನ್ನು ಉಳಿಸುತ್ತೀರಾ? ಎಂದು ಕೇಳಬಯಸುತ್ತೇನೆ. ನನಗೆ ತಿಳಿದಿರುವ ಹಾಗೆ, ಆಕಸ್ಮಿಕವಾಗಿ ರಾಜ್ಯದ ಆಡಳಿತ ನಡೆಸುವ ಸಂದರ್ಭ ಸಿಕ್ಕಾಗ ಆ ಸಂದರ್ಭದಲ್ಲಿ ಕೇಂದ್ರದ ಕೃಷಿ ಸಚಿವರನ್ನು ಹಲವಾರು ಭೇಟಿ ಮಾಡಿದಾಗ ಅವರು ನೀವು ಕೃಷಿ ವಿಶ್ವವಿದ್ಯಾನಿಲಯವನ್ನು, ತೋಟಗಾರಿಕಾ ವಿಶ್ವವಿದ್ಯಾನಿಲಯವನ್ನು ಮಾಡುವುದಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿರುವ ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳೇನಿವೆ, ಇಡೀ ರಾಷ್ಟ್ರದಲ್ಲಿ ಪಂಜಾಬ್‌ನ ಲೂಧಿಯಾನದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯ, ತಮಿಳುನಾಡಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯ ಮೊದಲನೇ ಸ್ಥಾನದಲ್ಲಿ ಏನಿವೆ, ಅವುಗಳಿಗಿಂತಲೂ ಉತ್ತಮವಾದ ರೀತಿಯಲ್ಲಿ ನೀವು ಕೆಲಸ ನಿರ್ವಹಣೆ ಮಾಡುವುದಕ್ಕೆ ಧಾರವಾಡ ಮತ್ತು ಬೆಂಗಳೂರಿನ ಕೃಷಿ

LQ-V.S-F.4

ವಿಶ್ವವಿದ್ಯಾನಿಲಯಗಳು ಏನು ಎರಡನೇ ಸ್ಥಾನದಲ್ಲಿವೆ, ಇವುಗಳಿಗೆ ಹೆಚ್ಚಿನ ಹಣವನ್ನು ಕೊಡುವ ಮೂಲಕ ಸಂಶೋಧನೆಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ಮೂಲಕ ಕಾರ್ಯಕ್ರಮವನ್ನು ತೆಗೆದುಕೊಂಡು ಬನ್ನಿ, ಅತಿಯಾಗಿ ನೀವು ಪ್ರತಿ ಜಿಲ್ಲೆಗಳಲ್ಲಿ ಈ ರೀತಿ ವಿಶ್ವವಿದ್ಯಾನಿಲಯಗಳನ್ನು ಮಾಡುವುದರಿಂದ ಯಾವುದೇ ಸಾಧನೆ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳಿದರು. ನೀವು ಇವತ್ತು ಈ ವಿಶ್ವವಿದ್ಯಾನಿಲಯಗಳ ಬಗ್ಗೆ ಚರ್ಚೆ ಮಾಡುತ್ತೀರಿ. ನಾನು ಸದನದಲ್ಲಿ ನಿಮ್ಮ ಮುಂದೆ ಒಂದು ಪ್ರಶ್ನೆ ಇಡಲು ಬಯಸುತ್ತಿದ್ದೇನೆ. ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಎರಡು ಸಂಸ್ಥೆಗಳೇನಿವೆ, ಅವುಗಳಿಂದ ಈ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುವುದಕ್ಕೆ ನೀವು ಅನುಮತಿ ಪಡೆದಿದ್ದೀರಾ? ಎನ್ನುವ ಬಗ್ಗೆ ಸದನಕ್ಕೆ ಹೇಳಬೇಕಾಗುತ್ತದೆ. ಏಕೆಂದರೆ, ಆ ಎರಡು ಸಂಸ್ಥೆಗಳೇನಿವೆ, ಅವು ಇನ್ನೂ ಇದಕ್ಕೆ permission ಕೊಟ್ಟಿವೆಯೋ, ಇಲ್ಲವೋ ಗೊತ್ತಿಲ್ಲ. ನೀವು 5 ಕೋಟಿ, 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. IARA and ICAR ಸಂಸ್ಥೆಗಳೇನಿವೆ, ಅವುಗಳಿಂದ ಒಪ್ಪಿಗೆ ಪಡೆಯಬೇಕಾಗುತ್ತದೆ. Governor ಹತ್ತಿರ ಏನು ಚರ್ಚೆ ಮಾಡಿದ್ದೀರೋ ಗೊತ್ತಿಲ್ಲ. Governor ರವರು ಇದಕ್ಕೆ ಕುಲಪತಿಗಳಾಗಿದ್ದಾರೆ. ಈ ತೀರ್ಮಾನಗಳನ್ನೆಲ್ಲ ಮಾಡಬೇಕಾದರೆ ಅವರ ಘನತೆಯನ್ನು ಎಷ್ಟು ಉಳಿಸಿದ್ದೀರೋ ಗೊತ್ತಿಲ್ಲ. ಇದನ್ನು ಕಾನೂನು ಬದ್ಧವಾಗಿ ಮಾಡುವುದಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಸದನದ ಗಮನಕ್ಕೆ ತರಬೇಕೆಂದು ಹೇಳಬಯಸುತ್ತೇನೆ. ಮಂಡ್ಯ ವಿ.ಸಿ.ಫಾರಂ ಪಾಳುಬಿದ್ದಿದೆ. ಹಿಂದೆ ಆ ಸಂಸ್ಥೆಯಿಂದ ಹಲವಾರು ರೀತಿಯ ಭತ್ತದ ಬೀಜ ಸಂಶೋಧನೆಗಳು ಏನು ನಡೆದವು, ಆ ರೀತಿಯ ಕಾರ್ಯಕ್ರಮಗಳಿಗೆ ಯಾವುದೇ ರೀತಿ ಹಣ ಕೊಡುವ ವ್ಯವಸ್ಥೆ ಮಾಡಲಿಲ್ಲ. ಕೃಷಿ ವಿಶ್ವವಿದ್ಯಾನಿಲಯವನ್ನು ರಾಯಚೂರಿನಲ್ಲಿ ಮತ್ತು ಇನ್ನೆಲ್ಲೋ ಒಂದು ಕಡೆ ಮಾಡುತ್ತೇವೆಂದು ಹೇಳಿದಿರಿ. ಬೀದರ್‌ನಲ್ಲಿ ಪಶುವಿಶ್ವವಿದ್ಯಾನಿಲಯ ಮಾಡಿದ್ದೀರಿ. ಎಷ್ಟು ಜನರು ಅಲ್ಲಿ ವಾಸವಿದ್ದಾರೆ?

12–30PM

ಅದರ ಕ್ವಾಲಿಟಿಗಳೇನಾಗುತ್ತದೆ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ ಎಂದು ಕೇಳಬಯಸುತ್ತೇನೆ. ಕೃಷಿ ವಿಶ್ವ ವಿದ್ಯಾನಿಲಯಗಳಿಗೆ ಹಣ ಕೊಟ್ಟು ಈ ಸಂಸ್ಥೆಗಳಿಂದ ರೈತರಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ತಂದಿದ್ದರೆ ನಿಜಕ್ಕೂ ರೈತರಿಗೆ ಅನುಕೂಲವಾಗುವುದಕ್ಕೆ ಅವಕಾಶಗಳಿದ್ದವು. ಆದರೆ, ನೀವು ಈ ರೀತಿಯ ವಿಶ್ವ ವಿದ್ಯಾನಿಲಯಗಳನ್ನು ಪ್ರಾರಂಭಿಸುವುದರಿಂದ ಕೆಲವು ಭಾಗದ ಜನರನ್ನು, ನಿಮ್ಮ ಭಾಗಕ್ಕೆ ಇಂಥದ್ದು ಕೊಟ್ಟಿದ್ದೇವೆಂದು ಹೇಳಿ ಅವರನ್ನು ಖುಷಿಪಡಿಸಿ ಮತ ಪಡೆಯಲಿಕ್ಕೆ ಈ ಕಾರ್ಯಕ್ರಮಗಳು ಇರುತ್ತವೆಯೇ ಹೊರತು ಜನಕ್ಕೆ ಆ ಕಾರ್ಯಕ್ರಮಗಳು ತಲುಪುವುದಿಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ

ಕಾಲದಲ್ಲಿ ಕೇಂದ್ರ ಸರ್ಕಾರದಿಂದ RKVY ಎನ್ನುವ ಏನು ಸ್ಕೀಂ ಇತ್ತು, ಆ ಸ್ಕೀಂ ನಲ್ಲಿ ಸುಮಾರು 170 ಕೋಟಿ ಹಣ ತರುವ ವ್ಯವಸ್ಥೆ ಮಾಡಿದ್ದೆವು. ಅದರಲ್ಲಿ ಸುಮಾರು 110 ಕೋಟಿ ಹಣ ಕೊಟ್ಟಿದ್ದಾರೆ, ಇನ್ನು 60 ಕೋಟಿ ಹಣ ಬಿಡುಗಡೆಯಾಗಿಲ್ಲ. ಈ ಹಣ ತರಲಿಕ್ಕೆ ಏನು ಪ್ರಯತ್ನ ಪಟ್ಟಿದ್ದೀರಿ, ಗೊತ್ತಿಲ್ಲ. ಆ ಬಗ್ಗೆ ಮಾಹಿತಿಗಳು ಇಲ್ಲ. ಈ ಸ್ಕೀಂ ನಲ್ಲಿ ಹಣ ಬರುವುದಕ್ಕೆ ಏನು ಅವಕಾಶಗಳಿವೆ, ಕೇಂದ್ರ ಸರ್ಕಾರದ ಮುಂದೆ ಹೋಗಿ ಈ ಸ್ಕೀಂ ನಿಂದ ಹಣ ತರುವುದಕ್ಕೆ ಏನು ಕಾರ್ಯಕ್ರಮ ರೂಪಿಸಿಕೊಂಡಿದ್ದೀರೋ ಗೊತ್ತಿಲ್ಲ. ಕೇಂದ್ರ ಸರ್ಕಾರದವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅನ್ನು ಪ್ರಾರಂಭಿಸಿದರು. ಇದರಡಿ ಬರುವ ಸ್ಕೀಂ ನಲ್ಲಿ ಇವತ್ತು ಯಾವ ರೀತಿಯ ಕಾರ್ಯಕ್ರಮಗಳನ್ನು ತೋಟಗಾರಿಕೆ ಇಲಾಖೆಗೆ ಕಾರ್ಯಕ್ರಮ ತರುತ್ತಿದ್ದೀರೋ ಏನೂ ಮಾಹಿತಿಗಳು ಇಲ್ಲ. ನಮ್ಮ `ಕರಡಿ ಸಂಗಣ್ಣನವರು ಪ್ರಶ್ನೋತ್ತರ ವೇಳೆಯಲ್ಲಿ ದಾಳಿಂಬೆ ಬೆಳೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇವತ್ತು ದಾಳಿಂಬೆ ಬೆಳೆ ನಾಶವಾಗುತ್ತಿದೆ. ಅದರಲ್ಲೂ ಉತ್ತರ ಕರ್ನಾಟಕದ ಜನತೆಗೆ ನಾವೇ ವಾರಸುದಾರರು ಎನ್ನುವ ಮಾತನ್ನು ನೀವು ಏನು ಹೇಳಿದ್ದೀರಿ, ಇವತ್ತು ಉತ್ತರ ಕರ್ನಾಟಕದ ಪ್ರಮುಖ ತೋಟಗಾರಿಕೆ ಬೆಳೆಯಾದ ದಾಳಿಂಬೆಗೆ ಹೊರ ದೇಶದಲ್ಲಿ ಹೆಚ್ಚಿನ ಬೇಡಿಕೆ ಇದೆ. ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ರೈತರನ್ನು ತೋಟಗಾರಿಕೆಗೆ ಸಂಬಂಧಪಟ್ಟ ಬೆಳೆಗಳನ್ನು ಬೆಳೆಯಲಿಕ್ಕೆ ವಿಶೇಷವಾದ ಆರ್ಥಿಕ ನೆರವನ್ನು ಕೊಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇವತ್ತು ದಾಳಿಂಬೆ ಬೆಳೆ ನಾಶವಾಗುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದವರು ಹಣ ಕೊಡುವ ಕಾರ್ಯಕ್ರಮವನ್ನು ತಂದಿದ್ದಾರೆ. ಆ ಹಣವನ್ನು ಸಂಪೂರ್ಣವಾಗಿ ಪಡೆಯಲು ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ಕೊಡುವುದರ ಬಗ್ಗೆ ನೀವು ಚರ್ಚೆ ಮಾಡುತ್ತಿಲ್ಲ. ಕೇವಲ ತೋರ್ಪಡಿಕೆಗೆ ಕೃಷಿ ಇಲಾಖೆಯನ್ನು ದೊಡ್ಡ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೇವೆಂದು ಇಲ್ಲಿ ಎಲ್ಲಾ ಭಾಷಣ ಮಾಡುತ್ತೀರಿ. ಹಸಿರು ಟವಲ್ ಹಾಕಿಕೊಂಡು ಸಾರ್ವಜನಿಕ ಸಭೆಗಳಲ್ಲಿ ನಾನು ರೈತರ ಮಗ ಎಂದು ಹೇಳುತ್ತೀರಿ. ಆದರೆ ಹಸಿರು ಟವಲ್ ನಿಮ್ಮ ಭುಜದ ಮೇಲೆ ರಾರಾಜಿಸುತ್ತದೆ. ಹಳ್ಳಿಗಳಿಗೆ ಹೋಗಿ ಅಲ್ಲಿ ಪರಿಸ್ಥಿತಿಯನ್ನು ನೋಡಿದರೆ ಅಲ್ಲಿ ಒಣಗಿ ನಿಂತಿರತಕ್ಕಂಥದ್ದನ್ನು ನಾವು ಗಮನಿಸಬಹುದು. ಯಾವುದು ಅವಶ್ಯಕತೆ ಇಲ್ಲದೇ ಇರುವ ಕೆಲವು ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ತಾತ್ಕಾಲಿಕವಾಗಿ ರೈತರನ್ನು ಖುಷಿಪಡಿಸತಕ್ಕಂಥದ್ದಾಗಲಿ, ಈ ರಾಜ್ಯದ ಜನರನ್ನು ಖುಷಿಪಡಿಸತಕ್ಕಂಥ ಕೆಲಸಕ್ಕೆ ದಯವಿಟ್ಟು ಕೈ ಹಾಕಬೇಡಿ. ಶಾಶ್ವತವಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ದಯವಿಟ್ಟು ಗಮನ ಕೊಡಿ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಹಾಲು ಉತ್ಪಾದನೆಗೆ ಎರಡು ರೂಪಾಯಿ ಪ್ರೋತ್ಸಾಹ ಧನವೆಂದು ಕೊಟ್ಟಿದ್ದಾರೆ. ಇದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ ನನಗೆ ಗೊತ್ತಾಗುತ್ತಿಲ್ಲ. ಆ ಕೆಎಂಎಫ್ ವಿಷಯದಲ್ಲಿ ಒಂದು ರೀತಿಯ ಘರ್ಷಣೆ ಏನು ನಡೆಯುತ್ತಿದೆ, ಈ

ಘರ್ಷಣೆಯನ್ನು ನಿಲ್ಲಿಸುವುದಕ್ಕೆ ನೀವು ಕೆಲವು ತೀರ್ಮಾನಗಳನ್ನು ಮಾಡಬೇಕಾದರೆ ದ್ವೇಷದ ರಾಜಕಾರಣ ಮಾಡುವುದು ಬೇಕಾಗಿಲ್ಲ. ಹದಿಮೂರು ಹಾಲು ಒಕ್ಕೂಟಗಳು ಲಾಸ್‌ನಲ್ಲಿದ್ದವು. ಸಂಪೂರ್ಣ ನಷ್ಟದಲ್ಲಿದ್ದಂಥ ಸಂಸ್ಥೆಗಳು ಇವತ್ತು ದೊಡ್ಡ ಮಟ್ಟಕ್ಕೆ ಬೆಳೆಯಬೇಕಾದರೆ ಹಲವಾರು ಜನರ ಸೇವೆ ಅದರಲ್ಲಿದೆ. ನೀವು ಎರಡು ರೂಪಾಯಿ ಕೊಡುತ್ತೇವೆ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಹೊಸದಾಗಿ ಒಂದು ಸಾವಿರ ಸಹಕಾರ ಸಂಘಗಳ ಡೈರಿಗಳನ್ನು ಹುಟ್ಟು ಹಾಕುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಪಕ್ಕದ ರಾಜ್ಯವಾದ ಆಂಧ್ರದ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಆಂಧ್ರ ಸರ್ಕಾರದ ಸ್ವಾಮ್ಯದಲ್ಲಿದ್ದಂಥ ಒಂದು ವಿಜಯ ಡೈರಿ ಏನಿತ್ತು, ಅದು ಒಂದು ಕಾಲದಲ್ಲಿ ಚೆನ್ನಾಗಿ ನಡೆಯುತ್ತಿದ್ದಂಥದ್ದನ್ನು ಒಂದು ಖಾಸಗಿ 'ಹೆಸರಿನಲ್ಲಿ ಡೈರಿಯನ್ನು ಪ್ರಾರಂಭಿಸಿ ತಾತ್ಕಾಲಿಕವಾಗಿ ಅವರಿಗೆ ಸರ್ಕಾರದ ಸ್ವಾಮ್ಯದ ಡೈರಿಗೆ ಕೊಡುತ್ತಿರುವುದಕ್ಕಿಂತ ಎರಡು ರೂಪಾಯಿ ಜಾಸ್ತಿ ಕೊಡುತ್ತೇವೆ ಎಂದು ಆಂಧ್ರದಲ್ಲಿ ಇದೇ ರೀತಿ ಒಂದು ಖಾಸಗಿ ಡೈರಿಯನ್ನು ಪ್ರಾರಂಭಿಸಿದರು. ನಂತರ ಸರ್ಕಾರಿ ಸ್ವಾಮ್ಯದ ಡೈರಿ ನಾಶವಾಗಿ ಅದರ ಚಟುವಟಿಕೆ ಸಂಪೂರ್ಣವಾಗಿ ನಿಲ್ಲಿಸಿತಕ್ಕಂಥ ವಾತಾವರಣ ನಿರ್ಮಾಣವಾದ ಮೇಲೆ ಪ್ರೋತ್ಸಾಹ ಧನ ಎರಡು ರೂಪಾಯಿ ಹೆಚ್ಚಿಗೆ ದರ ಏನು ಕೊಟ್ಟರು, ಅದನ್ನು ಮತ್ತೆ ಇಳಿಸತಕ್ಕಂಥ ಕೆಲಸ ಆಂಧ್ರದಲ್ಲಿ ಆಗಿ ಇವತ್ತು ಹೈನುಗಾರಿಕೆಗೆ ಸಂಪೂರ್ಣವಾಗಿ ಪೆಟ್ಟೇನು ಕೊಟ್ಟಿದ್ದಾರೆ, ಅಂಥ ವಾತಾವರಣ ನಿರ್ಮಾಣ ಮಾಡಲಿಕ್ಕೆ ಕ್ಷುಲ್ಲಕ ರಾಜಕಾರಣ ಮಾಡಲಿಕ್ಕೆ ಹೋಗಬೇಡಿ ಎಂದು ಆಂಧ್ರ ದ ಉದಾಹರಣೆಯನ್ನು ಸಭೆಯ ಗಮನಕ್ಕೆ ತರುವುದರ ಮೂಲಕ ಈ ವಿಷಯ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹಲವಾರು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ದಾವಣಗೆರೆಯಲ್ಲೂ ಹೊಸ ವಿಶ್ವ ವಿದ್ಯಾನಿಲಯ, ತುಮಕೂರಿಗೂ ಹತ್ತು ಕೋಟಿ ಕೊಡುತ್ತೇವೆಂದು ಹೇಳಿದಿರಿ. ತುಮಕೂರಿನಲ್ಲಿ ಇನ್ನೂ ಜಾಗ ಹುಡುಕಿಲ್ಲ. ತುಮಕೂರು ವಿಶ್ವ ವಿದ್ಯಾನಿಲಯ ಕೆಲಸ ಮಾಡಲಿಕ್ಕೆ ಇನ್ನೂ ಜಾಗದ ವ್ಯವಸ್ಥೆಯಾಗಲಿಲ್ಲ. ನನ್ನ ಕಾಲದಲ್ಲಿ ಜಿಲ್ಲಾಧಿಕಾರಿಗಳ ಹತ್ತಿರ ಗಲಾಟೆ ಮಾಡಿ ಯಾವುದೋ ಎರಡು ಜಾಗ ಹುಡುಕಿ ಸರ್ಕಾರಕ್ಕೆ ಪ್ರಸ್ತಾವನೆ ತನ್ನಿ ಎಂದು ಇಪ್ಪತ್ತು ತಿಂಗಳು ಬಡಕೊಂಡರೂ ಆ ಪ್ರಸ್ತಾವನೆ ತರಲಿಲ್ಲ. ಅಲ್ಲಿ ಏನಾದರೂ ಜಾಗ ಗುರುತಿಸಿದ್ದಾರೆಯೇ ಎಂದು ಮಾನ್ಯ ಜಯಚಂದ್ರರವರು ಹೇಳಬೇಕು. ತುಮಕೂರು ವಿಶ್ವ ವಿದ್ಯಾನಿಲಯಕ್ಕೆ ಹತ್ತು ಕೋಟಿ ರೂಪಾಯಿ ಯಾವುದಕ್ಕೆ ಕೊಡುತ್ತಿದ್ದೀರಿ? ಪಾಪ! ಅದಕ್ಕೆ ಏಕೆ ಆ ಪುಣ್ಯಾತ್ಮ ಸ್ವಾಮೀಜಿಯವರ ಹೆಸರು ಇಡುತ್ತಿದ್ದೀರಿ? ನೀವು infrastructure ಅನ್ನು build up ಮಾಡದೇ ಅದಕ್ಕೆ ಶಿವಕುಮಾರ ಸ್ವಾಮಿಗಳ ಹೆಸರನ್ನು ಇಟ್ಟು ಅವರ ಹೆಸರಿಗೆ ಕಳಂಕ ತರುವ ಕೆಲಸಕ್ಕೆ ಕೈ ಹಾಕಬೇಡಿ. ನೀವು ಇನ್ನು ಜಾಗದ ಸಮಸ್ಯೆಯನ್ನೇ ಪರಿಹರಿಸಿಕೊಂಡಿಲ್ಲ. ಅವರು ಹೆಸರು ಇಡುವುದಕ್ಕೆ ತರಾತುರಿಯಲ್ಲಿ ತೀರ್ಮಾನಿಸಿದ್ದೀರಿ. ಅಲ್ಲಿ ಹತ್ತು ಕೋಟಿ ಹಣವನ್ನು ಯಾವುದಕ್ಕೆ ಖರ್ಚು ಮಾಡುತ್ತೀರಿ? ನಾನು ಇದನ್ನು ಸರ್ಕಾರದ

ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಏಕೆಂದರೆ, ವಿಶ್ವ ವಿದ್ಯಾನಿಲಯಗಳನ್ನು ಜಿಲ್ಲೆಗೊಂದೊಂದು ಮಾಡಿ ಅದರ ಪಾವಿತ್ರ್ಯತೆಯನ್ನು ಹಾಳು ಮಾಡುವ ಕೆಲಸಕ್ಕೆ ಕೈ ಹಾಕಬೇಡಿ ಎಂದು ಸರ್ಕಾರಕ್ಕೆ ಮನವಿ ಮಾಡಬಯಸುತ್ತೇನೆ. ಇರುವಂಥ ವಿಶ್ವ ವಿದ್ಯಾನಿಲಯಗಳಿಗೆ ಸರಿಯಾದ ಹಣ ಕೊಡುವುದರ ಮೂಲಕ ಅದರಿಂದ ಒಳ್ಳೆಯ ಕೆಲಸ ತೆಗೆಯುವುದಕ್ಕೆ ಮತ್ತು ಶಿಕ್ಷಣ ಕ್ಷೇತ್ರದ ಗೌರವ ಮತ್ತು ಶಿಸ್ತನ್ನು ಕಾಪಾಡುವುದಕ್ಕೆ ಗಮನ ಕೊಟ್ಟಾಗ ವಿಶ್ವ ವಿದ್ಯಾನಿಲಯಗಳು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಪ್ರತಿ ಜಿಲ್ಲೆಗೆ ವಿಶ್ವ ವಿದ್ಯಾನಿಲಯಗಳನ್ನು ಪ್ರಾರಂಭ ಮಾಡಿಕೊಂಡು ಹೋದರೆ, ಅಂತಿಮವಾಗಿ ಯಾವ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ? ಹಾಸನದಲ್ಲಿ ಒಂದು ಕಾಲದಲ್ಲಿ ಕೃಷಿ ಕಾಲೇಜು ಮಾಡಬೇಕೆಂದು ತೀರ್ಮಾನಿಸಿದಿರಿ, ಅಲ್ಲಿ ಯಾವ infrastructures ಇಲ್ಲ. ಹಾಸನ ಕೃಷಿ ಕಾಲೇಜಿಗೆಂದು ಪ್ರವೇಶ ಮಾಡಿಕೊಳ್ಳುವುದು, ಆ ಹುಡುಗರು ವಿದ್ಯೆ ಕಲಿಯುವುದಕ್ಕೆ ಬೆಂಗಳೂರಿಗೆ ಬರಬೇಕು. ಅಲ್ಲಿ ಯಾವ infrastructures ಇಲ್ಲ. ನನಗೇನೋ ಒಂದು ಅವಕಾಶ ಸಿಕ್ಕಿತು, ಆಗ ನೀವು ಮತ್ತು ಸದನ ಸಹಕಾರ ಕೊಟ್ಟಿತು, ಅಲ್ಲಿ ಏನೋ ಒಂದು ಲೆವಲ್‌ಗೆ infrastructure buildup ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಪಟ್ಟೆವು. ಇವತ್ತು ಕಾಲೇಜುಗಳನ್ನು ಪ್ರಾರಂಭಿಸಬೇಕಾದರೆ, ಇವತ್ತೇನು ನೀವು ಕೋಲಾರದಲ್ಲಿ ತೋಟಗಾರಿಕೆ ಕಾಲೇಜು ಮಾಡುತ್ತೇವೆಂದು ಹೇಳಿದಿರಿ, ಕಾಲೇಜು ಪ್ರಾರಂಭಿಸುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ, ವಿಶ್ವ ವಿದ್ಯಾನಿಲಯಗಳನ್ನು ಜಿಲ್ಲೆಗೊಂದೊಂದು ಮಾಡುವುದಕ್ಕೆ ಹೋಗಿ ಶಿಕ್ಷಣ ಇಲಾಖೆಯ ಮೌಲ್ಯಗಳನ್ನು ಹಾಳು ಮಾಡುವುದಕ್ಕೆ ಹೋಗಬೇಡಿ ಎಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡುವುದಕ್ಕೆ ಬಯಸುತ್ತೇನೆ. ಲೋಕಸಭೆಯ ಚುನಾವಣೆಯ ಹಿನ್ನೆಲೆಯೊಳಗೆ ತರಾತುರಿಯ ನಿರ್ಧಾರಗಳನ್ನು ಮಾಡುತ್ತಿದ್ದೀರಿ, ಶಂಕುಸ್ಥಾಪನೆಗಳನ್ನು ನೆರವೇರಿಸುತ್ತಿದ್ದೀರಿ. ಭದ್ರಾ ಮೇಲ್ದಂಡೆ ಯೋಜನೆಗೆ ನಾವು ನೀವು ಇಬ್ಬರೂ ಸೇರಿಕೊಂಡು ಸಮ್ಮಿಶ್ರ ಸರಕಾರ ನಡೆಸಬೇಕಾದರೆ ಒಂದು ಬಾರಿ ಸಚಿವ ಸಂಪುಟದಲ್ಲಿ ನಾವು ಒಪ್ಪಿಗೆ ಕೊಟ್ಟಿದ್ದೆವು. ಮತ್ತೆ ಇನ್ನೊಂದು ಬಾರಿ ಸಚಿವ ಸಂಪುಟಕ್ಕೆ ಅದನ್ನು ತಂದು ಮತ್ತೆ ಇನ್ನೊಂದು ಬಾರಿ ಅದಕ್ಕೆ ಒಪ್ಪಿಗೆ ಕೊಟ್ಟು ನಮ್ಮ ಸರ್ಕಾರದಲ್ಲಿ ಮಾಡಿದ್ದೇವೆ ಎನ್ನುವ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಹೊರಟಿದ್ದೀರಿ. ಅಲ್ಲಿ ಹೋಗಿ ಭಾಷಣ ಮಾಡುತ್ತೀರಿ. ಇವತ್ತು 500 ಕೋಟಿ ಕೊಡುತ್ತೇವೆಂದು ಹೇಳಿದ್ದೀರಿ. ಆ ಒಂದು ಯೋಜನಾ ವೆಚ್ಚ ಏನಾಗಬಹುದು? ಎಷ್ಟು ವರ್ಷದಲ್ಲಿ ಅದನ್ನು ಮುಗಿಸುತ್ತೀರಿ? ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಕ್ಕೆ ತಂದು ಕುಡಿಯುವ ನೀರನ್ನು ಕೊಡುತ್ತೇವೆ, ಯಾರೂ ಈ ಸಾಧನೆ ಮಾಡಿಲ್ಲ, ನಾನು ಮಾಡಿ ತೋರಿಸಿದ್ದೇವೆಂದು ಹೇಳುತ್ತೀರಿ. ಇದು ನಿಮ್ಮ ಸಾಧನೆ ಅಲ್ಲ, ಸಮ್ಮಿಶ್ರ ಸರಕಾರದಲ್ಲಿ ತೆಗೆದುಕೊಂಡಿರತಕ್ಕಂಥ ನಿರ್ಧಾರ. ಆ ನಿರ್ಧಾರ ತೆಗೆದುಕೊಂಡಾಗಲೂ ಕೋಲಾರ ಮತ್ತು ತುಮಕೂರು ಜಿಲ್ಲೆಯ ಹಲವಾರು ಜನ

ಪ್ರತಿನಿಧಿಗಳು ವಿರೋಧ ವ್ಯಕ್ತಪಡಿಸಿದರು. ಈ ಯೋಜನೆಗಳಿಂದ ನಿಮಗೆ ಅನುಕೂಲಗಳಾಗುವುದಿಲ್ಲ, ಈ ಯೋಜನೆಯಿಂದ ಕೇವಲ ಕೆಲವು ಭಾಗಗಳಿಗೆ ಅನುಕೂಲವಾಗುತ್ತದೆ ಈ ಕಾರ್ಯಕ್ರಮ ಸಾಧುವಲ್ಲ ಎನ್ನುವ ವಿರೋಧವನ್ನು ವ್ಯಕ್ತಪಡಿಸಿದರು. ಆ ಸಂದರ್ಭದಲ್ಲಿ ವಿಧಾನ ಸೌಧದಲ್ಲಿ ಎರಡು ಮೂರು ಸಭೆಗಳನ್ನು ಕರೆದೆವು. ಆಗ ಅಲ್ಲಿ ಹಲವಾರು ವಿಷಯಗಳ ಬಗ್ಗೆ ಚರ್ಚೆಗಳಾದವು. ಇವತ್ತು ನೀವು 500 ಕೋಟಿ ಹಣ ಇಡುವುದರಿಂದ ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಗೊತ್ತಿಲ್ಲ. ಲೋಕಸಭಾ ಚುನಾವಣೆಯಾದ ಮೇಲೆ ಈ ಕಾಮಗಾರಿ ಕತೆ ಏನಾಗುತ್ತದೆಯೋ ಅದು ನನಗೆ ಗೊತ್ತಿಲ್ಲ. ಲೋಕಸಭಾ ಚುನಾವಣಾ ದೃಷ್ಟಿಯಿಂದ ತರಾತುರಿಯಲ್ಲಿ ಈ ಕಾರ್ಯಕ್ರಮವನ್ನು ನೀವು ತರುತ್ತಿದ್ದೀರಿ ಎನ್ನುವುದು ನನ್ನ ಅಭಿಪ್ರಾಯ. ಇವತ್ತು ನೀರಾವರಿ ಇಲಾಖೆಯ ವಿಷಯದಲ್ಲಿ ಹೇಳಿದ್ದೀರಿ. ಒಂದು ಕಡೆ ನೀರಾವರಿಗೆ ಹೆಚ್ಚಿನ ಹಣ ಕೊಟ್ಟಿದ್ದೇವೆಂದು ಹೇಳುತ್ತೀರಿ. 4714 ಕೋಟಿ ಎಂದು ಪುಟ 16 ರಲ್ಲಿ ಹೇಳುತ್ತೀರಿ. ಯೋಜನಾ ಹಂಚಿಕೆಯಲ್ಲಿ ತೆಗೆದುಕೊಂಡರೆ ಅಲ್ಲಿ 3983 ಕೋಟಿ ಎಂದು ಅಲ್ಲಿ ಹೇಳುತ್ತಾರೆ. ಯಾವುದು ಸರಿ? ಯಾವುದು ತಪ್ಪು? ಸರ್ಕಾರದ ಅಯವ್ಯಯದಲ್ಲಿ ಸ್ಪಷ್ಟವಾದ ಮಾಹಿತಿಯನ್ನು ಕೊಡುವುದು ನಿಮ್ಮ ಕರ್ತವ್ಯ. ಈ ಸಾರಿಯ ಬಜೆಟ್‌ನ್ನು ತರಾತುರಿಯಲ್ಲಿ ಯಾವ ರೀತಿಯಾಗಿ ಮಾಡಿದ್ದಾರೆಂಬುದರ ಬಗ್ಗೆ ಒಂದು ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ಆರೋಗ್ಯ ಕವಚದ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿತ್ತು. ಮಾನ್ಯ ಶಿವಲಿಂಗೇಗೌಡರು ಇಲ್ಲಿಯೇ ಕುಳಿತಿರಬೇಕು. ಇದೊಂದು ಲೂಟಿ ಹೊಡೆಯುವ ಕಾರ್ಯಕ್ರಮವೆಂದು ಈಗಾಗಲೇ ಅವರು ಹೇಳಿದ್ದಾರೆ. ಆರೋಗ್ಯ ಕವಚದ ಬಗ್ಗೆ ಪುಟ ಸಂಖ್ಯೆ 11ರಲ್ಲಿ ಏನು ಹೇಳಿದ್ದಾರೆಂದರೆ, ದೂರವಾಣಿಗೆ 9,41,666 ಸಹಾಯಕ್ಕಾಗಿ ಕರೆಗಳು ಬಂದಿವೆ. 11,468 ಜನರ ಜೀವಗಳನ್ನು ಉಳಿಸಿದ್ದೇವೆಂದು ಹೇಳಿದ್ದಾರೆ. ಆದರೆ, 8800 ಜನರಿಗೆ ಜೀವ ಉಳಿಸಿದ್ದೇವೆಂದು ಇದೇ ಪುಸ್ತಕದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿರುವ ಕಡೆ ಹೇಳಿದ್ದಾರೆ. ಅಂದರೆ, ಇದೇ ಪುಸ್ತಕದಲ್ಲಿ ಎರಡು ರೀತಿಯ ವಿಷಯಗಳನ್ನು ಕೊಟ್ಟಿದ್ದೀರಿ. ಇದರಲ್ಲಿ ಯಾವುದು ಸರಿಯೆಂದು ನಾವು ತೀರ್ಮಾನಕ್ಕೆ ಬರಬೇಕು? ಈ ಬಜೆಟ್‌ನ್ನು ತರಾತುರಿಯಲ್ಲಿ ಮಾಡಿ ಲೋಕಸಭೆ ಚುನಾವಣೆಗೆ ಜನರನ್ನು ದಿಕ್ಕು ತಪ್ಪಿಸುವುದಕ್ಕೆ ಮಾಡಿರತಕ್ಕಂಥ ಬಜೆಟ್ ಎಂದು ಈ ಬುಕ್‌ನಲ್ಲಿರತಕ್ಕಂಥ ಅಂಶವನ್ನು ನೋಡಿದರೆ ಗೊತ್ತಾಗುತ್ತದೆ. ಮತ್ತೆ ಪ್ರಾಥಮಿಕ ಶಿಕ್ಷಣಕ್ಕೆ 8888 ಕೋಟಿ ರೂಪಾಯಿಗಳೆಂದು ಹೇಳಿ ದಿಕ್ಕು ತಪ್ಪಿಸಿದ್ದಾರೆ. ಆರೋಗ್ಯ ಕವಚ ಯೋಜನೆ ಬಗ್ಗೆ ಪುಟ ಸಂಖ್ಯೆ 31ರಲ್ಲಿ ಏನು ಹೇಳಿದ್ದಾರೆಂದರೆ, 8,15,658 ದೂರವಾಣಿ ಕರೆಗಳು ಬಂದಿದ್ದು, 8832 ಜನರ ಜೀವಗಳನ್ನು ಉಳಿಸಲಾಗಿದೆಯೆಂದು ಹೇಳಿದ್ದಾರೆ. ಬಂದು ಕಡೆ 11 ಸಾವಿರ ಎಂದು ಹೇಳಿ ಇಲ್ಲಿ 8 ಸಾವಿರ ಎಂದು ಹೇಳಿದ್ದಾರೆ. ಈ ಬುಕ್‌ನಲ್ಲಿಯೇ ಇಷ್ಟೊಂದು ವ್ಯತ್ಯಾಸಗಳಿವೆ. ಆಹಾರಪಡಿತರದ್ದು ಕೂಡ ಒಂದು ಪ್ರಮುಖವಾದಂಥ ವಿಷಯವಾಗಿದೆ.

ಆಹಾರಪಡಿತರಕ್ಕೆಂದು 750 ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದಾರೆ. ಈ ವಿಷಯದ ಬಗ್ಗೆ ನನಗಿಂತ ಮಾನ್ಯ ಮಹದೇವಪ್ರಸಾದ್‌ರವರಿಗೆ ಚೆನ್ನಾಗಿ ಗೊತ್ತಿರಬೇಕು. ಏಕೆಂದರೆ, ಅವರು ಆಹಾರ ಇಲಾಖೆಯ ಸಚಿವರಾಗಿ ಹೊಸ ಸಿಸ್ಟಮ್ ತರಬೇಕೆಂದು ಹೋಗಿದ್ದರು. ಇದರಲ್ಲಿ ಅವರು ಏನು ಹೇಳಿದ್ದಾರೆಂದರೆ, ಈ ವರ್ಷ ಆಹಾರ ಪಡಿತರ ವ್ಯವಸ್ಥೆಗೆ 750 ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ಅಂತ್ಯೋದಯ, ಅಕ್ಷಯ ಕಾರ್ಯಕ್ರಮದಡಿಯಲ್ಲಿ 78 ಲಕ್ಷ ಜನರಿಗೆ ಬಿಪಿಎಲ್ ಕಾರ್ಡ್‌ನ್ನು ಕೊಟ್ಟಿದ್ದೇವೆ. ಈಗ ಹೊಸದಾಗಿ ನೆಮ್ಮದಿ ಕೇಂದ್ರಗಳಲ್ಲಿ ತರಾತುರಿಯಲ್ಲಿ ಒಂದು ತೀರ್ಮಾನ ಮಾಡಿದ್ದೀರಿ. ಅದೇನೆಂದರೆ, ಎಲ್ಲರೂ ಹೋಗಿ 40 ಅಥವಾ 50 ರೂಪಾಯಿ ಕೊಟ್ಟು ಒಂದು ಅಫಿಡೆವಿಟ್ ಮಾಡಿಸಿ ಯಾರ್‍ಯಾರು ಕೊಡುತ್ತೀರೊ ಅವರೆಲ್ಲರಿಗೂ ಕೂಡ ಕಾರ್ಡ್ ಕೊಡುತ್ತೇವೆಂದು ಅಲ್ಲಿ ಹೇಳಿದ್ದಾರೆ. ಇದರಲ್ಲಿ 38 ಲಕ್ಷ ಅರ್ಜಿಗಳು ಈಗಾಗಲೇ ಬಂದಿವೆ. ಆದರೆ, ಈ 38 ಲಕ್ಷ ಜನರಿಗೆ ನೀವು ತಾತ್ಕಾಲಿಕ ಪಡಿತರ ಚೀಟಿಯನ್ನು ಕೊಡುತ್ತಿದ್ದೀರಿ. ತಾತ್ಕಾಲಿಕವೆಂದು ಕಾರ್ಡ್ ಮೇಲೆ ಪ್ರಿಂಟ್ ಮಾಡುತ್ತಿದ್ದೀರಿ. ಕೇವಲ ಮತ ಪಡೆಯುವುದಕ್ಕೆ ಜನರಿಗೆ ದಿಕ್ಕು ತಪ್ಪಿಸಿ ಬೀದಿಗೆ ತಂದು ನಿಲ್ಲಿಸುತ್ತಿದ್ದೀರೆಂದು ಇದರಿಂದ ನಾವು ಹೇಳಬೇಕಾಗುತ್ತದೆ. ಪಡಿತರಕ್ಕಾಗಿ 750 ಕೋಟಿ ಇಟ್ಟಿದ್ದೀರಿ. ಆದರೆ, ಈಗ ಹೊಸದಾಗಿ 38 ಲಕ್ಷ ಜನರಿಗೆ ಪಡಿತರ ಚೀಟಿಗಳನ್ನು ಕೊಟ್ಟ ನಂತರ ಇವರಿಗೆ ಅಕ್ಕಿ ಕೊಡುವುದಕ್ಕೆ ಹಣ ಎಲ್ಲಿಟ್ಟಿದ್ದೀರಿ? 38 ಲಕ್ಷ ಜನರಿಗೆ ನೀವು ಅಕ್ಕಿ ಕೊಡುವುದಾದರೆ ಇದಕ್ಕಾಗಿ ನಿಮ್ಮ ಬಜೆಟ್‌ನಲ್ಲಿ ಹಣ ಎಲ್ಲಿದೆ?

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, 38 ಲಕ್ಷ ಜನರಲ್ಲಿ ಈಗ 24 ಲಕ್ಷ ಜನರಿಗೆ ತಾತ್ಕಾಲಿಕ ಪಡಿತರ ಕಾರ್ಡ್‌ನ್ನು ಕೊಟ್ಟಿದ್ದಾರೆ. ಇವರಿಗೆ ಆಹಾರಧಾನ್ಯವನ್ನು ತಕ್ಷಣ ಕೊಡಲೇ ಬೇಕಾಗುತ್ತದೆ. ಆದರೆ, ಈಗ ಕೊಡಬೇಕೆಂಬ ಸಂದರ್ಭದಲ್ಲಿ ಅವರಿಗೆ ನಿನ್ನೆದಿವಸ ಒಂದು ಡೈರೆಕ್ಷನ್ ಹೋಗಿದೆ. ಏನೆಂದರೆ, ಇದರಲ್ಲಿ ಎಷ್ಟು ಜನ ಅರ್ಹರು ಎಷ್ಟು ಜನ ಅನರ್ಹರೆಂದು 15 ದಿವಸದೊಳಗಾಗಿ ವರದಿ ಕೊಡಬೇಕೆಂದು ವಿಲೇಜ್ ಅಕೌಂಟೆಂಟ್‌ಗಳಿಗೆ ತಿಳಿಸಿದ್ದಾರೆ. 38 ಲಕ್ಷ ಜನರಲ್ಲಿ ಈಗ 24 ಲಕ್ಷ ಜನರಿಗೆ ಕೊಡುತ್ತಿರಬಹುದು. ಆದರೆ, ಕೊನೆಗೆ ಇವರು 7 ರಿಂದ 8 ಲಕ್ಷ ಜನರಿಗೆ ತಂದು ನಿಲ್ಲಿಸುತ್ತಾರೆ. ದಯಮಾಡಿ ಈ ರೀತಿಯಾಗಬಾರದು. ಒಂದು ಸಾರಿ ಅಫಿಡೆವಿಟ್ ತೆಗೆದುಕೊಂಡು ಅವರಿಗೆ ಆಹಾರಧಾನ್ಯವನ್ನು ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಾಗ ಅವರಿಗೆ ಆಹಾರಧಾನ್ಯವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿ. ಆದರೆ, ineligible ಇರುವವರನ್ನು ತೆಗೆದು ಮಾಡುವುದಕ್ಕೆ ಅವಕಾಶ ಇದೆ. 15 ದಿವಸ ಇದನ್ನು ಮಾಡಿ ಆ ಮೇಲೆ ಫುಡ್ ಕೊಡುತ್ತೇವೆಂಬ ನಿಲುವಿಗೆ ಹೋದರೆ ಖಂಡಿತಾ ಇದು ಸರಿಯಾಗುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ತನಿಖೆಯನ್ನು ಅನಂತರ ಮಾಡಿಸುತ್ತೇನೆ. ಆದರೆ, ಮಾರ್ಚ್ 1ನೇ ತಾರೀಖಿನಿಂದ ಯಾರ್ಯಾರು ನೆಮ್ಮದಿ ಕೇಂದ್ರಕ್ಕೆ ಹೋಗಿದ್ದಾರೆಯೋ ಅವರಿಗೆಲ್ಲರಿಗೂ ಅಕ್ಕಿ ಕೊಡುತ್ತೇನೆಂದು ಬೆಳಗಾಂ ಅಧಿವೇಶನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕಮಿಟ್ ಆಗಿದ್ದಾರೆ. ಆದ್ದರಿಂದ, ಮಾರ್ಚ್ 1ನೇ ತಾರೀಖಿನಿಂದ ಅವರು 38 ಲಕ್ಷ ಜನರಿಗೆ ಅಕ್ಕಿಯನ್ನು ಕೊಡಲೇಬೇಕಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಇವರು ಕೇವಲ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜನರನ್ನು ದಿಕ್ಕು ತಪ್ಪಿಸತಕ್ಕಂಥ ಕಾರ್ಯಕ್ರಮಗಳನ್ನು ಮಾಡಿದ್ದಾರಷ್ಟೆ. ನಾನು ಹಳ್ಳಿಗಳಿಗೆ ಪ್ರವಾಸ ಮಾಡುವಂಥ ಸಂದರ್ಭದಲ್ಲಿ ಒಬ್ಬ ಅಧಿಕಾರಿ ನನ್ನ ಹತ್ತಿರ ಏನು ಹೇಳಿದರೆಂದರೆ, ಈಗ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಆದರೆ ಚುನಾವಣೆಯಾದ ಮೇಲೆ ಕಿತ್ತು ಹಾಕುತ್ತಾರೆ. ಆಗ ನಾವು ಜನರ ಕೈಯಲ್ಲಿ ಹೊಡಿಸಿಕೊಳ್ಳಬೇಕೆಂದು ಹೇಳಿದರು. ಚುನಾವಣೆಗೋಸ್ಕರ ಏನು ಕೇಳುತ್ತಾರೆಯೋ ಅದನ್ನು ಕೊಟ್ಟುಬಿಡಿ, ಚುನಾವಣೆಯಾದಮೇಲೆ ನೋಡಿಕೊಳ್ಳೋಣವೆಂದು ಹೇಳಿದ್ದಾರೆಂದು ಅಧಿಕಾರಿ ನನ್ನ ಹತ್ತಿರ ಹೇಳಿದ್ದಾರೆ. ಇದೆಲ್ಲಾ ಸರ್ಕಾರದ ಸಾಧನೆಗಳು. ಬಜೆಟ್‌ನಲ್ಲಿ 750 ಕೋಟಿ ರೂಪಾಯಿ ತೋರಿಸಿದ್ದಾರೆ. ನಮ್ಮ ಕಾಲದಲ್ಲಿ 2.25 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಕೇಂದ್ರದಿಂದ ಬರುತ್ತಿತ್ತು. ಆದರೆ, ಈಗ 1.25 ಲಕ್ಷ ಮೆಟ್ರಿಕ್ ಟನ್‌ಗೆ ಇಳಿಸಿದ್ದಾರೆ. ನಾವು ದುಡ್ಡು ಕೊಡುತ್ತೇವೆಂದು ಹೇಳಿದರೂ ಕೂಡ ನಿಮಗೆ ಅಕ್ಕಿ ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ನಿಮ್ಮ ಲಿಮಿಟೇಷನ್ ಕೇವಲ 31% ಎಂದು ಹೇಳುತ್ತಿದ್ದಾರೆ. ಇದರ ಮೇಲೆ ನೀವು ಕಾರ್ಡ್ ಕೊಟ್ಟರೆ ನಾವು ಜವಾಬ್ದಾರರಲ್ಲ, ನೀವು ದುಡ್ಡು ಕೊಡುತ್ತೇವೆಂದು ಹೇಳಿದರೂ ಕೂಡ ನಾವು ಅಕ್ಕಿ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮಾನ್ಯ ಗೋವಿಂದ್ ಕಾರಜೋಳರವರಿಗೂ ಸಹ ಇದು ಗೊತ್ತಿದೆ. ಏಕೆಂದರೆ, ಅವರು ಕೂಡ 20 ತಿಂಗಳ ಅವಧಿಯವರೆಗೆ ಈ ಇಲಾಖೆಯ ಸಚಿವರಾಗಿದ್ದರು. ಆದ್ದರಿಂದ, ಪರಿಸ್ಥಿತಿ ಏನೆಂದು ಅವರಿಗೆ ಗೊತ್ತಿದೆ. ಆದ್ದರಿಂದ, ಏತಕ್ಕಾಗಿ ಸುಳ್ಳು ಹೇಳಬೇಕು. ಇವರಿಗೆಲ್ಲಾ ಕೊಡಬೇಕಾದರೆ, ಮತ್ತೆ ಸುಮಾರು 60 ಸಾವಿರ ಟನ್ ಹೆಚ್ಚುವರಿಯಾಗಿ ಅಕ್ಕಿ ಬೇಕಾಗುತ್ತದೆ. ನೀವು ಇದಕ್ಕಾಗಿ ಬಜೆಟ್‌ನಲ್ಲಿ ಹಣ ಇಟ್ಟಿಲ್ಲ. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕಾದರೆ ಮತ್ತೆ ಸುಮಾರು 400 ಕೋಟಿ ರೂಪಾಯಿ ಬೇಕಾಗುತ್ತದೆ. ಎಲ್ಲಿಂದ ಈ ಹಣ ತರುತ್ತೀರಿ? ಏತಕ್ಕಾಗಿ ಸುಳ್ಳು ಹೇಳುತ್ತೀರಿ? ಇರತಕ್ಕಂಥ ವಾಸ್ತವಾಂಶವನ್ನು ನಾನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರ ನಿಮಗೆ 49 ಸಾವಿರ ಲೀಟರ್ ಸೀಮೆಎಣ್ಣೆಯನ್ನು ಕೊಡುತ್ತಾರೆ. ಈಗ ಒಬ್ಬರಿಗೆ ನಾಲ್ಕು ಲೀಟರ್‌ನಂತೆ ಸೀಮೆಎಣ್ಣೆಯನ್ನು ಕೊಡುತ್ತಿದ್ದೀರಿ. ಆದರೆ, ಈಗ ಅದನ್ನು 2

ಲೀಟರ್‌ಗೆ ಇಳಿಸಬೇಕಾಗುತ್ತದೆ. ಒಂದು ಕಡೆ ವಿದ್ಯುಚ್ಛಕ್ತಿ ಸರಿಯಾಗಿ ಕೊಡುತ್ತಿಲ್ಲ. ಇಂಥದ್ದರಲ್ಲಿ ನೀವು ಸೀಮೆಎಣ್ಣೆಯನ್ನು ಸರಿಯಾಗಿ ಕೊಡದಿದ್ದರೆ ಹೇಗೆ? ಮತ್ತೆ ಇವರಿಗೆಲ್ಲ ಅಕ್ಕಿಯನ್ನು ಕೊಡಬೇಕಾದರೆ, ಮಾರುಕಟ್ಟೆಯಲ್ಲಿ 38 ರಿಂದ 40 ರೂಪಾಯಿ ಕೊಟ್ಟು ಅಕ್ಕಿಯನ್ನು ಖರೀದಿ ಮಾಡಬೇಕಾಗುತ್ತದೆ. ಈ ಕಾರ್ಯಕ್ರಮದ ಅಡಿಯಲ್ಲಿ ಬಾರದೇ ಇರತಕ್ಕಂಥ ಜನರಿಗೆ ಕೊಡುವುದಕ್ಕಾಗಿ ಇವರು ಮಾರುಕಟ್ಟೆಗೆ ಹೋಗಿ 40 ರೂಪಾಯಿಗೆ ಅಕ್ಕಿ ತೆಗೆದುಕೊಂಡರೆ ಮತ್ತೆ 10 ರೂಪಾಯಿ ಜಾಸ್ತಿಯಾಗುತ್ತದೆ. ನೀವು ಲೋಕಸಭೆ ಚುನಾವಣೆಯಲ್ಲಿ 20 ಸೀಟ್ ಗೆಲ್ಲಬೇಕಾಗಿದೆ. ನೀವು ಗೆದ್ದರೆ ನಮಗೂ ಸಂತೋಷ, ನಾವೇನು ಬೇಡವೆಂದು ಹೇಳುವುದಿಲ್ಲ. ಮಾನ್ಯ ಅಡ್ವಾನಿಯವರನ್ನು ನೀವು ಪ್ರಧಾನ ಮಂತ್ರಿಯಾಗಿ ಮಾಡಬೇಕು. ಅವರನ್ನು ಪ್ರಧಾನ ಮಂತ್ರಿ ಮಾಡಿ ಸಂತೋಷ, ನಾವೇನು ಬೇಡವೆಂದು ಹೇಳುವುದಿಲ್ಲ. ಆದರೆ, ಜನರನ್ನು ದಿಕ್ಕು ತಪ್ಪಿಸಿ 20 ಸೀಟ್ ಗೆಲ್ಲುತಕ್ಕಂಥ ಕೆಲಸಕ್ಕೆ ಹೋಗಬೇಡಿ. ಏಕೆಂದರೆ ಸುಳ್ಳು ಹೇಳಿಕೊಂಡು ಬಹಳ ದಿವಸ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಭಾಗದಲ್ಲಿ ಕುಳಿತುಕೊಂಡಿದ್ದಾಗ ಮತ್ತು ಆ ಕಡೆ ನನ್ನ ಪಕ್ಕದಲ್ಲಿ ಕುಳಿತುಕೊಂಡಾಗ ಒಂದು ಮಾತನ್ನು ಆಗಾಗ ಹೇಳುತ್ತಿದ್ದರು. ಅದೇನೆಂದರೆ, ನೀವುಗಳು ಹೊರಗಡೆ ಜನರ ಹತ್ತಿರ ಹೋದರೆ ದೊಣ್ಣೆ ಹಿಡಿದುಕೊಂಡು ಹೊಡೆಯುವುದಕ್ಕೆ ಓಡಿಸಿಕೊಂಡು ಬರುತ್ತಾರೆಂದು ಹೇಳುತ್ತಿದ್ದರು. ಈ ರೀತಿಯ ಕಾರ್ಯಕ್ರಮಗಳನ್ನು ಮಾಡುವುದರಿಂದ, ಆ ದೊಣ್ಣೆಯ ಪ್ರಯೋಗ ಮುಂದಿನ ದಿನಗಳಲ್ಲಿ ನಿಮ್ಮ ಮೇಲೆ ಪ್ರಯೋಗವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನನ್ನ ಬಜೆಟ್‌ನ್ನು ನೋಡಿ ವಿರೋಧಪಕ್ಷದವರಿಗೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಅವರೆಲ್ಲರೂ ಬಾಯಿ ಮುಚ್ಚಿಕೊಂಡು ಇದ್ದಾರೆ, ಅವರಿಗೆ ಉಸಿರೇ ಇಲ್ಲ, ಉಸಿರನ್ನು ಬಿಟ್ಟಿದ್ದಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆದಿವಸ ಇಲ್ಲಿ ಬಜೆಟ್ ಮಂಡನೆ ಮಾಡಿ ಶಿವಮೊಗ್ಗ, ದಾವಣಗೆರೆಯಲ್ಲಿ ಭಾಷಣ ಮಾಡುತ್ತಿದ್ದರು. ಇಂಥ ಬಜೆಟ್‌ನ್ನು ಮಂಡನೆ ಮಾಡಿ ನಮ್ಮ ಉಸಿರನ್ನು ನೀವು ತೆಗೆಯುವುದಲ್ಲ, ನೀವು ರಾಜ್ಯದ ಜನತೆಯ ಉಸಿರನ್ನು ನೀವು ಮುಗಿಸುತ್ತೀರಿ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಆಡಳಿತದಲ್ಲಿ ಒಂದು ದೊಡ್ಡ ಮಟ್ಟದಲ್ಲಿ ಸುಧಾರಣೆಯನ್ನು ಈ ಸರ್ಕಾರ ತರಬೇಕಾಗಿದೆ. ಆಡಳಿತದಲ್ಲಿ ಕೆಲವು ಸುಧಾರಣೆಗಳನ್ನು ಅನುಷ್ಠಾನ ಪರ್ವ ತರುವುದಕ್ಕೆ ಹೊರಟಿದ್ದಾರೆ. ಆಡಳಿತದಲ್ಲಿ ನೂತನ ವಿಚಾರಗಳ ಪ್ರಯೋಗಗಳನ್ನು ಪ್ರೋತ್ಸಾಹಿಸಲು 10 ಕೋಟಿ ರೂಪಾಯಿಗಳ ಒಂದು ಚಾಲೆಂಜ್ ಫಂಡ್ ಸ್ಥಾಪಿಸಲಾಗುವುದೆಂದು ಹೇಳಿದ್ದಾರೆ. ಇಲ್ಲಿ ಬಹಳ ಪ್ರಮುಖವಾದಂಥದ್ದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಆಡಳಿತದಲ್ಲಿ ನೂತನ ವಿಚಾರಗಳ ಪ್ರಯೋಗಗಳನ್ನು ಪ್ರೋತ್ಸಾಹ ಮಾಡುವುದಕ್ಕೆ 10 ಕೋಟಿ ರೂಪಾಯಿ ಇಟ್ಟಿದ್ದಾರೆ. ಮುಖ್ಯ ಮಂತ್ರಿಗಳ ಆಡಳಿತ ಯಾವ ರೀತಿಯಾಗಿದೆ

ಎಂಬ ಬಗ್ಗೆ ಇತ್ತೀಚೆಗೆ ಕೆಲವು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದನ್ನು ನಾನು ಗಮನಿಸಿದ್ದೇನೆ. ಇದಕ್ಕಾಗಿಯೇ ಪ್ರೋತ್ಸಾಹ ಕೊಡುವುದಕ್ಕಾಗಿ 10 ಕೋಟಿ ರೂಪಾಯಿ ಫಂಡ್ ಅನ್ನು ಇಟ್ಟಿರಬಹುದೆಂದು ನನ್ನ ಭಾವನೆಯಾಗಿದೆ.

"IAS ಅಧಿಕಾರಿಗಳಿಗೆ ಸರ್ಕಾರದ ಶ್ರೀರಕ್ಷೆ. ಜಕ್ಕೂರು ವೈಮಾನಿಕ ತರಬೇತಿ ಶಾಲೆಗೆ ಹೊರಗುತ್ತಿಗೆ ಪ್ರಕರಣ". ಇದಕ್ಕೆ 10 ಕೋಟಿ ರೂ.ಗಳನ್ನು ಇಟ್ಟಿದ್ದೀರಾ ಎಂದು ಸದನಕ್ಕೆ ಹೇಳಬೇಕಾಗುತ್ತದೆ. ದಿ:12.4.2008 ರಲ್ಲಿ ಯುವಜನ ಸೇವಾ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ವಿಧಾನಸೌಧದ ಅರಕ್ಷಕ ನಿರೀಕ್ಷಕರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ವಿಮಾನ ಹಾರಾಟ ತರಬೇತಿಯ ಹೊರಗುತ್ತಿಗೆಯನ್ನು ನೀಡುವಲ್ಲಿ ನಡೆದ ಕಡತದ ಹಾಳೆಯ ಕಳವು ಮತ್ತು ಫೋರ್ಜರಿಯ ಬಗ್ಗೆ. ಬಳ್ಳಾರಿಯವರು ಮಂತ್ರಿಗಳು ಯಾರೋ ಒಬ್ಬ ಸಣ್ಣಪುಟ್ಟ ಗುಮಾಸ್ತನನ್ನು suspend ಮಾಡುವುದಕ್ಕೆ ಹೋಗುತ್ತಾರೆ. ಸೇಠ್ ಎನ್ನುವ ಅಧಿಕಾರಿ ದಿ:14.8.2008 ರಲ್ಲಿ ಅಲ್ಲಿಗೆ ಕಾರ್ಯಕ್ಕೆ ಬರುತ್ತಾರೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಜಕ್ಕೂರು, ಇಲ್ಲಿ ವಿಮಾನ ಹಾರಾಟದ ಹೊರಗುತ್ತಿಗೆಯನ್ನು ನೀಡಲು ತೀರ್ಮಾನಿಸಿ ಆಸಕ್ತ ವ್ಯಕ್ತಿಗಳಿಂದ expression of interest ಕರೆಯಲಾಗಿತ್ತು. ಇದರಲ್ಲಿ ಮೂರು ಸಂಸ್ಥೆಗಳು ಮತ್ತು ಮೂರು ಜನ ವ್ಯಕ್ತಿಗಳು ವೈಮಾನಿಕ ಹಾರಾಟ ತರಬೇತಿಯನ್ನು ನಡೆಸಲು ಆಸಕ್ತಿ ಇರುವುದಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಇದರಲ್ಲಿ ಮೆ: SCT Institute of Technology, Bangalore ಇವರ ಗುತ್ತಿಗೆಯು ಅರ್ಹ ಇರುವುದಾಗಿ ಇವರಿಗೆ ವೈಮಾನಿಕ ತರಬೇತಿ ಶಾಲೆಯ ಹಾರಾಟದ operation ಮತ್ತು maintenance ಕಾರ್ಯನಿರ್ವಹಣೆ ಮಾಡಲು ಅನುಮೋದನೆಗಾಗಿ ದಿ:26.12.2007ರಂದು ಮಾನ್ಯ ಘನತೆವೆತ್ತ ರಾಜ್ಯಪಾಲರ ಸಲಹೆಗಾರರಿಗೆ ಕಡತವನ್ನು ಸಲ್ಲಿಸಲಾಗಿತ್ತು. ದಿ:29.1.2008 ರಂದು ಮಾನ್ಯ ಘನತೆವೆತ್ತ ರಾಜ್ಯಪಾಲರ ಸಲಹೆಗಾರರು ಮತ್ತು ಮಾನ್ಯ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿದಂತೆ ಇರುವ ಕಡತದಲ್ಲಿ ವಾಪಸ್ಸು ಬಂದ ಮೇಲೆ ಇದನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲಾಯಿತು. ಆರ್ಥಿಕ ಇಲಾಖೆಯು ದಿ:3.3.2008ರಲ್ಲಿ ಸಹಮತಿಯನ್ನು ನೀಡಿದ ಮೇಲೆ ದಿ:4.4.2008 ರಂದು ಸರ್ಕಾರಿ ಆದೇಶವನ್ನು ಹೊರಡಿಸಿ ವೈಮಾನಿಕ ತರಬೇತಿ ಶಾಲೆಯಲ್ಲಿ ಹಾರಾಟ ಚಟುವಟಿಕೆಯನ್ನು ನಡೆಸಲು operation and maintenance ಗಾಗಿ M/S SCT ಸಂಸ್ಥೆಯನ್ನು ಆಯ್ಕೆ ಮಾಡಲಾಯಿತು. ಆದೇಶ ಹೊರಡಿಸಿರುವ ಬಗ್ಗೆ ಮಾನ್ಯ ರಾಜ್ಯಪಾಲರ ಸಲಹೆಗಾರರ ಗಮನಕ್ಕೆ ಅದನ್ನು ತಂದಾಗ ಅವರು ಆಶ್ಚರ್ಯ ವ್ಯಕ್ತಪಡಿಸಿದ್ದಲ್ಲದೆ ಕಡತದಲ್ಲಿ ತಾವು ಷರಾ ನಮೂದಿಸಿದ್ದು ಪ್ರಸ್ತಾವನೆಗೆ ಅನುಮೋದನೆಯನ್ನು ನೀಡಿರುವುದಿಲ್ಲವೆಂದು ತಿಳಿಸಿದ ಮೇರೆಗೆ ಕಾರ್ಯದರ್ಶಿ, ಯುವಜನ ಸೇವಾ ಇಲಾಖೆ ಇವರ ಕಡತವನ್ನು ಪರಿಶೀಲಿಸಿದಾಗ ಕಡತದಲ್ಲಿ ಮಾನ್ಯ

ರಾಜ್ಯಪಾಲರ ಸಲಹೆಗಾರರ ಮತ್ತು ಮಾನ್ಯ ಘನತೆವೆತ್ತ ರಾಜ್ಯಪಾಲರ ಸಹಿ ಇರುವ ಟಿಪ್ಪಣಿ ಹಾಳೆಯು ಕಾಣೆಯಾಗಿತ್ತು. ಇದರ ಬಗ್ಗೆ ಕಛೇರಿಯ ಅಪರ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿಗಳಿಗೆ ಟಿಪ್ಪಣಿ ಸಲ್ಲಿಸಿ ಪತ್ತೆ ಹಚ್ಚಿ ವರದಿಯನ್ನು ಸಲ್ಲಿಸಲು ಕಾರ್ಯದರ್ಶಿಗಳು ಸೂಚಿಸಿದ್ದರು. ಪರಿಣಾಮವಾಗಿ ದಿ:25.3.2008 ರಂದು ಹಿಂದೆ ದಿ:4.3.2008 ರಲ್ಲಿ ಹೊರಡಿಸಿರುವ ಆದೇಶವನ್ನು ಹಿಂದಕ್ಕೆ ಪಡೆಯಲಾಗಿರುತ್ತದೆ. ಈ ನಡುವೆ ದಿ:27.3.2008 ರಂದು speed post ಮೂಲಕ ಶ್ರೀ ಭಾಸ್ಕರ್ ಎನ್ನುವಂಥ ವ್ಯಕ್ತಿ ಕಾರ್ಯದರ್ಶಿಯವರ ವಿಳಾಸಕ್ಕೆ ಕಳೆದು ಹೋದ ಟಿಪ್ಪಣಿ ಹಾಳೆಯ zerox ಪ್ರತಿಯನ್ನು ಕಳುಹಿಸಿರುತ್ತಾರೆ. ದಿ:28.3.2008 ರಂದು ಕಾರ್ಯದರ್ಶಿಗಳು ಈ ಎಲ್ಲಾ ಮಾಹಿತಿಗಳನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳಿಗೆ ಭೇಟಿ ಮಾಡಿ ವಿವರಿಸಿ ನಂತರ ಕಡತವನ್ನು ಸಲ್ಲಿಸಿದ್ದರು. ಮಾನ್ಯ ಮುಖ್ಯ ಕಾರ್ಯದರ್ಶಿಗಳು ಪೂರ್ವಭಾವಿ ವಿಚಾರಣೆಯನ್ನು ಶ್ರೀ ಸುಭೀರ್ ಹರಿಸಿಂಗ್, ಆಯುಕ್ತರು, ಬಿ.ಎಂ.ಆರ್.ಡಿ.ಎ ಇವರ ಮೂಲಕ ಮಾಡಿಸಿದ್ದು, ವಿಚಾರಣೆಯ ವರದಿಯಿಂದ ಮಾನ್ಯ ರಾಜ್ಯಪಾಲರ ಸಲಹೆಗಾರರು ಮತ್ತು ಘನತೆವೆತ್ತ ರಾಜ್ಯಪಾಲರ ಸಹಿಗಳನ್ನು ಫೋರ್ಜರಿ ಮಾಡಿರುವುದಾಗಿ ತಿಳಿದು ಬಂದಿರುತ್ತದೆ. ಮೇಲ್ಕಂಡ ಎಲ್ಲಾ ಮಾಹಿತಿಯನ್ನು ಕಡತ ಪರಿಶೀಲಿಸಿ ಅದರ ಪರಿಶೀಲನೆಯಿಂದ ಶ್ರೀ ಸುಭೀರ್ ಹರಿಸಿಂಗ್‌ರವರು ಸಲ್ಲಿಸಿರುವ ವಿಚಾರಣೆಯ ವರದಿಯ ಆಧಾರದ ಮೇಲೆ ಸಿದ್ಧಪಡಿಸಲಾಗಿದ್ದು, ಈ ವಿಷಯದಲ್ಲಿ M/S SCT ಸಂಸ್ಥೆಗೆ ಸಹಾಯ ಮಾಡುವ ದುರುದ್ದೇಶದಿಂದ ಹಲವಾರು ಸಿಬ್ಬಂದಿ ವರ್ಗದವರಿಂದ ವಂಚನೆ, ಮೋಸ ಮತ್ತು ಫೋರ್ಜರಿ ಬಗ್ಗೆ ನಡೆದಿರುವುದು ಕಂಡು ಬರುತ್ತದೆ. ಈ ವಿಷಯದ ಬಗ್ಗೆ ಅಪರಾಧ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಬೇಕೆಂದು ದೃಢಪಡಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇದೆಲ್ಲಾ ನಡೆಯುತ್ತದೆ. 5 ಅಧಿಕಾರಿಗಳು ಯಾರ್ಯಾರೆಂದರೆ, ಎ.ಎಸ್.ಶ್ರೀಕಾಂತ್, IAS., ಶ್ರೀ ಸೋಮ್ಲಾ ನಾಯಕ್, Director, GFTS, Jakkur, Bangalore, ಶ್ರೀಮತಿ ಕಮಲಮ್ಮ, ಅಧೀನ ಕಾರ್ಯದರ್ಶಿ, ದೇವರಾಜ, ಶಾಖಾಧಿಕಾರಿ, ಆರ್ಥಿಕ ವೆಚ್ಚ, ಡಿ.ಪಿ.ಆನಂದಮಣಿ ಶೀಘ್ರಲಿಪಿಗಾರರು, ಯುವಜನ ಸೇವಾ ಇಲಾಖೆ. Director General of Police, Intelligence ನಿಂದ ಮುಖ್ಯ ಕಾರ್ಯದರ್ಶಿಗಳಿಗೆ ದಿ:9.1.2009 ಕ್ಕೆ ಒಂದು ಪತ್ರ ಬರುತ್ತದೆ. ವಿಧಾನಸೌಧ, ಪೊಲೀಸ್ ಠಾಣೆ, ಮೊಹರು ನಂಬರ್ 1512008 ಕಲಂ 468, 420, 471, 201, 120 ಬಿ ಜೊತೆಗೆ 34 IPC ಮತ್ತು Karnataka Transparency in Public Procurement Act, 1999. ಪತ್ರವನ್ನು ಬರೆದು ಇವರ ಮೇಲೆ action ತೆಗೆದುಕೊಳ್ಳಲಿಕ್ಕೆ ಪತ್ರವನ್ನು ಬರೆದಿರುವುದು ಜನವರಿ ತಿಂಗಳಲ್ಲಿ, ಈಗ ಫೆಬ್ರವರಿ ತಿಂಗಳಲ್ಲಿದ್ದೇವೆ. ಎರಡು ತಿಂಗಳಿನಿಂದ ಕಡತ ಎಲ್ಲಿದೆ, ಇಂಥದ್ದಕ್ಕಾಗಿ 10 ಕೋಟಿ ರೂ.ಗಳನ್ನು ಇಡುತ್ತೀರಾ? ಇಂತಹ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಂದೆ ಯಾವ

ರೀತಿ ತರಬಹುದು ಕಾನೂನು ಬದ್ಧವಾಗಿ ಎಂದು ಹೇಳಿ, ಹೊಸ ಕಾನೂನು ತರಲಿಕ್ಕೆ ಇದನ್ನು ಇಟ್ಟಿದ್ದೀರಾ? ಆಡಳಿತ ಸುಧಾರಣೆಗಳು, ಬಗ್ಗೆ ಹೇಳುವುದಾದರೆ ಇನ್ನು ರಾಜ್ಯದಲ್ಲಿ ರಾಮನ ಹೆಸರಿನಲ್ಲಿ ಹಿಂದೆ ರಾಜಕೀಯವನ್ನು ಮಾಡಿದ್ದೀರಿ. ರಾಮರಾಜ್ಯವನ್ನು ತರುವುದಕ್ಕೆ ಇಷ್ಟೆಲ್ಲಾ ಅನುಷ್ಠಾನ ಪರ್ವ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆಂದು ಅಂದುಕೊಂಡಿದ್ದೆ. ಇನ್ನೊಂದು ಕೇಸ್‌ನಲ್ಲಿ; clear cut ಆಗಿ ಮುಖ್ಯ ಕಾರ್ಯದರ್ಶಿಗಳು, ಮತ್ತು DPAR, Additional Secretary ಶಶಿಧರ್ ಎಂದು ಇದ್ದಾರೆ. ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ, ಇವರು ಇಬ್ಬರು ಕೊಟ್ಟಿರುವಂಥ ಸಂಪೂರ್ಣ ಮಾಹಿತಿಯನ್ನು ನಾನು ಓದಬೇಕೆಂದು ಹೇಳಿದರೆ ಅದನ್ನು ಓದುತ್ತೇನೆ. ಇನ್ನೊಬ್ಬ IAS ಅಧಿಕಾರಿಯನ್ನು ರಕ್ಷಣೆ ಮಾಡುತ್ತೀರಿ. ಮಾನ್ಯ ಮುಖ್ಯಮಂತ್ರಿಗಳೇ over look ಮಾಡಿ ಸಹಿ ಹಾಕುತ್ತಾರೆ. ಎರಡು ಸಲ ಮುಖ್ಯ ಕಾರ್ಯದರ್ಶಿಗಳು ಫೈಲ್‌ನ್ನು ವಾಪಸ್ಸು ಕಳುಹಿಸುತ್ತಾರೆ. ನೀವು ಮಾಡುತ್ತಿರುವುದು ತಪ್ಪು ನಿರ್ಧಾರ. ಇಂಥದ್ದಕ್ಕೆ ನೀವು encouragement ಕೊಟ್ಟರೆ, ಮುಂದೆ ಇದೇ ತರಹ ಬೇರೆ ಅಧಿಕಾರಿಗಳು ಸ್ವೇಚ್ಚಾಚಾರವಾಗಿ ದುರುಪಯೋಗ ಪಡಿಸಿಕೊಳ್ಳುತ್ತಾರೆ ಎನ್ನತಕ್ಕಂಥದ್ದರ ಬಗ್ಗೆ ಎರಡು ಬಾರಿ ಕಡತದಲ್ಲಿ ಮುಖ್ಯ ಕಾರ್ಯದರ್ಶಿಗಳು ಮತ್ತು DPAR Secretary ಯವರು ಅನುಮೋದನೆ ಮಾಡಿ ಕಳುಹಿಸಿ ಕೊಡುತ್ತಾರೆ. ತಕ್ಷಣ ಕೊಟ್ಟಿರುವುದನ್ನು ಮುಖ್ಯ ಮಂತ್ರಿಗಳು ಅದನ್ನು over rule ಮಾಡಿ ತೀರ್ಮಾನ ಮಾಡುತ್ತಾರೆ. ಭ್ರಷ್ಟಾಚಾರ ಆರೋಪಕ್ಕೆ ಗುರಿಯಾಗಿ CBI ತನಿಖೆ ಎದುರಿಸುತ್ತಿರುವ IAS ಅಧಿಕಾರಿಯನ್ನು ಮುಖ್ಯಮಂತ್ರಿಯೇ ರಕ್ಷಿಸುತ್ತಿರುವುದು ಆತಂಕಕಾರಿ ವಿದ್ಯಮಾನ. "ಬೇಲಿಯೇ ಎದ್ದು ಹೊಲ ಮೇಯಿದಂತಿರುವ" ಈ ಪ್ರಕರಣದಲ್ಲಿ ಸರ್ಕಾರದ ಭಾರೀ ಮೊತ್ತದ ಹಣವನ್ನು ಸ್ವಂತ ಖಾತೆಗೆ ವರ್ಗಾಯಿಸಿ ಬಳಸಿಕೊಂಡು ಗಂಭೀರ ಆರೋಪಕ್ಕೆ ಗುರಿಯಾಗಿರುವ IAS ಅಧಿಕಾರಿ ಡಾ:ನಾಗಲಾಂಬಿಕಾದೇವಿ ವಿರುದ್ಧ ಇಲಾಖಾ ವಿಚಾರಣೆ ಕೈಬಿಡುವಂತೆ ಮಾನ್ಯ ಯಡಿಯೂರಪ್ಪನವರೇ ಆದೇಶವನ್ನು ಹೊರಡಿಸಿ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ." ಮಾನ್ಯ ರಾಜ್ಯಪಾಲರು ಶಿಸ್ತು ಕ್ರಮಕ್ಕೆ ಆದೇಶ ಮಾಡುತ್ತಾರೆ. ಇವತ್ತು ಈ ರೀತಿಯ ರಕ್ಷಣೆ ಕೊಡುತ್ತೀರಿ. ರಾಮನಗರದ ಬಗ್ಗೆ ಇವತ್ತಿನವರೆಗೆ ಉಸಿರೇ ಇಲ್ಲ. ರಾಮನಗರದಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯವನ್ನು ತರುವುದಕ್ಕೆ ತೀರ್ಮಾನ ಮಾಡಿಕೊಂಡಿರಿ. 30 ಕೋಟಿ ರೂ.ಗಳ ಹಣ ಹೇಗೆ ಕೊಟ್ಟಿರುತ್ತೀರಿ ಕಂಟ್ರಾಕ್ಟರಿಗೆ ಎಂದು ಹೇಳಿ ಇಬ್ಬರು ಇಂಜಿನಿಯರುಗಳನ್ನು Suspend ಮಾಡಿ ಇನ್ನೂ revoke ಮಾಡಲಿಲ್ಲ. ಅವರು 9 ತಿಂಗಳಾದರೂ ಬಿಟ್ಟಿ ಸಂಬಳವನ್ನು ತೆಗೆದುಕೊಂಡು ಮನೆಯಲ್ಲಿದ್ದಾರೆ. ಕಾನೂನು ವ್ಯಾಪ್ತಿಯೊಳಗೆ 30 ಕೋಟಿ ರೂ.ಗಳ advance payment ನ್ನು ಕಂಟ್ರಾಕ್ಟರಿಗೆ ಕೊಡುವುದಕ್ಕೆ ಅವಕಾಶವಿದೆ. ಮಾನ್ಯ

ಮುಖ್ಯಮಂತ್ರಿಗಳು ತರಾತುರಿಯಲ್ಲಿ ಆ ಇಂಜಿನಿಯರುಗಳನ್ನು suspend ಮಾಡುತ್ತಾರೆ. ಆದರೆ ಇಲ್ಲಿ ಸರಕಾರದ ಹಣವನ್ನು personnel account ಗೆ ಜಮಾ ಮಾಡಿಕೊಂಡು ಮಜಾ ಮಾಡಿಕೊಂಡು ಇರುವವರಿಗೆ ಮುಖ್ಯ ಕಾರ್ಯದರ್ಶಿಗಳು ಮಾನ್ಯ ರಾಜ್ಯಪಾಲರು ಆದೇಶ ಹೊರಡಿಸಿದ್ದನ್ನು ರಿವರ್ಸ್ ಮಾಡಿ ಅದರ ಆದೇಶವನ್ನು ರದ್ದು ಪಡಿಸುತ್ತಾರೆ. ಈ ಸರ್ಕಾರ ಆಡಳಿತ ಸುಧಾರಣೆಯಲ್ಲಿ ಅನುಷ್ಠಾನ ಪರ್ವ ಪ್ರಾರಂಭ ಮಾಡುತ್ತಾರಂತೆ. ಯಾವ ಅನುಷ್ಠಾನ ಪರ್ವ, ಇದು ಈ ಸರ್ಕಾರದಲ್ಲಿ ನಡೆಯುತ್ತಿರುವುದು. ಭ್ರಷ್ಟಾಚಾರದ ಪಾರದರ್ಶಕತೆಯ ಬಗ್ಗೆ ಒಬ್ಬರು ತಮ್ಮ ಭಾಷಣದಲ್ಲಿ ಹೇಳಿದರು. ನನ್ನ ಕಾಲದಲ್ಲಿ ಸಂಪೂರ್ಣವಾಗಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಿ ಹಾಕಿ ಬಿಡುತ್ತೇನೆ, ಅಲ್ಲಿಂದಲೇ ನಡೆಯುತ್ತಿದೆ. ಇನ್ನೂ ಬಹಳ ಇವೆ, ಈ ಸರ್ಕಾರ ಹೇಗೆ ಇದೆ ಎನ್ನುವುದಕ್ಕೆ ಎರಡು ಸ್ಯಾಂಪಲ್ ಇಟ್ಟಿದ್ದೇವೆ ಅಷ್ಟೆ, ನನ್ನ ಮೇಲೆ enquiry ಮಾಡುತ್ತೇನೆಂದು ಹೇಳಿದ್ದರು, ಅದಕ್ಕೆ ನಾನು ಹೆದರಿಲ್ಲ. ನನ್ನ ಮೇಲೆ ಯಾವ enquiry ಬೇಕಾದರೂ ಮಾಡಿಸಿಕೊಳ್ಳಬಹುದು. ನಂದಿಕಾರಿಡಾರ್, ಹೊಸಕೋಟೆ, ಬಿಡದಿ, DLF Company ಗೆ ಕೊಟ್ಟಿರುವಂಥದ್ದು, ನಾನು ಅವನು ಯಾವ ಪುಣ್ಯಾತ್ಮ, ಅವನ ಮುಖವನ್ನು ನಾನು ಇದುವರೆಗೆ ನೋಡಿಲ್ಲ. ಮುಖ್ಯಮಂತ್ರಿಯಾಗಿದ್ದಾಗಲೂ ಬರಲಿಲ್ಲ, ಈಗಾಲೂ ಬಂದು ಯಾರೂ ನೋಡಲಿಲ್ಲ. ಇನ್ನು ಅಲ್ಲಿ ಮಾಡುವುದಕ್ಕೆ ಯಾರು ಬರುತ್ತಾರೆ.? ಆರ್ಥಿಕ ಪರಿಸ್ಥಿತಿಯೂ ಏನು 36 1.00PM ಆಗಿದೆ ಎಂದು ಅವರು ಹೇಳಿಕೊಂಡೇ ಇದ್ದರು. ಇವತ್ತು ಬೆಂಗಳೂರಿನ ಮಾರುಕಟ್ಟೆ ಏನಾಗಿದೆ? ಕೆಲಸವನ್ನು ಮಾಡುವುದಕ್ಕೆ ಅವರುಗಳು ಎಲ್ಲಿಂದ ಬರುತ್ತಾರೆ? ನನ್ನ ಕಾಲದಲ್ಲಿ ನಾನು ಒಂದು ನಿಮಿಷಗಳ ಕಾಲ ಇಡುತ್ತಿರಲಿಲ್ಲ. ಅದಕ್ಕೆ ನಾನು ಹೇಳಿದೆ, ನನ್ನ ಕಾಲದಲ್ಲಿ ಏನೇನು ತೀರ್ಮಾನಗಳನ್ನು ಮಾಡಿದ್ದೇನೆ. ಯಾವ enquiryಯನ್ನು ಬೇಕಾದರೆ ಮಾಡಿಕೊಳ್ಳಿ ಎಂದು ಅದಕ್ಕಾಗಿ ನಾನು clearence ಅನ್ನು ಕೊಟ್ಟಿದ್ದೇನೆ. ಇವರು ಯಾವ ಮಟ್ಟಕ್ಕೆ ಅಧಿಕಾರವನ್ನು ನಡೆಸುತ್ತಿದ್ದಾರೆನ್ನುವುದನ್ನು ನಾನು ಎರಡು ಪ್ರಕರಣವನ್ನು ಮುಂದಿಟ್ಟಿದ್ದೇನೆ. ಲೋಕೋಯುಕ್ತರವರು MSILನಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಸರ್ಕಾರಕ್ಕೆ ದೋಖಾ ಆಗಿದೆ ಎಂದು ಹೇಳಿ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ಒಬ್ಬ IPS ಅಧಿಕಾರಿಯ ಹೆಸರು ಹೇಳಿ ಅವರಿಂದ ಸರ್ಕಾರಕ್ಕೆ ಇಷ್ಟು ಹಣವನ್ನು ಕಟ್ಟಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಈಗ ಆ ಅವರ husband ಅವರನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ಮಾಡುತ್ತೀರಿ. ನೀವು ಇಂತಹವರ ಮೇಲೆ ಹೇಗೆ actionನ್ನು ತೆಗೆದುಕೊಳ್ಳುತ್ತೀರಿ? ಇದು ನಿಮ್ಮ ಕೈಯಲ್ಲಿ ಎಲ್ಲಿ ಆಗುತ್ತದೆ? ಈ ರೀತಿ ಈ ಸರ್ಕಾರ ಆಡಳಿತ ಸುಧಾರಣೆಯನ್ನು ತರುವುದು. ಒಬ್ಬೊಬ್ಬ ಅಧಿಕಾರಿಯನ್ನು ಕೇವಲ 1–2 ತಿಂಗಳಲ್ಲಿ ಏತಕ್ಕೋಸ್ಕರ 5–6 ಬಾರಿ ವರ್ಗಾವಣೆಯನ್ನು ಮಾಡುತ್ತೀರಿ. ಕೆಲವು ಅಧಿಕಾರಿಗಳಿಗೆ ಸ್ಥಳವನ್ನು ನಿಯುಕ್ತಿಯನ್ನು ಮಾಡುತ್ತಾರೆ. ಅವನಿಗೆ ವರ್ಗ

ಮಾಡುತ್ತಾರೆ. ಅವನಿಗೆ posting ಕೊಡುವುದಿಲ್ಲ. ಏತಕ್ಕಾಗಿ waiting for posting? 2-3 ತಿಂಗಳು. ಅವನ ಹತ್ತಿರ ವ್ಯಾಪಾರ ಕುದುರಲಿಲ್ಲವೆಂದಾ? ವ್ಯಾಪಾರ ಕುದುರಲಿಲ್ಲವೆಂದು ಹೇಳಿ waiting for posting 2-3 ತಿಂಗಳುಗಳ ಕಾಲ ಇಡುತ್ತೀರಾ? ಆ ಅಧಿಕಾರಿಗಳ ಕೈಯಲ್ಲಿ ಕೆಲಸವನ್ನು ಮಾಡಿಸದೆಯೇ ಯಾವ ಪುರುಷಾರ್ಥಕ್ಕಾಗಿ ಬಜೆಟ್‌ನಲ್ಲಿ 10 ಕೋಟಿ ರೂಪಾಯಿಗಳನ್ನು ಇಡುತ್ತೀರಿ? ಇದು ಈ ಸರ್ಕಾರದ ಕಾರ್ಯಕ್ರಮಗಳು. ನಾನು ಮುಖ್ಯಮಂತ್ರಿಗಳ ಒಂದು ತೀರ್ಮಾನದಿಂದ ಆ ಮಧುಗಿರಿ ಕ್ಷೇತ್ರವನ್ನು ನೋಡಬೇಕಾಗಿ ಬಂತು. ನಾನು 5 ದಿವಸಗಳ ಕಾಲ ಗ್ರಾಮಪಂಚಾಯಿತಿ ಮಟ್ಟದಲ್ಲಿ ಎಲ್ಲಾ ಹಳ್ಳಿಗಳನ್ನು ಸುತ್ತಿಕೊಂಡು ಜನಗಳ ಹತ್ತಿರ ಅರ್ಜಿಯನ್ನು ತೆಗೆದುಕೊಂಡು ಬಂದೆ. ತಾವು ವಿಲೇವಾರಿಯ ಬಗ್ಗೆ ಹೇಳಿದ್ದೀರಿ. ಜನಸ್ಪಂದನಾ ಕಾರ್ಯಕ್ರಮದಿಂದ ಇಷ್ಟು ಲಕ್ಷ ಅರ್ಜಿ ಬಂದಿರುವುದರಲ್ಲಿ ಅಷ್ಟನ್ನು ವಿಲೇವಾರಿ ಮಾಡಿದ್ದೇನೆ. ನಾನು ಮಧುಗಿರಿಯಲ್ಲಿ 6 ದಿವಸಗಳ ಕಾಲ ಪ್ರವಾಸವನ್ನು ಮಾಡಿದೆ. 39 ಸಾವಿರ ಮನೆಗಳಿಗೆ ಅಲ್ಲಿ ಅರ್ಜಿಯನ್ನು ಕೊಡುತ್ತಾರೆ. ಅಲ್ಲಿ 65 ಸಾವಿರ ಕುಟುಂಬಗಳು ಇವೆ. ಅಲ್ಲಿ ಅಷ್ಟು ಮನೆಗಳ ಅವಶ್ಯಕತೆ ಇದೆ ಎಂದು ಹೇಳಿ ಸರ್ಕಾರಕ್ಕೆ ಮಾಹಿತಿಯನ್ನು ಅಧಿಕಾರಿಗಳು ಕೊಡುತ್ತಾರೆ. ನಾವು ಒಂದೂವರೆ ಸಾವಿರ, ಎರಡು ಸಾವಿರ ಮನೆಗಳನ್ನು ವರ್ಷಕ್ಕೆ ಕೊಟ್ಟರೆ ಮಧುಗಿರಿ ಕ್ಷೇತ್ರದಲ್ಲಿ 39 ಸಾವಿರ ಮನೆಗಳನ್ನು ಕೊಡುವುದಕ್ಕೆ 20 ವರ್ಷಗಳು ಬೇಕಾಗುತ್ತದೆ. ಅಲ್ಲಿಗೆ ಹೋದರೆ ಪಾಪ! ಅವರು ಹೇಳುತ್ತಾರೆ, 2–3 ಸಾವಿರ ರೂಪಾಯಿಗಳನ್ನು ಕೇಳುತ್ತಾರೆ. ಅಲ್ಲಿ ಈ ಹಣವನ್ನು ಕೊಟ್ಟರೆ ಮಾತ್ರ ಮನೆಗಳನ್ನು ಕೊಡುತ್ತಾರೆ.

ಡಾ:ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೆ, ನೀವು ಹೇಳಿದ್ದೆಲ್ಲಾ ಸತ್ಯ. ಮನೆಗಳು ಜಾಸ್ತಿ ಬೇಕು, ಬಡವರು ಜಾಸ್ತಿ ಇದ್ದಾರೆ. ಸೈಟುಗಳನ್ನು ಕೊಟ್ಟಿಲ್ಲ. ಸೈಟುಗಳನ್ನು ಕೊಡುವುದರ ಬಗ್ಗೆ ಜಮೀನುಗಳನ್ನು ಕೊಂಡು ಇಟ್ಟಿಲ್ಲ. ನೀವು ಹೇಳುವುದು ನೂರಕ್ಕೆ ನೂರು ಸತ್ಯ. ನಾವು 50 ಮನೆಗಳನ್ನು ಕೊಡಬೇಕೆಂದರೆ ಅಲ್ಲಿ 500 ಮನೆಗಳನ್ನು ಕೊಡಬೇಕಾಗಿರುತ್ತದೆ. ಶಾಸಕರುಗಳು ತಲೆ ಎತ್ತಿ ಓಡಾಡುವುದಕ್ಕಾಗುವುದಿಲ್ಲ. ಇದಕ್ಕೆ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ನಾವು ನೀವೆಲ್ಲರೂ ಕಾರಣವಲ್ಲವೇ ಸ್ವಾಮಿ. ಈ ಸಾರಿ ಕೊನೆಯ ಪಕ್ಷ 100 ಕೋಟಿ ರೂಪಾಯಿಗಳನ್ನು ಆ ಸೈಟನ್ನು ಕೊಡುವುದಕ್ಕೋಸ್ಕರ ಜಮೀನು ಕೊಂಡುಕೊಳ್ಳುವುದಕ್ಕೆ, ನಾವೇನು ಮಾಡಿದೆವೆಂದರೆ ದರ್ಬಾರು ನಡೆಸಿಬಿಟ್ಟೆವು. ಸರ್ಕಾರಿ ಜಮೀನುಗಳನ್ನು ಕೇಳಿದವರಿಗೆಲ್ಲಾ ಕೊಟ್ಟು ನಾವು ಖಾಲಿ ಮಾಡಿಕೊಂಡಿದ್ದೇವೆ. ಈ ಬಗ್ಗೆ ಮಾನ್ಯ ಕುಮಾರಸ್ವಾಮಿಯವರಿಗೆ ಗೊತ್ತಿದೆ. ಈಗ ಮತ್ತೆ ಜಮೀನುಗಳನ್ನು ಕೊಂಡುಕೊಳ್ಳುವಂತಹ ಸ್ಥಿತಿಗೆ ಬಂದಿದ್ದೇವೆ. ಅದಕ್ಕಾಗಿ ನಾವು 100 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಬಡವರಿಗೆ ಸೈಟನ್ನು ಕೋಡೋಣ. ಮನೆ ಕೊಟ್ಟರೂ ಸಹ ಅವನಿಗೆ ಸೈಟ್ ಇಲ್ಲ. ಈಗ

ಸಮಸ್ಯೆಗಳು ಕೂಡಿಕೊಂಡು ಹತ್ತಾರು ವರ್ಷಗಳಿಂದಲೂ ಗಮನವನ್ನು ಕೊಡದೆ ಬಂದಿರುವಂತಹ ಸಮಸ್ಯೆಯಾಗಿದೆ. ಈಗ ಸಮಸ್ಯೆಯನ್ನು ನಾವು ನೀವೆಲ್ಲರೂ ಸೇರಿ ಹಂತ ಹಂತವಾಗಿ ಬಗೆಹರಿಸಬೇಕು. ಯಡಿಯೂರಪ್ಪನವರು. ಮುಖ್ಯಮಂತ್ರಿಯಾದ ಎಂಟೇ ತಿಂಗಳಿಗೆ ಈ ಸಮಸ್ಯೆಗಳು ಅಂದರೆ ಮನೆಯಿಲ್ಲದ ಹಾಗೆ ಗುಡಿಸಲು ಇಲ್ಲದ ಹಾಗೆ, ಮಾಡುತ್ತೇನೆ, ಎಲ್ಲಕ್ಕೂ ನೀರಾವರಿಯನ್ನು ಕೊಡುತ್ತೇನೆ. ವಿದ್ಯುತ್ ಇಲ್ಲದೆ ಇವತ್ತು ಕತ್ತಲೆಯಲ್ಲಿದೆ, ಇವತ್ತು ಪರಿಸ್ಥಿತಿ ಸರಿಯಿಲ್ಲ 24 ಗಂಟೆಗಳ ಕಾಲ ನಾನು ವಿದ್ಯುತ್ ಕೊಡುತ್ತೇನೆ ಎಂದು ನೀವಾಗಲಿ, ನಾವಾಗಲಿ ಇಲ್ಲಿ ಕುಳಿತುಕೊಂಡು ಹೇಳುವುದಕ್ಕಾಗುತ್ತದೆಯೇ? ಇದು ಅನೇಕ ವರ್ಷಗಳ ಒಂದು ನಮ್ಮ ಅದ್ಯತೆ. ಇದಕ್ಕೆ ರಾಜಕೀಯ ಇಚ್ಚಾಶಕ್ತಿಯ ಕೊರತೆ ಇದೆ. ಇಲ್ಲಿ ಸಮಸ್ಯೆಗಳು ಇವೆ. ಈ ಸಮಸ್ಯೆಗಳನ್ನು ನಾವು ಮತ್ತು ನೀವೆಲ್ಲರೂ ಸೇರಿಕೊಂಡು ಹಂತ ಹಂತವಾಗಿ ಬಗೆಹರಿಸುವುದರ ಬಗ್ಗೆ ಸಲಹೆಯನ್ನು ಕೊಡಿ. ನಾನು ಇಷ್ಟೇ ಕೇಳುವುದಕ್ಕೆ ಇಚ್ಚಿಪಡುತ್ತೇನೆ. ಈ ಸಾರಿ ನಾವು ಮನೆಯನ್ನೇ ಹೆಚ್ಚು ಪ್ರಮಾಣದಲ್ಲಿ ಕೊಡೋಣ. ನೀವು ಇದನ್ನು ಕಟ್ ಮಾಡಿ ಎಂದು ನೀವು ಸಲಹೆಯನ್ನು ಕೊಡಿ. ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ರೆಡಿ ಇದ್ದೇನೆ. ನಾನು ಏನು ಹೇಳುತ್ತಿದ್ದೇನೆಂದರೆ, ನಾವು ಮತ್ತು ನೀವು ಒಟ್ಟಾಗಿ ಕೆಲಸವನ್ನು ಮಾಡಿದ್ದೇವೆ. ನಿಮ್ಮ ಅನುಭವದ ಆಧಾರದ ಮೇಲೆ ಈ ಸಮಸ್ಯೆ ಇದೆ. ಇದಕ್ಕೆ ಆದ್ಯತೆ ಏನು? ಇದನ್ನು ಹೇಗೆ ಎದುರಿಸಬೇಕೆಂದು ತಾವು ಸಲಹೆಯನ್ನು ಕೊಟ್ಟರೆ ನಾನು ಸ್ವೀಕಾರ ಮಾಡುವುದಕ್ಕೆ ಸಿದ್ದನಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಆಗಲೇ ಹೇಳಿದ್ದೇನೆ. ಆಕಸ್ಮಿಕವಾಗಿ ನಾವು ಮತ್ತು ನೀವು ಇಬ್ಬರೂ ಸೇರಿ ಸರ್ಕಾರವನ್ನು ನಡೆಸುವಂತಹ ಸಂದರ್ಭ ಹಲವಾರು ಸಭೆಗಳನ್ನು ಆಗ ಅವರು ಉಪಮುಖ್ಯಮಂತ್ರಿಗಳಾಗಿದ್ದರು, ನಾವೇ ಸಭೆ ಮಾಡಿದ್ದೇವೆ. ನಾವು ಮತ್ತು ನೀವು ಇಬ್ಬರೂ ಸೇರಿಕೊಂಡು ಸಭೆಯನ್ನು ನಡೆಸಿರುವ ಬಗ್ಗೆ ಫೋಟೋವನ್ನು ಸಹಾ ನಾನು ಇಟ್ಟುಕೊಂಡಿದ್ದೇನೆ. ನಾನು ವಸತಿ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ನಾವು ಸರ್ಕಾರವನ್ನು ನಡೆಸುವಾಗ ಚೆನ್ನಾಗಿಯೇ ಇದ್ದೆವು. ನಾವು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ಕೆಲಸವನ್ನು ಮಾಡಿದ್ದೇವೆ. ಆ ವಿಷಯದಲ್ಲಿ ನಾನು ಯಾರನ್ನೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಆ ಸಂದರ್ಭದಲ್ಲಿ ನಮಗೆ ಸಂಪೂರ್ಣವಾದಂತಹ ಸಹಕಾರವನ್ನು ಕೊಟ್ಟಿದ್ದಾರೆ. ನಿನ್ನೆ ದಿನ ಜನಸ್ಪಂದನಾ ಕಾರ್ಯಕ್ರಮದ ಬಗ್ಗೆ ಚರ್ಚೆಯನ್ನು ಮಾಡುತ್ತಾರೆ. ಇವರು ಗ್ರಾಮವಾಸ್ತವ್ಯವನ್ನು ಮಾಡುತ್ತಿದ್ದಾರಲ್ಲಾ ಅಂತ ಹೇಳುತ್ತಿದ್ದರು. ಗ್ರಾಮವಾಸ್ತವ್ಯವನ್ನು ಮಾಡುತ್ತಿದ್ದಂತಹ ಕಾರ್ಯಕ್ರಮದ ಹಳ್ಳಿಗಳು ಸುವರ್ಣ ಗ್ರಾಮೋದ್ಯೋಗದ ಕಾರ್ಯಕ್ರಮದ ಚೌಕಟ್ಟಿಗೆ ಸೇರಿಸಿದ್ದೇವೆ. ಆಗ ಸಮಯ ಇಲ್ಲದೇ ಸಮ್ಮನೆ ಕಾಲವನ್ನು ಕಳೆಯುವುದಕ್ಕೆ ಹೋಗಿರಲಿಲ್ಲ. ಇಲ್ಲಿ ಹಿಂದುಗಡೆ ಕುಳಿತಿದ್ದಾರೆ. ಕಾರ್ಯಕ್ರಮವನ್ನು ಮಾಡುವುದಾದರೆ ಯಾವ

ರೀತಿಯಾಗಿ ಮಾಡಬಹುದು ಎಂಬುದಕ್ಕೆ ಒಂದು ಬಡಗಳ ಮೂಲೆ ಎನ್ನತಕ್ಕಂತಹ ಊರು. ಅದು ಚಾಮರಾಜನಗರದಲ್ಲಿದೆ. ಅದು ಡಾ:ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದಿರತಕ್ಕಂತಹ ಜಿಲ್ಲೆಗೆ ಸೇರಿರುವಂತಹ ಊರು ಎಂದು ತಿಳಿಸಿದ್ದಾರೆ. ಅದು ಗಡಿ ಪ್ರದೇಶವಾಗಿದೆ. ಚಾಮರಾಜನಗರಕ್ಕೆ ಹೋಗಬೇಕೆಂದರೆ ಎಲ್ಲಾ ಅಧಿಕಾರದಲ್ಲಿರುವವರು ನಾಲ್ಕು ಸಲ ಯೋಚನೆಯನ್ನು ಮಾಡುತ್ತಾರೆ. ಚಾಮರಾಜನಗರಕ್ಕೆ ಹೋಗಬೇಡಿ ಎಂದು ನನಗೂ ಕೂಡ 50 ಫೋನುಗಳು ಬಂತು. ನಾನು ಚಾಮರಾಜನಗರಕ್ಕೆ ಹೋದೆ. ಇಲ್ಲಿ ಕಾಮೆಂಟ್ಸ್‌ನ್ನು ಮಾಡುವವರು ಆ ಹಳ್ಳಿಯು ಯಾವ ರೀತಿಯಾಗಿ ಸಂಪೂರ್ಣವಾಗಿ ಅಭಿವೃದ್ಧಿಯಾಗಿದೆ ಎಂಬುದನ್ನು ಹೋಗಿ ನೋಡಬೇಕು.

(ಗೊಂದಲ)

ಅಧ್ಯಕ್ಷರು: ಅವರು ಯೀಲ್ಡ್ ಆಗಿಲ್ಲ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ನೆಹರು ಓಲೆಕಾರ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ಯಾವಾಗ ಬರುತ್ತೀರೆಂದು ಒಂದು ದಿನಾಂಕವನ್ನು ತಾವು ನಿಗದಿಪಡಿಸಿದರೆ ನಾವು ಚಾಮರಾಜನಗರದ ಬಗ್ಗೆ ಚರ್ಚೆಯನ್ನೇ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಮುಖ್ಯಮಂತ್ರಿಗಳು 9 ತಿಂಗಳಲ್ಲಿ 9 ಬಾರಿ ಮೈಸೂರಿಗೆ ಬಂದಿದ್ದಾರೆ. ಅವರು ಒಂದು ಸಾರಿಯೂ ಚಾಮರಾಜನಗರಕ್ಕೆ ಬಂದಿಲ್ಲ. ಇದೇ ಅಸೆಂಬ್ಲಿಯಲ್ಲಿ ಚಾಮರಾಜನಗರಕ್ಕೆ ಬನ್ನಿ ಎಂದು ಕೇಳಿದ ಮೇಲೆ ಮಾನ್ಯ ಕುಮಾರಸ್ವಾಮಿಯವರು ಚಾಮರಾಜನಗರಕ್ಕೆ ಬಂದರು. ಇತರ ಮಂತ್ರಿಗಳು ಹೇಳಿ ಅವರನ್ನು ಚಾಮರಾಜನಗರಕ್ಕೆ ಕಳುಹಿಸಬೇಕು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಧ್ರುವನಾರಾಯಣ್, ಚಾಮರಾಜನಗರಕ್ಕೆ ಬಂದಂತಹ ಸಂದರ್ಭದಲ್ಲಿ ಸುಮಾರು 450 ಕೋಟಿ ರೂಪಾಯಿಗಳ ಕಾರ್ಯಕ್ರಮಗಳು ಇವೆ. 380 ಕೋಟಿ ರೂಪಾಯಿಗಳ ವರ್ಕ್‌ಗಳಿಗೆ ಚಾಲನೆಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ

ಹೋಗುವುದಿಲ್ಲ. ಎಲ್ಲವನ್ನೂ ರಾಮನಗರ ಮತ್ತು ಹೊಳೇನರಸೀಪುರಕ್ಕೆ ಮಾಡಿಕೊಂಡರು ಎಂದು ಕೆಲವರು ಚರ್ಚೆಯನ್ನು ಮಾಡುತ್ತಾರೆ. ರಾಮನಗರಕ್ಕೆ ಕೊಟ್ಟಿರುವಂತಹ ಇಂಜಿನಿಯರಿಂಗ್ ಕಾಲೇಜನ್ನು ಚಾಮರಾಜನಗರಕ್ಕೆ ಕೊಡಿ ಎಂದು ನಾನು ಹೇಳಿದ್ದೇನೆ. ನಾನು ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ 5–6 ಸಭೆಗಳನ್ನು ಮಾಡಿ ಅವರ ಜೊತೆ ಕೆಲಸವನ್ನು ಮಾಡಿದ್ದೇನೆ. ವರ್ಷಕ್ಕೆ ಕನಿಷ್ಟ 6 ಲಕ್ಷ ಮನೆಗಳನ್ನು ಕೊಡುವ ಬಗ್ಗೆ ಗುರಿ ಇಟ್ಟುಕೊಂಡು ಕೆಲಸವನ್ನು ಮಾಡಬೇಕೆಂದು 3–4 ಸಭೆಗಳನ್ನು ಮಾಡಿ ಹಣವನ್ನು ಪ್ರತಿತಿಂಗಳು ಬಿಡುಗಡೆ ಮಾಡಬೇಕೆಂಬ ಬಗ್ಗೆ ನಾನು ಚರ್ಚೆ ಮಾಡಿದ್ದೇನೆ. ತಿಂಗಳಿಗೆ 50 ಸಾವಿರ ಮನೆಗಳನ್ನು ಕೊಡುವ ಬಗ್ಗೆ ನೀವು ಟಾರ್ಗೆಟ್ ಇಟ್ಟುಕೊಳ್ಳಿ ಎಂದು ಹೇಳಿದ್ದೇನೆ. ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತೇನೆ. ಹಿಂದಿನವರು ಏನು ಮಾಡಿದರು, ನೀವು ತಪ್ಪು ಮಾಡುತ್ತಿದ್ದೀರಿ ಎಂದು ನಾನು ಯಾವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಪ್ರಮುಖವಾಗಿರುವಂತಹದ್ದು ವಸತಿಯ ವಿಷಯದಲ್ಲಿ ಜನರು ಅರ್ಜಿಯನ್ನು ಕೊಡುತ್ತಾರೆ. ಅವರು ಜನತಾ ದರ್ಶನದ ಕಾರ್ಯಕ್ರಮದ ಬಗ್ಗೆ ಪಾಪ ಅವರು ಹೇಳುತ್ತಾರೆ. ಗ್ರಾಮ ವಾಸ್ತವ್ಯಕ್ಕೆ ಅರ್ಜಿಯನ್ನು ತೆಗೆದುಕೊಂಡು ಬನ್ನಿ ಎಂದು ಅವರು ಹೇಳುತ್ತಾರೆ. ನನ್ನ ಮುಂದೆ ಬಂದಂತಹ ಅರ್ಜಿಗಳಲ್ಲಿ ಅಧ್ಯಕ್ಷರೆ, ಯಾವುದೇ ಕಾನೂನು ವ್ಯಾಪ್ತಿಯಲ್ಲಿರುವಂತಹದ್ದು ಕೆಲವು problemಗಳು ಇತ್ತು. ಅಂತಹದ್ದಕ್ಕೆ ಕೋರ್ಟು ಕಟಕಟೆಗಳು ಇರಬಹುದು, ಭೂಮಿ ವ್ಯವಹಾರಗಳಲ್ಲಿ ನಡೆದಿರತಕ್ಕಂತಹ ಭಿನ್ನಾಭಿಪ್ರಾಯಗಳ ಅರ್ಜಿಗಳು ಇರಬಹುದು. ಇಂತಹ ವಿಷಯಗಳು ನನ್ನ ಕೈಯಲ್ಲಿ ಇರಲಿಲ್ಲ.

ಆದರೆ, ನನ್ನ ಮುಂದೆ ಆ ಬಡವರು ಬಂದರಲ್ಲಾ, ಅವರಿಗೆ ಸ್ಥಳದಲ್ಲೇ ಏನೇನು ಪರಿಹಾರ ಕೊಡಬೇಕೋ ಅದನ್ನು ಕೊಟ್ಟಿದ್ದೇನೆ. ನಾನು ಮುಖ್ಯಮಂತ್ರಿಯಾದಾಗ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಒಂದು ಕಾಲದಲ್ಲಿ 5 ಸಾವಿರ ರೂಪಾಯಿ ಕೊಡುತ್ತಿದ್ದರು. ಆದರೆ, ನನ್ನ ಕಾಲದಲ್ಲಿ ಒಂದೂವರೆ ಎರಡು ಲಕ್ಷ ಪರಿಹಾರವನ್ನು ಕೊಟ್ಟಿದ್ದೇವೆ. ನನ್ನ ಅಧಿಕಾರದ ಕೇವಲ 20 ತಿಂಗಳಿನಲ್ಲಿ 24 ಕೋಟಿ ರೂಪಾಯಿಗಳನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಕೊಟ್ಟಿದ್ದೇವೆ. ತಾವು 9 ತಿಂಗಳಿನಲ್ಲಿ ಎಷ್ಟು ಕೊಟ್ಟಿದ್ದೀರಿ ಎಂದು ಮಾಹಿತಿ ಕೊಡಿ.

ಶ್ರೀ ನೆಹರು ಓಲೇಕಾರ್: ಅಲ್ಲಿ ಬಂದಿರುವ ಅರ್ಜಿಗಳನ್ನು ಏನು ಮಾಡಿದ್ದೀರಿ, ಮಾಹಿತಿ ಹೇಳಿ. ನಮ್ಮ ಮುಖ್ಯಮಂತ್ರಿಯವರು ಈಗ ಕೊಡಲು ಪ್ರಾರಂಭ ಮಾಡಿದ್ದಾರೆ.

(ಗೊಂದಲ)

27.V.F.6

ಶ್ರೀ ಸುನಿಲ್ ವಿ ಹೆಗಡೆ: ಮುಖ್ಯಮಂತ್ರಿಯವರು ಇದ್ದಾರೆ. ಅವರು ಹೇಳುತ್ತಾರೆ ಬಿಡಿ.

(ಗೊಂದಲ)

ಶ್ರೀ ನೆಹರು ಓಲೇಕಾರ್: ಕಾಲೇಜನ್ನು, ಆಸ್ಪತ್ರೆಯನ್ನು ಕೊಡುತ್ತೇನೆಂದು ಹೇಳಿದಿರಿ. ಆದರೆ, ಕೊಡಲು ಆಗಲಿಲ್ಲ. ದತ್ತು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ, ತೆಗೆದುಕೊಳ್ಳಲಿಲ್ಲ. ನಿಮ್ಮ ಘೋಷಣೆಯೆಲ್ಲಾ ಸುಳ್ಳಾಯಿತು.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಜನತಾ ದರ್ಶನದ ಕಾರ್ಯಕ್ರಮದಲ್ಲಿ ಆ ಕುಂಟರು, ಕುರುಡರುಗಳು ಬರುತ್ತಿದ್ದರಲ್ಲಾ, ಅವರೇ 80 ಪರ್ಸೆಂಟ್ ಇರುತ್ತಿದ್ದರು. ನಾನು ಮುಖ್ಯಮಂತ್ರಿಯಾಗುವವರೆಗೆ ಆ ಕುಂಟರು ಮತ್ತು ಕುರುಡರು ಮನೆ ಬಿಟ್ಟು ಹೊರಕ್ಕೇ ಬರುತ್ತಿರಲಿಲ್ಲ. ಮೊನ್ನೆ ಯಾವುದೋ ಪತ್ರಿಕೆಯಲ್ಲಿ ನೋಡಿದೆ. ಕುಂಟರು, ಕುರುಡರುಗಳೆಲ್ಲ strike ಮಾಡಿಕೊಂಡು ಬರೀ ಬೆತ್ತಲೆಯಲ್ಲಿ ಕುಳಿತಿದ್ದಾರೆ. ಒಂದು ವಾರವಾದರೂ ಸರ್ಕಾರದ ಕಡೆಯಿಂದ ಯಾರಾದರೂ ಹೋಗಿ ಅವರ ಕಷ್ಟವೇನು ಎಂದು ಕೇಳಲಿಲ್ಲ. ನಮ್ಮ ಕಾಲದಲ್ಲಿ ಆ ರೀತಿ ಜನಗಳಿಗೆ ಯಾವ ರೀತಿಯಾಗಿ ಗೌರವ ಕೊಡಬೇಕೊ ಆ ರೀತಿ ಕೊಟ್ಟಿದ್ದೇವೆ. ವಸತಿ ವಿಚಾರದಲ್ಲಿ ನಿವೇಶನ ಕೊಡುವುದರಲ್ಲಿ ತೊಂದರೆ ಏನು ಇದೆ, ನಮ್ಮ ಅಧಿಕಾರಿಗಳಿಗೆ ನಾನು ಆಗಲೇ ಸಭೆಯಲ್ಲಿ ಹೇಳಿದೆ, ಇವತ್ತು ಏನು ಹಳೆಯ ದರವನ್ನು ನಿಗದಿ ಮಾಡಿದ್ದೀರಿ, ಅದರಲ್ಲಿ ಹೊಸದಾಗಿ ನಿವೇಶನ ಕೊಂಡುಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿದ್ದೆ. ಹೊಸದಾಗಿ ದರವನ್ನು ನಿಗದಿ ಮಾಡಿ ಎಂದು ಹೇಳಿದ್ದೆ. ಇವತ್ತು ನಿವೇಶನ ಇಲ್ಲದಿರುವ ಸಂಖ್ಯೆ ಸಹ ಜಾಸ್ತಿ ಇದೆಯೆಂದು ಆ ಸಂದರ್ಭದಲ್ಲಿ ಹೇಳಿದ್ದೇನೆ. ಮೂರ್ನಾಲ್ಕು ಸಭೆಗಳನ್ನು ಮಾಡಿ ಆದೇಶ ಮಾಡಿದ್ದೇವೆ. ವಸತಿ ವಿಷಯದಲ್ಲಿ ಗುಡಿಸಲು ರಹಿತ ಕಾರ್ಯಕ್ರಮವನ್ನು ತರಬೇಕೆಂದು ಹೇಳಿ ಹತ್ತು ತಾಲ್ಲೂಕುಗಳ ಪೈಲೆಟ್ ಪ್ರಾಜೆಕ್ಟ್ ಮಾಡಬೇಕೆಂದು ಹೇಳಿದ್ದೆ. ಅದರಲ್ಲಿ ಪಾವಗಡದ್ದನ್ನು ಈಗ ಯಾರೊ ಕಳುಹಿಸಿದ್ದಾರೆ. ಅದರಲ್ಲಿ ಪಾವಗಡ, ನಕ್ಸಲೀಯರ ಪ್ರದೇಶವನ್ನು ಸೇರಿಸಿದ್ದೆ. ಹನೂರು, ಕೊಳ್ಳೇಗಾಲವನ್ನು ಸೇರಿಸಿದ್ದೆ. ಅಲ್ಲಿ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಮಾಡಿದ್ದ ಹಿನ್ನೆಲೆಯಲ್ಲಿ ಅಲ್ಲಿರುವ ಜನರ ಪರಿಸ್ಥಿತಿಯನ್ನು ನೋಡಿ ಅದನ್ನೂ ಸೇರಿಸಿದ್ದೆ. ಜೇವರ್ಗಿ, ಶಿಕಾರಿಪುರವನ್ನೂ ಅದರಲ್ಲಿ ಸೇರಿಸಲಾಗಿತ್ತು. ರಾಮನಗರವನ್ನೂ ಸೇರಿಸಿದ್ದೆ. ಈ ರೀತಿ ಹತ್ತು ತಾಲ್ಲೂಕುಗಳಲ್ಲಿ ಗುಡಿಸಲು ರಹಿತ ತಾಲ್ಲೂಕುಗಳನ್ನಾಗಿ ಮಾಡಬೇಕೆಂದು ಪೈಲೆಟ್ ಪ್ರಾಜೆಕ್ಟ್ ಮಾಡಿದ್ದೆ. ಆ ರೀತಿ

ಪ್ರಯತ್ನಪಟ್ಟಿದ್ದೇವೆ. ನಮಗಿರತಕ್ಕ ಅವಧಿಯಲ್ಲಿ ನಿಮ್ಮೆಲ್ಲರ ಸಹಕಾರದಲ್ಲಿ ಎಷ್ಟು ಕೆಲಸ ಮಾಡಬಹುದೊ ಅಷ್ಟನ್ನು ಮಾಡಿದ್ದೇವೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ನಾನು ಮಧುಗಿರಿ ಕ್ಷೇತ್ರಕ್ಕೆ ಹಳ್ಳಿಹಳ್ಳಿಗೆ ಹೋಗಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ. ಮುಖ್ಯಮಂತ್ರಿಗಳೇ ನನ್ನನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಅನಿವಾರ್ಯವಾಗಿ ನಾನು ನಮ್ಮ ಕುಟುಂಬದಿಂದಲೇ ನಿಲ್ಲಿಸಬೇಕಾಯಿತು. ಏಕೆಂದರೆ ನಮ್ಮ ಕುಟುಂಬದ ಬಗ್ಗೆ ಬಹಳ ಚರ್ಚೆ ನಡೆಯುತ್ತದೆ. ಈ ಪಕ್ಷ ಯಾವುದು ಎಂದರೆ ಅಪ್ಪ ಮಕ್ಕಳು ಸೊಸೆ ಮಾವ ಇವರಲ್ಲೇ ಇದೆಯೆಂದು. ಮುಂದಿನ ದಿನಗಳಲ್ಲಿ ಆ ರೀತಿ ಟೀಕೆ ಮಾಡುತ್ತಿದ್ದವರಲ್ಲಿ ಅಪ್ಪಾ ಮಕ್ಕಳು ಯಾರ್ಯಾರು ಪಕ್ಷಕ್ಕೆ ಬರುತ್ತಾರೋ ಕಾದು ನೋಡೋಣ. ಮುಂದಿನ ದಿನಗಳಲ್ಲಾದರೂ ಈ ರಾಜ್ಯದಲ್ಲಿ ಅಪ್ಪಾ ಮಕ್ಕಳ ಪಕ್ಷವೆಂದು ಹೇಳುವುದು ನಿಲ್ಲಬಹುದು ಎಂದು ನನ್ನ ಭಾವನೆ. ನಮ್ಮ ಮೇಲೆ ಟೀಕೆ ಮಾಡುವುದು ತಪ್ಪಬಹುದೇನೊ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಡೆದಿದೆ. ಆದರೆ ನಮ್ಮ ಕುಟುಂಬದ ಮೇಲೆ ಇನ್ನು ಮೇಲೆ ಟೀಕೆ ಮಾಡುವುದು ತಪ್ಪಬಹುದೇನೋ? ಆದರೂ ದೇವೇಗೌಡರ ಕುಟುಂಬದ ಬಗ್ಗೆಯೇ ಚರ್ಚೆ ಮಾಡುವುದು. ಇನ್ಯಾರ ಕುಟುಂಬದ ಬಗ್ಗೆಯೂ ಚರ್ಚೆ ಮಾಡುವುದಿಲ್ಲ. ಸತ್ಯವನ್ನು ಹೇಳುತ್ತೇವಷ್ಟೆ. ಸತ್ಯವನ್ನು ಹೇಳಿದರೆ ಕೆಲವರಿಗೆ ಸಹಿಸಲು ಆಗುವುದಿಲ್ಲ. Challenge fund ಕತೆಯನ್ನು ಹೇಳಿದೆನಲ್ಲಾ? ಇದಕ್ಕೆ ಹತ್ತು ಕೋಟಿಯನ್ನು ಏತಕ್ಕಾಗಿ ಇಟ್ಟರೋ ನನಗೆ ಅರ್ಥವಾಗುತ್ತಿಲ್ಲ. ಈ ಸರ್ಕಾರದ ಕಾರ್ಯಕ್ರಮಗಳೇನಿದೆ, ನಿಜಕ್ಕೂ ನೂರಕ್ಕೆ ತೊಂಭತ್ತು ಭಾಗ ಈಡೇರಿಸಿದ್ದೇವೆಂದು ಪ್ರತಿನಿತ್ಯ ಹೇಳುತ್ತಾರೆ. ಕಳೆದ ಬಜೆಟ್‌ನಿಂದ ತೆಗೆದುಕೊಳ್ಳುವುದಾದರೆ, ತಾವು ಇವತ್ತು ಮಾಹಿತಿ ಕೊಟ್ಟಿದ್ದೀರಿ. ಯಾವ್ಯಾವ ಇಲಾಖೆಯಲ್ಲಿ ನೀವು ಹೇಳಿದಂಥ ಘೋಷಣೆಗಳನ್ನು ಅನುಷ್ಠಾನಕ್ಕೆ ತಂದಿದ್ದೀರಿ? ಉದಾಹರಣೆಗೆ, ಸಣ್ಣ ರೈತರಿಗೆ ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದಿರಿ. ನೀವೇ ಹೇಳಿದ್ದಿರಿ ಅದಕ್ಕೆ 500 ಕೋಟಿ ಇಟ್ಟಿದ್ದೇವೆಂದು. ಆದರೆ, ಕೊಟ್ಟಿದ್ದು 220 ಕೋಟಿ ಮಾತ್ರ. ಘೋಷಣೆ ಮಾಡಿದ್ದು ಮಾತ್ರ 500 ಕೋಟಿ ಎಂದು. ನಿನ್ನೆ ನಮ್ಮ ಮಾಗಡಿ ಶಾಸಕರು ಹನಿ ನೀರಾವರಿಯ ಬಗ್ಗೆ ಚರ್ಚೆ ಮಾಡುತ್ತಿದ್ದರು, 175 ಕೋಟಿ ಸಹಾಯಧನವನ್ನು ವಿತರಿಸುತ್ತೇವೆಂದು ಹೇಳಿದ್ದೀರಿ. ನೀವು ಈಗ ಕೊಟ್ಟಿರುವ ಅಂಕಿಅಂಶದ ಪ್ರಕಾರವೇ ಎಷ್ಟು ಕೋಟಿ ಕೊಟ್ಟಿದ್ದೀರಿ? ಇದರಲ್ಲಿ 53 ಕೋಟಿ ಮಾತ್ರ ರಿಲೀಸ್ ಮಾಡಿದ್ದೀರಿ. ನಿಮ್ಮ ಕೋಳಿ ಸಾಗಾಣಿಕೆಯವರು ಕೇಳುತ್ತಿದ್ದರು. ಇನ್ನು 10 ಕೋಟಿ addition ಕೇಳಿದರು ಎಂದು ಏನೇನೋ ಕತೆಯನ್ನು ಹೇಳಿಕೊಂಡು ಬಜೆಟ್‌ನಲ್ಲಿ 10 ಕೋಟಿ ಘೋಷಣೆ ಮಾಡಿದ್ದೀರಿ. ಆದರೆ, ಇಲ್ಲಿಯವರೆಗೆ ಕೇವಲ 2 ಕೋಟಿ ರಿಲೀಸ್ ಮಾಡಿದ್ದಾರೆ.

ನೀವು ಕೊಟ್ಟಿರುವ ವರದಿಯ ಪ್ರಕಾರ ಕಳೆದ ಬಾರಿ ನೀರಾವರಿಗೆ 1500 ಕೋಟಿಯನ್ನೇನೋ ಖರ್ಚು ಮಾಡಿಕೊಂಡಿದ್ದೀರಿ. ನಂಜುಂಡಪ್ಪ ವರದಿಗಂತೂ ಒಂದು ನಯಾಪೈಸೆ ಇಲ್ಲ. ಅಲ್ಲಿ blank ತೋರಿಸುತ್ತೀರಿ. ಬೆಂಗಳೂರು ಸಿಟಿಗೆ 1800 ಕೋಟಿ ರೂಪಾಯಿಗಳು ಎಂದು ಆಯವ್ಯಯ ಭಾಷಣದ ವಿವರದಲ್ಲಿ ತೋರಿಸುತ್ತೀರಿ. ಆದರೆ, ಪಕ್ಕದಲ್ಲಿ ಅನುಪಾಲನಾ ವರದಿಯನ್ನು ತೆಗೆದು ನೋಡಿದರೆ ಅದು blank ಇದೆ. ಪಾಪ! ಬೆಂಗಳೂರಿನ ಜನರು ಕಳೆದ ಬಾರಿ 1800 ಕೋಟಿ ಎಂದು ಹೇಳುತ್ತಿದ್ದಂತೆಯೇ ಬಹಳ ಖುಷಿಯಾಗಿದ್ದರು. ಈ ಸಲ 7000 ಕೋಟಿಯೆಂದು ಹೇಳಿದ್ದಾರೆ. ಆದರೆ ಯೋಜನಾ ವೆಚ್ಚದಲ್ಲಿ 4500 ಕೋಟಿಯೆಂದು ತೋರಿಸಿಕೊಳ್ಳುತ್ತಾರೆ. ಈ ರೀತಿ ಜನರಿಗೆ ಅಂಕಿಗಳನ್ನೇ ತಿರುಚಿ ಮಾಧ್ಯಮಗಳನ್ನೇ ತಪ್ಪು ದಾರಿಗೆ ಎಳೆದ ಮೇಲೆ ಜನರಿಗೆ ಏನು ಗೊತ್ತಾಗುತ್ತದೆ? ಇನ್ನು ಸದನದಲ್ಲಿರತಕ್ಕ ನಮ್ಮಂಥ ಇನ್ನೂ ಅನುಭವವಾಗಬೇಕಾಗಿರತಕ್ಕ ಶಾಸಕರುಗಳಿಗೆ, ಏನು ಗೊತ್ತಾಗುತ್ತದೆ. ನಾನು ಮುಖ್ಯಮಂತ್ರಿಯಾಗಿಯೇ ನನಗೆ ಇನ್ನು ಅನುಭವ ಸಾಕಾಗಿಲ್ಲ. ಪಾಪ! ಅವರುಗಳಿಗೆ ಏನು ಗೊತ್ತಾಗುತ್ತದೆ? ಏನೋ ಮಾಡಿರಬೇಕು ಎಂದು ಎಲ್ಲಾ ಮೆಚ್ಚುಗೆ ವ್ಯಕ್ತಪಡಿಸಲು ಹೋಗುತ್ತಾರೆ. ನಿಮ್ಮ ಕೈಗಾರಿಕಾ ಮಿಷನ್, ಇವತ್ತು ಸಿದ್ಧ ಉಡುಪು, ಕಳೆದ ಮೂರು ವರ್ಷದಿಂದ 500 ಕೋಟಿಯೆಂದು ಪ್ರತಿ ಬಜೆಟ್‌ನಲ್ಲೂ ಘೋಷಣೆ ಮಾಡುತ್ತಿದ್ದೇವೆ. ನಮ್ಮ ಕಾಲದಲ್ಲೇ ನಾನು ನಮ್ಮ ಈ ಸಿದ್ಧ ಉಡುಪು ಕಾರ್ಖಾನೆಗಳಿಗೆ ಉತ್ತೇಜನ ಕೊಡುವುದಕ್ಕೆ ನಾವು ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದೆ. ಕಳೆದ ಮೂರು ವರ್ಷಗಳಿಂದ 500 ಕೋಟಿಯೆಂದು ಘೋಷಣೆ ಮಾಡಿಕೊಂಡು ಬಂದಿದ್ದೇವೆಯೇ ಹೊರತು ಯಾವ ಕಾರ್ಯಕ್ರಮಗಳೂ ಇಲ್ಲಿಯವರೆಗೆ ಆ ಸಿದ್ಧ ಉಡುಪು ಕ್ಷೇತ್ರಕ್ಕೆ ಒಂದು ನಯಾಪೈಸೆ ಕೊಡಲು ಆಗಿಲ್ಲ. ಪ್ರತಿವರ್ಷ 100 ಕೋಟಿಯಂತೆ ಮುಂದಿನ 5 ವರ್ಷಗಳಲ್ಲಿ ಹಣ ವಿನಿಯೋಗ ಮಾಡುವುದು ಎಂದು ತೀರ್ಮಾನ ಮಾಡಿ 2007–08ರ ಬಜೆಟ್‌ನಲ್ಲೇ ತೀರ್ಮಾನ ಮಾಡಿದ್ದು. ಪ್ರತಿವರ್ಷ ಅದು carry ಆಗುತ್ತಿದೆಯೇ ಹೊರತು ಯಾವುದೇ ಕಾರ್ಯಕ್ರಮ implement ಆಗಲಿಲ್ಲ. ನೀವೇ ಹೇಳುತ್ತಿದ್ದೀರಿ, ಇವತ್ತು ಹೊರದೇಶಗಳಿಗೆ ನಮ್ಮಿಂದ ತಯಾರಾಗತಕ್ಕಂಥ ಮೆಟೀರಿಯಲ್‌ಗಳು ಹೋಗುತ್ತಿಲ್ಲ, ಸಿದ್ಧ ಉಡುಪು ಕಾರ್ಖಾನೆಗಳು ನಷ್ಟದಲ್ಲಿವೆಯೆಂದು ಏನು ಹೇಳಿದ್ದೀರಿ, ಬೆಂಗಳೂರು ನಗರದ ನಾಗರೀಕರು ನಿಮಗೆ ಇವತ್ತು 17 ಸ್ಥಾನವನ್ನು ಗೆಲ್ಲಿಸಿಕೊಟ್ಟಿದ್ದಾರೆ. ಇವತ್ತು ಅವರೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಈ ಒಂದು textile ಗಳಿಗೆ ಕೆಲಸ ಮಾಡಲು ಹೋಗತಕ್ಕವರೇ. 1800–2000 ರೂಪಾಯಿ ಸಂಬಳಕ್ಕೆ ಆ ಹೆಣ್ಣು ಮಕ್ಕಳು ಕೆಲಸಕ್ಕೆ ಹೋಗುತ್ತಾರೆ. ಇವತ್ತು ಅಲ್ಲಿ ಹಲವಾರು ಜನರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಲಕ್ಷಗಟ್ಟಲೆ ಸಂಖ್ಯೆಯಲ್ಲಿ ತೆಗೆದು ಹಾಕಿದ್ದಾರೆ. ಇವತ್ತು ನೀವು ಏನು textile, ಸಿದ್ಧ ಉಡುಪು ಕಾರ್ಖಾನೆಗಳ ಬಗ್ಗೆ ಚರ್ಚೆ ಮಾಡುತ್ತೀರಿ, ಅಲ್ಲಿ

ಕೆಲಸದಿಂದ ತೆಗೆದು ಹಾಕಿ ಬೀದಿಪಾಲಾಗಿದ್ದಾರಲ್ಲಾ, ಅವರುಗಳಿಗೆ ಏನಾದರೂ ಈ ಒಂದು ಆರ್ಥಿಕ ಸಂಕಷ್ಟ ಪರಿಹಾರವಾಗಿ ನಿರುದ್ಯೋಗಿ ಭತ್ಯವನ್ನು ಕೊಡುವ ಕೆಲಸ ಮಾಡಿ. ಏನಾದರೂ ಮಾಹಿತಿಯನ್ನು ಪಡೆದು ಇವತ್ತೇನು ಕೆಲಸದಿಂದ ವಂಚಿತರಾಗಿ ಬೀದಿಗೆ ಬಂದಿರುವ ಆ ಹೆಣ್ಣುಮಕ್ಕಳಿಗೆ ತಿಂಗಳಿಗೆ ಸರ್ಕಾರದಿಂದ ಏನಾದರೂ ಮಾಡಿ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಿರುದ್ಯೋಗಿ ಯುವಕರಿಗೆ 1500 ರೂಪಾಯಿಯೆಂದು ಮೊದಲೇ ಘೋಷಣೆ ಮಾಡಿಕೊಂಡಿದ್ದೀರಿ, ಆದರೆ, ಇದುವರೆಗೆ ಅದರ ಬಗ್ಗೆ ಚಕಾರ ಎತ್ತೇ ಇಲ್ಲ. ಆದರೆ, ನಿಮ್ಮ ನೂರು ದಿನಗಳ ಸಾಧನೆ ಪುಸ್ತಕವನ್ನು ನೋಡಿದರೆ ನೂರಕ್ಕೆ ತೊಂಭತ್ತು ಭಾಗ ನಾವು ಎಲ್ಲವನ್ನೂ ಮುಗಿಸಿದ್ದೇವೆಂದು ಹೇಳುತ್ತೀರಿ. 2 ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದ್ದಿರಿ. ಆದರೆ, ಇವತ್ತು ಮಾರುಕಟ್ಟೆಗೆ ಹೋಗಿ ಅಕ್ಕಿಯನ್ನು ತೆಗೆದುಕೊಳ್ಳಬೇಕಾಗಿದೆ. ನಾನು ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ನಾನು ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಮರೆತಿದ್ದೆ. ನಮ್ಮ ಕಾಲದಲ್ಲಿ ಯಾವ ಪ್ರತಿಭಾನ್ವಿತ ವಿದ್ಯಾರ್ಥಿಗಳು ಬಡ ಕುಟುಂಬದಿಂದ ಬರುತ್ತಾರೆ, ಆ ಮಕ್ಕಳು 90–95 ಅಂಕಗಳನ್ನು ಪಡೆದು ಸಿ.ಇ.ಟಿ. ಯಲ್ಲಿ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜುಗಳಲ್ಲಿ ಅವರಿಗೆ ಸೀಟು ಸಿಕ್ಕಿದರೂ ಸಹಾ ಅವರಿಗೆ ಹತ್ತು ಸಾವಿರ ಹದಿನೈದು ಸಾವಿರ fees ನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ಮುಖ್ಯಮಂತ್ರಿಗಳು ಆವತ್ತೇನು ಉಪಮುಖ್ಯಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದರು, ಅವರನ್ನೂ ಕೂರಿಸಿಕೊಂಡು ಒಂದು ಸಭೆ ಮಾಡಿದ್ದೆ. ಯಾವ ವಿದ್ಯಾರ್ಥಿಗಳು ಇವತ್ತು, ಆಟೋ ಡ್ರೈವರ್‌ಗಳು ಇರಬಹುದು, ತರಕಾರಿ ಮಾರುವವರು ಇರಬಹುದು, ಸಣ್ಣಪುಟ್ಟ ಕೂಲಿ ಕೆಲಸ ಮಾಡಿ ಜೀವನ ಮಾಡುತ್ತಿರುವ ಸಣ್ಣ ರೈತರುಗಳು ಇರಬಹುದು. ಆ ಕುಟುಂಬದಲ್ಲಿ 100ಕ್ಕೆ 90, 95 ಅಂಕಗಳನ್ನು ಪಡೆದಿರತಕ್ಕಂಥ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜಿಗೆ ಇವತ್ತು ಪ್ರವೇಶ ಪಡೆಯಬೇಕಾದರೆ, ನಾವು ಸರ್ಕಾರದಿಂದ ನಿಗದಿ ಮಾಡಿರುವಂಥ ಹಣವನ್ನು ಕಟ್ಟುವುದಕ್ಕೂ ಅವರಿಗೆ ಸಾಧ್ಯವಿರುವುದಿಲ್ಲ. ಆ ರೀತಿಯ ಸಾವಿರಾರು ಕುಟುಂಬಗಳು ಇವತ್ತಿನ ದಿವಸ ಇವೆ. ಸರ್ಕಾರವೇ ಹಣ ಭರಿಸತಕ್ಕಂಥ ತೀರ್ಮಾನ ಮಾಡೋಣ ಎಂದು ಹೇಳಿದೆ. ಅಂತಿಮವಾಗಿ technical studentsಗೆ 25 ಸಾವಿರ ರೂಪಾಯಿಗಳ ಸಬ್ಸಿಡಿ ಕೊಡುವಂಥ ಕಾರ್ಯಕ್ರಮವನ್ನು introduce ಮಾಡಿದರು. ನಮ್ಮ ಕಾಲದಲ್ಲಿ ಒಂದು ವರ್ಷಗಳ ಕಾಲ ಕೊಟ್ಟಿದ್ದನ್ನು ಬಿಟ್ಟರೆ, ನಂತರ ಅದನ್ನು ನಿಲ್ಲಿಸಿದ್ದೀರಿ. ಮೊನ್ನೆ ಮತ್ತೆ ಇವತ್ತು ಬಜೆಟ್‌ನಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದೀರಿ ಎಂದರೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಯರು ಯಾರು 100ಕ್ಕೆ 75 ಅಂಕಗಳನ್ನು, 100ಕ್ಕೆ 65 ಅಂಕಗಳನ್ನು ತೆಗೆಯುತ್ತಾರೆ, ಅವರಿಗೆ 10 ಸಾವಿರ, 5 ಸಾವಿರ ರೂಪಾಯಿಗಳ ಪ್ರೋತ್ಸಾಹ ಧನ ಕೊಡುತ್ತೇವೆ ಎಂದು ಹೇಳಿ ಘೋಷಣೆಯನ್ನು ಮಾಡಿದ್ದೀರಿ, ಅದಕ್ಕೆ ನಿಜಕ್ಕೂ ನಾನು ನಿಮ್ಮನ್ನು

ಅಭಿನಂದಿಸುತ್ತೇನೆ. ಅಂತಹ ಕಾರ್ಯಕ್ರಮವನ್ನು ನೀವು ತಂದಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಆ ಬಡ ಕುಟುಂಬದಿಂದ ಬಂದಿರತಕ್ಕಂಥ ಮಕ್ಕಳಿಗೆ ಈ ರೀತಿಯ ಪ್ರೋತ್ಸಾಹ ಕೊಡುವುದರಿಂದ ಬಹುಶಃ ನಾವು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಕಾರ್ಯಕ್ರಮವನ್ನು ತಾವು ತಂದಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ, ನಾನು ಈ ಬಡ ಮಕ್ಕಳ ಬಗ್ಗೆ ಏಕೆ ಹೇಳುತ್ತಿದ್ದೇನೆ ಎಂದರೆ, ನನಗೆ ಪ್ರತಿನಿತ್ಯ ಆಗುತ್ತಿರುವ ಅನುಭವದಿಂದ ಹೇಳುತ್ತಿದ್ದೇನೆ. 15–20 ದಿವಸಗಳ ಹಿಂದೆ ಬೆಂಗಳೂರಿನಿಂದ ಒಬ್ಬ ಹೆಣ್ಣುಮಗಳು ಬಂದಳು, ಆ ಹೆಣ್ಣುಮಗಳು BE, IInd Semester ನಲ್ಲಿ ಓದುತ್ತಿದ್ದಾಳೆ, ಸುಮಾರು 89 ಅಂಕಗಳನ್ನು ಪಡೆದಿದ್ದಾಳೆ, 18 ಸಾವಿರ ರೂಪಾಯಿಗಳ feesಅನ್ನು ಅವಳು ಕಟ್ಟಬೇಕಾಗಿತ್ತು, ಅವರ ಅಪ್ಪನ ಜೊತೆ ಬಂದು ನನ್ನ ಮುಂದೆ ನಿಂತು ಕಣ್ಣಲ್ಲಿ ನೀರು ತುಂಬಿಕೊಂಡು ನಿಂತಿದ್ದಾಳೆ, Fees ಕಟ್ಟದೇ ಇದ್ದರೆ ನಿನಗೆ exam ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ, ಹೊರಗಡೆ ಹೋಗು ಎಂದು ಹೇಳಿ. ಕಾಲೇಜಿನಿಂದ ಹೊರಗಡೆ ಕಳುಹಿಸಿದ್ದಾರೆ. ಆಕೆ 89 ಅಂಕಗಳನ್ನು ಪಡೆದಿದ್ದಾಳೆ. ನೀವು ಇವತ್ತು ಭಯೋತ್ಪಾದನೆ ವಿಷಯದಲ್ಲಿ ಯುವಕರನ್ನು ಜಾಗೃತಿಗೊಳಿಸುವುದಕ್ಕೆ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಹಣ ವಿನಿಯೋಗ ಮಾಡುತ್ತಿದ್ದೀರಿ, ಅಭಿಯಾನ ಮಾಡುತ್ತಿದ್ದೀರಿ, ಅದಕ್ಕೆ ನನ್ನ ವಿರೋಧವೇನೂ ಇಲ್ಲ. ಎಷ್ಟರ ಮಟ್ಟಿಗೆ ಮುಂದಿನ ದಿನಗಳಲ್ಲಿ ತಿಳುವಳಿಕೆ ಮೂಡಿಸುತ್ತೀರೋ, ಒಳ್ಳೆಯ ಸದುದ್ದೇಶವಿದ್ದರೆ, ಒಳ್ಳೆಯ ರೀತಿಯಲ್ಲಿ ಮಾಡಿಕೊಳ್ಳಿ, ನಮ್ಮದೇನೂ ವಿರೋಧವಿಲ್ಲ. ಆದರೆ, ಈ 80–90 ಅಂಕಗಳನ್ನು ಪಡೆದಿರತಕ್ಕಂಥ ಮಕ್ಕಳು ಇವತ್ತು ಓದುವುದಕ್ಕೆ ಸಾಧ್ಯವಾಗದೇ ಬೀದಿಗೆ ಬಂದು ನಿಲ್ಲುತ್ತಾರಲ್ಲಾ, ಆ ಮಕ್ಕಳು suicide ಮಾಡಿಕೊಳ್ಳಬೇಕು ಅಥವಾ terroriestಗಳು ಆಗಬೇಕು. ನೀವು ಭಯೋತ್ಪಾದನೆ ಅಳಿಸಬೇಕು ಎಂದು ಹೇಳುತ್ತೀರಿ. ಈ ಭಯೋತ್ಪಾದನೆ ಅಳಿಸಬೇಕಾದರೆ, ನೀವು ಹಣ ಬಿಡುಗಡೆ ಮಾಡಿ, ಏನು ಈ ಕಾರ್ಯಕ್ರಮವನ್ನು ಸರ್ಕಾರದಿಂದ ಮಾಡುತ್ತಿದ್ದೀರಿ, ಇದೇ ರೀತಿ ಮತ್ತೆ ಭಯೋತ್ಪಾದನೆ ಮುಂದುವರೆಯದೇ ಇರುವಂಥ ವಾತಾವರಣ ನಿರ್ಮಾಣ ಮಾಡಬೇಕಾದರೆ, ಇವತ್ತು ಯುವಕರಿಗೆ ಬಡತನದಿಂದ ಏನು ಜೀವನಕ್ಕೆ ತೊಂದರೆಗಳಾಗಿವೆ, ಸಮಾಜಘಾತುಕ ಚಟುವಟಿಕೆಗಳಿಗೆ ಯುವಕರು ಇಳಿಯಬೇಕಾದ ಅನಿವಾರ್ಯ ಪರಿಸ್ಥಿತಿಗೆ ಬಂದಿದ್ದಾರೆ, ಅದು ಇವತ್ತು ಭಯೋತ್ಪಾದನೆಗೆ ಇನ್ನೂ ಹೆಚ್ಚಿನ ಕುಮ್ಮಕ್ಕನ್ನು ಏನು ಕೊಡುತ್ತಿದೆ, ಅದನ್ನು ನಿಲ್ಲಿಸಬೇಕಾದರೆ, ಈ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ಸ್ಪಂದಿಸಬೇಕು. ಈ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂಥ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕು. ಈ ಬಜೆಟ್‌ನ ವಿಷಯದಲ್ಲಿ ಚರ್ಚೆ

ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆಮೇಲೆ ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ಸದಸ್ಯರು ಕೇಳಲಿ. ಏಕೆಂದರೆ ಈಗಾಗಲೇ ಸಾಕಷ್ಟು ಸಮಯವಾಗಿದೆ. ಈ ಹಿಂದೆ ಮಾಡಿದ್ದೆವಲ್ಲಾ ಆ ರೀತಿ ಮಾಡೋಣ. ನಾನು ನಿನ್ನೆಯೂ ಕೂಡ ಹೇಳಿದ್ದೇನೆ. ಉಳಿದವರೂ ಸ್ವಲ್ಪ time limit ಹಾಕಿಕೊಂಡಿದ್ದರೆ ಎಲ್ಲರಿಗೂ ಅವಕಾಶ ಸಿಗುತ್ತಿತ್ತು. **(ಗೊಂದಲ)** ಸ್ಪಷ್ಟೀಕರಣ ಕೇಳುವುದಕ್ಕೆ ಖಂಡಿತವಾಗಿ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗ reply start ಮಾಡಿದರೆ, ಮತ್ತೆ ಒಂದೂವರೆ ಘಂಟೆಯಾಗುತ್ತದೆ. clarification ಕೊಡುವುದಕ್ಕೆ ಹೋದರೆ ಯಾರೂ ಊಟಕ್ಕೆ ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಜಯಚಂದ್ರರವರೇ, ಮಾನ್ಯ ಮುಖ್ಯಮಂತ್ರಿಗಳು ಮೂರು ಗಂಟೆಗೆ ಆ ಹೌಸ್‌ನಲ್ಲಿ ಇರಬೇಕು. ಆದ್ದರಿಂದ ಈಗ ಮಾನ್ಯ ಮುಖ್ಯಮಂತ್ರಿಯವರು reply ಕೊಡುತ್ತಾರೆ.

ಅಧ್ಯಕ್ಷರು: ನಾನು ಸ್ಪಷ್ಟೀಕರಣಕ್ಕೆ ಸದಸ್ಯರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದ 2009–10ನೇ ಸಾಲಿನ ಮುಂಗಡ ಪತ್ರದ ಮೇಲೆ ಕಳೆದ ಮೂರು ದಿವಸಗಳಿಂದ ಸಾಕಷ್ಟು ಚರ್ಚೆಯಾಗಿದೆ. ಪ್ರತಿ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಂದ ಹಿಡಿದು, ಹಿಂದಿನ ಹಣಕಾಸಿನ ಸಚಿವರಾದಂಥ ಮಾನ್ಯ ಸಿದ್ದರಾಮಯ್ಯನವರು ಸೇರಿ, ಹಿಂದಿನ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಸೇರಿ, ಅನೇಕ ಜನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವು ವಿಷಯಗಳಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ, ಕೆಲವು ಬಾರಿ ಟೀಕೆ–ಟಿಪ್ಪಣಿಗಳನ್ನು ಸಹಜವಾಗಿ ಮಾಡುತ್ತಾರೆ. ಇವೆಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಿ, ನಿಮ್ಮ ಸಲಹೆಗಳನ್ನು ಯಾವ ರೀತಿ ಕಾರ್ಯರೂಪಕ್ಕೆ ತರಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡುತ್ತೇನೆ. ತಾವು ಬಹಳ ಗಂಭೀರವಾಗಿ ಈ ಆಯವ್ಯಯ ವಿಚಾರದ ಚರ್ಚೆಯಲ್ಲಿ ಭಾಗವಹಿಸಿ, ನಿಮ್ಮ

ಅನುಭವದ ಹಿನ್ನೆಲೆಯಲ್ಲಿ ನೀವು ಚರ್ಚೆಯಲ್ಲಿ ಪಾಲ್ಗೊಂಡಿದ್ದೀರಿ. ಅದಕ್ಕಾಗಿ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಖರ್ಗೆಯವರು ತಮ್ಮ ಭಾಷಣದ ಸಂದರ್ಭದಲ್ಲಿ ನನ್ನ ಆಯವ್ಯಯದ ಬಗ್ಗೆ, ಮಾಧ್ಯಮದ ಸ್ನೇಹಿತರು ಏನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಎಂದು ಅವರಿಗೆ ಸರಿಕಂಡಂಥ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪತ್ರಿಕೆಗಳು ಬಹಳ ಮಹತ್ತರವಾದ ಪಾತ್ರವನ್ನು ವಹಿಸಿವೆ. ಅದರಲ್ಲೂ electronic mediaದ ಯುಗದಲ್ಲಿ ಯಾರು ಏನೇ ಹೇಳಿದರೂ ಸಹ ಅದನ್ನು ಮತ್ತೆ ತಿರುಚುವುದಕ್ಕೆ ಆಗುವುದಿಲ್ಲ, ದಾಖಲೆಗಳು ಇರುತ್ತವೆ. ಸ್ವಾತಂತ್ರ್ಯ ಬಂದು 60 ವರ್ಷಗಳಲ್ಲಿ ಜನರು ಪ್ರಜ್ಞಾವಂತರಾಗಿದ್ದಾರೆ. ಎಲ್ಲವನ್ನೂ ಬಹಳ ಎಚ್ಚರಿಕೆಯಿಂದ ಗಮನಿಸುತ್ತಿದ್ದಾರೆ. ಅವಕಾಶಗಳು ಸಿಕ್ಕಾಗ ತಮ್ಮ ಅಭಿಪ್ರಾಯಗಳನ್ನು ಮತದಾನ ಮಾಡುವುದರ ಮೂಲಕ, ಅವರಿಗೆ ಬೇಕಾದರವರನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ, ಯಾವುದು ಸರಿ, ಯಾವುದು ತಪ್ಪು ಎನ್ನುವುದನ್ನು ತೀರ್ಪು ಕೊಡುವಂಥ ಶಕ್ತಿ ಇವತ್ತು ನಮ್ಮ ಮತದಾರರಿಗೆ ಬಂದಿದೆ. ಯಾವುದೋ ಒಂದು ಶಕ್ತಿ ಆಧಾರದ ಮೇಲೆ, ಯಾರನ್ನೂ ಮನವೊಲಿಸಿ, ನಾವು ಟೋಪಿ ಹಾಕುವುದಕ್ಕೆ ಆಗುವುದಿಲ್ಲ ಎನ್ನುವುದು ನಮ್ಮೆಲ್ಲರ ಅನುಭವಕ್ಕೆ ಬಂದಿದೆ. ಹಣದ ಬಲ, ಹೆಂಡದ ಬಲ, ತೋಳು ಬಲ, ಅಧಿಕಾರ ಬಲ, ಜಾತಿ, ಇದರ ಆಧಾರದ ಮೇಲೆ electionನಲ್ಲಿ ಗೆಲ್ಲುತ್ತೇವೆ ಎನ್ನುವ ಒಂದು ಕಾಲವಿತ್ತು. ಆದರೆ, ಇವತ್ತು ಜಾಗೃತಿ ಮೂಡಿದೆ. ನಮ್ಮ ಮಾಧ್ಯಮದಲ್ಲಿ ಬಂದಿರುವಂಥಾದ್ದು ಏನೆಂದರೆ, **'ಕನ್ನಡ ಪ್ರಭ:ಸಂಪಾದಕೀಯ'**, ದಿನಾಂಕ 21–02–2009. ಇದು ಒಂದು **ಸರ್ವಗ್ರಾಹಿ ಬಜೆಟ್**, ಯೋಜನಾಬದ್ಧ ಪ್ರಗತಿಯ ಕಲ್ಪನೆಯಲ್ಲಿ ನೀರಾವರಿ, ಕೃಷಿ, ಗ್ರಾಮೀಣಾಭಿವೃದ್ಧಿ, ಗ್ರಾಮೀಣ ರಸ್ತೆಗಳು ಹಾಗೂ ಸಮಗ್ರ ಸ್ವರೂಪದ ಬಡ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರಾಮುಖ್ಯವಿರಬೇಕು, ಅದು ಮಾನ್ಯ ಯಡಿಯೂರಪ್ಪನವರ ಬಜೆಟ್‌ನಲ್ಲಿ ಇದೆ. ದೇವದಾಸಿಯರಿಂದ ಹಿಡಿದು, ಆಟೋ ರಿಕ್ಷಾ ಚಾಲಕರ ಕ್ಷೇಮಾಭಿವೃದ್ಧಿಗೆ, ಹಲವು ವರ್ಗಗಳ ಜನರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಪ್ರಯತ್ನ ಮೊಟ್ಟಮೊದಲ ಬಾರಿಗೆ ನಡೆದಿದೆ ಎನ್ನುವ ಮಾತನ್ನು ಅವರು ಸಂಪಾದಕೀಯದಲ್ಲಿ ಬರೆದಿದ್ದಾರೆ. **'ಸಂಯುಕ್ತ ಕರ್ನಾಟಕ'** ಅದೇ ದಿವಸ **'ಬಹು ಜನ ಹಿತಾಯ–ಸುಖಾಯ'** ಎನ್ನುವ ಶೀರ್ಷಿಕೆಯೊಂದಿಗೆ, ಮುಂಗಡ ಪತ್ರದಲ್ಲಿ ಮುಂಚೂಣಿ ಕ್ಷೇತ್ರಗಳ ಅನುದಾನದಲ್ಲಿ ಸಮತೋಲನ ಸಾಧಿಸಿರುವುದು ಎದ್ದು ಕಾಣುವುದು ಸತ್ಯ. ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳಲು ಒತ್ತು ಕೊಟ್ಟಿರುವಂಥಾದ್ದು. 2009–10ನೇ ಸಾಲಿನ ರಾಜ್ಯ ಮುಂಗಡ ಪತ್ರದ ಸಾರಸತ್ವ. ಹಿಂದು–ಮುಸ್ಲಿಂ ಮತ್ತು ಹಿಂದು–ಕ್ರೈಸ್ತ ಭಾವೈಕ್ಯತಾ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತಾಸೆ ತೋರಿರುವುದು ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ, ಭಾವೈಕ್ಯತಾ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತಾಸೆ ತೋರಿರುವುದು ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ, ಭಾವೈಕ್ಯತೆ ಬಲಗೊಳ್ಳುವ ನಿಟ್ಟಿನಲ್ಲಿ ಸಹಕಾರಿಯಾಗಬಹುದು ಎಂದು

ನಿರೀಕ್ಷೆ ಹುಟ್ಟಿಸಿದೆ. **'ವಿಜಯ ಕರ್ನಾಟಕ ಸಂಪಾದಕೀಯ'** ದಲ್ಲೂ ಕೂಡ ಕೆಲವು ಟೀಕೆ–ಟಿಪ್ಪಣಿಗಳ ಜೊತೆಗೆ ಕೆಲವು ಪ್ರಮುಖ ಅಂಶಗಳಿವೆ. ಅವರು ಮೆಚ್ಚುಗೆ ವ್ಯಕ್ತಪಡಿಸಿ ಹೇಳಿರುವುದೇನೆಂದರೆ, ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ, ಗ್ರಾಮೀಣ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ಇದೆ. ಇಂಧನ ಕ್ಷೇತ್ರವಂತೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಸಾರಿಗೆ, ನಗರಾಭಿವೃದ್ಧಿಗಳು ಆದ್ಯತೆಯನ್ನು ಪಡೆದುಕೊಂಡಿವೆ. ಚಿತ್ರದುರ್ಗದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಶಾಖೆ ಮನವೀಯ. ಪರಿಶಿಷ್ಟ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಕ್ರಮ ಶ್ಲಾಘನೀಯ. ಶೇಕಡ ಮೂರರ ಬಡ್ಡಿದರದ ಸಾಲ ಯೋಜನೆಯ ವಾಣಿಜ್ಯ ಬ್ಯಾಂಕ್‌ನಿಂದ ರೈತರು ಪಡೆದ ಸಾಲಕ್ಕೂ ಅನ್ವಯ ಕೂಡ ಸ್ವಾಗತಾರ್ಹ, ಇದು ವಿಜಯ ಕರ್ನಾಟಕದ ಸಂಪಾದಕೀಯದಲ್ಲಿ ಇರುವಂಥ ಪ್ರಮುಖ ಅಂಶ.

1–30PM

(ಈ ಹಂತದಲ್ಲಿ ಶ್ರೀ ಬೋಪಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರಜಾವಾಣಿ ಸಂಪಾದಕೀಯದಲ್ಲಿ, ಕೃಷಿ, ಜಮೀನು, ಮನೆ, ಅಂಗಡಿ, ಫ್ಲಾಟ್ ಖರೀದಿ ಮೇಲಿನ ಮುದ್ರಾಂಕ ಶುಲ್ಕ, ಪರಿಸರ ಸ್ನೇಹಿ ವಾಹನಗಳ ಮೇಲೆ ತೆರಿಗೆ ನಿಲ್ಲಿಸಿರುವುದು ಸ್ವಾಗತಾರ್ಹ ಹೆಜ್ಜೆ. ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ, ಬಿಜಾಪುರ, ಚಿತ್ರದುರ್ಗ ನದಿ ಮತ್ತು ಜಲಾಶಯಗಳಿಂದ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆ. ಭದ್ರಾ ಮೇಲ್ದಂಡೆ ಯೋಜನೆ ಜಾರಿ ಆರಂಭ. ಪರಿಶಿಷ್ಟ ಜಾತಿ ಪಂಗಡಗಳಿಗೆ ಸೇರಿದ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಸತಿ ಶಾಲೆಗಳ ಸ್ಥಾಪನೆ. ಆಯುರ್ವೇದ ಅಭಿವೃದ್ಧಿಗೆ ವಿಶ್ವವಿದ್ಯಾನಿಲಯ, ತೋಟಗಾರಿಕೆ ಕಾಲೇಜು, ಗಡಿ ಅಭಿವೃದ್ಧಿ ಪ್ರಾಧಿಕಾರ ರಚನೆ. ಬೆಂಗಳೂರು ಮತ್ತು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಬಜೆಟ್ ಆದ್ಯತೆ ನೀಡಿದೆ. ಸರ್ಕಾರಿ ಯೋಜನೆಗಳ ಜಾರಿಯಲ್ಲಿ ದಕ್ಷತೆ ಹೆಚ್ಚಿಸುವ ದೃಷ್ಟಿಯಿಂದ ವೆಚ್ಚ ಸುಧಾರಣಾ ಆಯೋಗವನ್ನು ರಚಿಸುವ ನಿರ್ಧಾರ ಒಂದು ಮಹತ್ವದ ಹೆಜ್ಜೆ, ಎನ್ನುವ ಮಾತನ್ನು ಹೇಳುತ್ತಾರೆ.

Deccan Herald Editorial ಅದೇ ದಿವಸ, "One of the positive features of the budget is the focus on agriculture, extending the subsidized 3 per cent loan scheme to borrowings from commercial banks, increasing the volume of revolving fund for support price of agriculture products and organic farming. These measures should help the farmers caught up in an agrarian crisis and boost the sagging agricultural production in the state."

Deccan chronicle: "BSY's magic budget is booster education, power, irrigation and others."

Economic Times: "Bangalore set for a facelift" "The Budget Feels good, looks good" ಎಂದು ಪ್ರಕಟಿಸಿವೆ.

ಇನ್ನು ನಮ್ಮ budget ಬಗ್ಗೆ ತಜ್ಞರು ಮತ್ತು ಸಾಮಾನ್ಯ ಜನರ ಅಭಿಪ್ರಾಯಗಳು ದಿನಾಂಕ 21.2.2009ರ ದಿನಪತ್ರಿಕೆಗಳಲ್ಲಿ ಈ ಕೆಳಕಂಡಂತೆ ಪ್ರಕಟವಾಗಿವೆ:

Times of Indiaದಲ್ಲಿ Smt. Kiran Mazumdar shaw, CMD, BIOCON ರವರು "The Chief Minister has delivered a pro-development budget which deals with the larger needs of the state." ಎಂದು ಹೇಳಿದ್ದಾರೆ: **Times of India**ದಲ್ಲಿ Sri Vishal Bali, CEO, Wockhardt Hospitals Group ರವರು "The budget provides for overall development of both rural and urban Karnataka. Providing emergency care through 517 additional ambulances and more than Rs.40 Crores to upgrade hospitals is progressive." ಎಂದು ಹೇಳಿದ್ದಾರೆ.

ವಿಶ್ರಾಂತ ಕುಲಪತಿ ಡಾ. ಎಂ ಎಸ್.ತಿಮ್ಮಪ್ಪನವರು, ಶಿಕ್ಷಣ ಕ್ಷೇತ್ರಕ್ಕೆ ಬಜೆಟ್ ಆಶಾದಾಯಕ, ಸರ್ಕಾರ ಸರಿಯಾದ ಹೆಜ್ಜೆಯಿಟ್ಟಿದೆ ಎಂದು ಹೇಳಿದ್ದಾರೆ.

Deccan Heraldನಲ್ಲಿ Prof. G.Ramesh, IIMB ರವರು "This budget has done a decent job in maintaining allocations, agricultural and rural thrust and services oriented. It spells out development plan for underdeveloped regions of Karnataka which is laudable." ಎಂದು ಹೇಳಿದ್ದಾರೆ:

ಉದಯವಾಣಿಯಲ್ಲಿ ಪ್ರಸ್ತುತ ಸಾಲಿನ ಬಜೆಟ್ ಅಭಿವೃದ್ಧಿ ಪೂರ್ವಕವಾಗಿದೆ. ಬಜೆಟ್‌ನಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಸಂಸದೀಯ ಸಂಸ್ಥೆ ಉದಯವಾಣಿಯಲ್ಲಿ ಹೇಳಿರುವ ಮಾತು.

ಕನ್ನಡ ಪ್ರಭದಲ್ಲಿ, ಶ್ರೀ ಕೃಷ್ಣಯ್ಯ. ಶಿಕ್ಷಣ ತಜ್ಞರು, ಶೈಕ್ಷಣಿಕ ಸಂಸ್ಥೆಗಳು ನಡೆಸುವ ಶಾಲಾ ಕಾಲೇಜುಗಳ ಮೇಲೆ ವೃತ್ತಿ ತೆರಿಗೆ ನೀಡಿರುವುದು ಶ್ಲಾಘನೀಯ. ಶಿಕ್ಷಣ ಕ್ಷೇತ್ರಕ್ಕೆ ಎಂಟು ಸಾವಿರ ಕೋಟಿ ಹೆಚ್ಚು ಇರಿಸಿರುವುದು ಖುಷಿ ತಂದಿದೆ.

ಕನ್ನಡ ಪ್ರಭದಲ್ಲಿ, ಶ್ರೀಮತಿ ರಾಜೇಶ್ವರಿ, ಖಾಸಗಿ ಕಂಪನಿಯ ಉದ್ಯೋಗಿ, ಇದು ಒಳ್ಳೆಯ ಬಜೆಟ್ ಎಂದು ಕರೆಯಬಹುದು, ಮಹಿಳೆಯರಿಗೆ ಕೆಲವು ಉತ್ತಮವಾದ ಯೋಜನೆಗಳನ್ನು ಘೋಷಿಸಿದ್ದಾರೆ. ಜೊತೆಗೆ ಹಿಂದುಳಿದ ವರ್ಗದವರಿಗೆ ಸಹಾಯವಾಗುವ ಅಂಶಗಳು ಬಜೆಟ್‌ನಲ್ಲಿದೆ.

ಕಾರ್ಮಿಕ ಮುಖಂಡ, ಶ್ರೀ ಶ್ರೀನಿವಾಸ ಹೇಳಿದ್ದಾರೆ, ಸಾಮಾನ್ಯ ಜನರಿಗಂತೂ ಈ ಬಜೆಟ್ ಖಂಡಿತ ಮೋಸ ಮಾಡಿಲ್ಲ. ಎಲ್ಲಾ ಕ್ಷೇತ್ರಗಳಿಗೆ ಸೂಕ್ತ ರೀತಿಯಲ್ಲಿ ಹಣ ಹಂಚಿಕೆ ಮಾಡಿದ್ದಾರೆ. ಆರ್ಥಿಕ ಕುಸಿತದ ಪರಿಣಾಮ ಬಜೆಟ್ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿದಿದ್ದೆ, ಆದರೆ, ಆ ರೀತಿ ಏನೂ ಆಗಿಲ್ಲ.

ಕನ್ನಡ ಪ್ರಭದಲ್ಲಿ ರೇಣುಕಾ ಪ್ರಸಾದ್, ಉದ್ಯೋಗಿ, ಆರ್ಥಿಕ ಕುಸಿತದ ಕಾಲದಲ್ಲಿ ಇದು ಅತ್ಯುತ್ತಮ ಬಜೆಟ್ ಎಂದು ಹೇಳಬಹುದು. ರೈತರಿಗೆ ಶೇಕಡ 3 ರ ಬಡ್ಡಿದರದಲ್ಲಿ ಸಾಲ ನೀಡಿರುವುದು ಸ್ವಾಗತಾರ್ಹ. ಕರ್ನಾಟಕಕ್ಕೆ ಇಂತಹ ಬಜೆಟ್ ಬೇಕಾಗಿತ್ತು. ಸರ್ಕಾರಕ್ಕೆ ಧನ್ಯವಾದ ಅರ್ಪಿಸಬೇಕು.

ಹೀಗೆ ಆಟೋ ಹಾಗೂ ಟ್ಯಾಕ್ಸಿ ಚಾಲಕರಿಗೆ ವಿಮಾ ಯೋಜನೆಯನ್ನು ಕಲ್ಪಿಸಲು ಮುಂದಾಗಿರುವುದು ಅಭಿನಂದನೀಯ.

Times of Indiaದಲ್ಲಿ Smt. Sheela Anish, Advocate ರವರು "The CM has brought smile on everybody's face as adequate focus on education, health and women." ಎಂದು ಹೇಳಿದ್ದಾರೆ. ಹೀಗೆ ಖ್ಯಾತ ಕೈಗಾರಿಕೋದ್ಯಮಿಗಳು, ನಾಡಿನ ಹಿತದ ಬಗ್ಗೆ ಚಿಂತನೆ ಮಾಡುವವರು, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ.

ನಾನು ಈಗಾಗಲೇ, 2009–10ನೇ ಸಾಲಿಗೆ ಸುಮಾರು 62,414 ಕೋಟಿ ರೂ.ಗಳ ಆಯವ್ಯಯವನ್ನು ಸದನದ ಮುಂದೆ ಮಂಡಿಸಿದ್ದೇನೆ. ರಾಜ್ಯದ ಪ್ರತಿಯೊಬ್ಬ ವ್ಯಕ್ತಿಯ ಮೇಲೆ 10 ಸಾವಿರ ರೂ.ಗಳಿಗಿಂತ ಹೆಚ್ಚು ಖರ್ಚು ಮಾಡುವ ಉದ್ದೇಶವಿರುವ ಆಯವ್ಯಯ ನಿಮ್ಮ ಮುಂದೆ ಇದೆ. ಆರ್ಥಿಕ ಹಿನ್ನಡೆ ಪರಿಸ್ಥಿತಿಯಲ್ಲೂ ಸಹ ಸಾರ್ವಜನಿಕ ವಲಯಗಳಲ್ಲಿ ಹೆಚ್ಚು ವೆಚ್ಚ ಮಾಡುವ ಪ್ರಯತ್ನದಲ್ಲಿ ಇದೊಂದು ಮಹತ್ವಕಾಂಕ್ಷಿಯ ಆಯವ್ಯಯ. ಹಿಂದಿನ ನಾಲ್ಕು ವರ್ಷಗಳಲ್ಲಿ ಆಯವ್ಯಯದಿಂದಾಗಿರುವ ಒಟ್ಟು ಖರ್ಚಿನ ವಿವರ ಈ ರೀತಿ ಇದೆ. ಏಕೆಂದರೆ, ತಮಗೆ ಗೊತ್ತಿರದ ಸಂಗತಿ ಯಾವುದೋ ಇಲ್ಲ. ಎಲ್ಲವನ್ನೂ ಅಧ್ಯಯನ ಮಾಡುತ್ತೀರಿ, ನೋಡುತ್ತೀರಿ. ಆದರೆ, ಏಕೋ ಸತ್ಯಸಂಗತಿಗಳನ್ನು ಒಪ್ಪಿಕೊಳ್ಳಲು

ಹಿಂದು ಮುಂದು ನೋಡುತ್ತಿರುವುದರಿಂದ ನಾನು ಅನಿವಾರ್ಯವಾಗಿ ಪತ್ರಿಕೆಯಲ್ಲಿ ಬಂದಿರುವ ಕೆಲವು ಅಂಶಗಳನ್ನು ಹೇಳಲು ಪ್ರಯತ್ನ ಮಾಡುತ್ತೇನೆ. ಇಲ್ಲದಿದ್ದರೆ ಬೇರೆ ಏನೂ ಇಲ್ಲ. ಖರ್ಚು ವೆಚ್ಚದ ಬಗ್ಗೆ ಮಾತನಾಡಿದ್ದೀರಿ.

2004–05ರಲ್ಲಿ 35,709 ಕೋಟಿ, ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿದರೆ 3% ಏರಿಕೆಯಾಗಿತ್ತು. 2005–06ರಲ್ಲಿ 34,973 ಕೋಟಿ, ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ,–2% ಆಗಿತ್ತು. 2006–07ರಲ್ಲಿ ಮಾತ್ರ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಕಷ್ಟು ಸಾಧನೆಯಾಗಿದೆ. 44,085 ಕೋಟಿ, ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿದರೆ 26% ಏರಿಕೆಯಾಗಿದೆ. 2007–08ರಲ್ಲಿ 48,109 ಕೋಟಿ, 9% ಏರಿಕೆಯಾಗಿದೆ. 2008–09ರಲ್ಲಿ 54,230 ಕೋಟಿ, ಹಿಂದಿನ ವರ್ಷಕ್ಕಿಂತ 13% ಏರಿಕೆಯಾಗಿದೆ. 2009–10ರಲ್ಲಿ 62,414 ಕೋಟಿ, 15% ಏರಿಕೆ. ಅಂದರೆ, 2005–06 ರಿಂದ 2009–10ರವರೆಗೆ ನಾಲ್ಕು ವರ್ಷಗಳಲ್ಲಿ ಒಟ್ಟು ವೆಚ್ಚದ ಅಂದಾಜು, ಶೇ.78ರಷ್ಟು ಹೆಚ್ಚಾಗಿದೆ. 2009–10ರ ಒಟ್ಟು ವೆಚ್ಚದ ಅಂದಾಜು 2008–09ರ ಪರಿಷ್ಕೃತ ಅಂದಾಜಿಕ್ಕಿಂದ ಶೇ.15 ರಷ್ಟು ಹೆಚ್ಚಾಗಿದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಈಗ ಪ್ರಶ್ನೆ ಇರುವುದು ಆರ್ಥಿಕ ಹಿನ್ನಡೆಯಾಗಿರುವ ಈ ಸಂದರ್ಭದಲ್ಲಿ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು ಭಾರತ ಸರ್ಕಾರ ಸೇರಿ, ಹೇಗೆ ಯೋಚನೆ ಮಾಡುತ್ತಿದ್ದೇವೆ? ನಾವು ಹೇಗೆ ಯೋಚನೆ ಮಾಡಬೇಕು? ಈ ಬಗ್ಗೆಯೂ ಯೋಚನೆ ಮಾಡಬೇಕಾಗಿದೆ. ಏಕೆಂದರೆ, ನಾನು 2009–10ರ ಆಯವ್ಯಯ ಪ್ರಾರಂಭದಲ್ಲೇ ಆರ್ಥಿಕ ಹಿನ್ನಡೆ ಏನಾಗಿದೆ ಎನ್ನುವ ವಿವರಣೆ ಕೊಟ್ಟಿದ್ದೇನೆ. ಜಾಗತಿಕ ಮಟ್ಟದಲ್ಲಿ ನಡೆದಿರುವ ಕೆಲವು ವಿದ್ಯಮಾನಗಳು ಜಗತ್ತಿನ ಒಟ್ಟಾರೆ ಆರ್ಥಿಕ ಪರಿಸ್ಥಿತಿಯ ಮೇಲೆ ಹೇಗೆ ಹಿಂಜರಿತವಾಗಿದೆ, ಭಾರತ ಹಾಗೂ ಕರ್ನಾಟಕ ಆರ್ಥಿಕ ವ್ಯವಸ್ಥೆಯ ಮೇಲೆ ಆಗಿರುವ ಪರಿಣಾಮವನ್ನು ನಾನು ಪ್ರಸ್ತಾಪ ಸೂಚನೆಯಲ್ಲಿ ಮಾಡಿದ್ದೇನೆ. ಈ ಪರಿಸ್ಥಿತಿಯಲ್ಲಿ ಜಗತ್ತಿನ ಅತ್ಯಂತ ಮುಂದುವರೆದಿರುವ ರಾಷ್ಟ್ರಗಳ ಸರ್ಕಾರ ಏನು ಮಾಡುತ್ತಿವೆ? ಭಾರತ ಸರ್ಕಾರ ಏನು ಮಾಡುತ್ತಿದೆ? ಕರ್ನಾಟಕ ಸರ್ಕಾರ ಏನು ಮಾಡಬೇಕು? ಎಂಬ ಪ್ರಶ್ನೆಗಳಿಗೆ ಈ ಹಿನ್ನೆಲೆಯಲ್ಲಿ ತಾವು ಆಯವ್ಯಯವನ್ನು ನೋಡಬೇಕೆಂದು ನಾನು ತಮ್ಮಲ್ಲಿ ಅತ್ಯಂತ ವಿನಮ್ರದಿಂದ ಮನವಿ ಮಾಡುತ್ತಿದ್ದೇನೆ. ಮುಂದುವರೆದ ರಾಷ್ಟ್ರಗಳಾದ, ಅಮೆರಿಕಾ, ಬ್ರಿಟನ್, ಜರ್ಮನ್ ಮುಂತಾದವುಗಳು ಈ ಸರ್ಕಾರದ ಆರ್ಥಿಕ ಹಿಂಜರಿತವನ್ನು ಎದುರಿಸಲು ತಮ್ಮ ವೆಚ್ಚವನ್ನು ಕಡಿಮೆ ಮಾಡುತ್ತಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಬದಲಿಗೆ ತಮ್ಮ ದೇಶಗಳಿಗೆ, ಕೈಗಾರಿಕೆಗಳಿಗೆ, ಬ್ಯಾಂಕ್‌ಗಳಿಗೆ, ಬಂಡವಾಳ, ಸಾಲ, ತೆರಿಗೆ ವಿನಾಯಿತಿ ನೀಡಿ ತಮ್ಮ ವೆಚ್ಚವನ್ನು ಹೆಚ್ಚಿಸುತ್ತಿವೆ. ಹಿನ್ನಡೆಯಾದಾಗ, ಸರ್ಕಾರ ಆ ಭಾರವನ್ನು ಹೊತ್ತು ಜನತೆಯ ಸಹಕಾರಕ್ಕೆ ಹೋಗಬೇಕು. ಇಲ್ಲದಿದ್ದರೆ, ಆರ್ಥಿಕ ವ್ಯವಸ್ಥೆ ಮೇಲೆ ಬಹಳ ದುಷ್ಪರಿಣಾಮವಾಗುತ್ತದೆ. ಇದು ಜಗತ್ತಿನ ಮುಂದುವರೆದ ಎಲ್ಲಾ ರಾಷ್ಟ್ರಗಳ

ಮಾಡಿರುವಂಥಾದ್ದು. ಭಾರತ ಸರ್ಕಾರವನ್ನು ನೀವು ತೆಗೆದುಕೊಳ್ಳಿ, ಭಾರತದಲ್ಲಿ ಕೇಂದ್ರ ಸರ್ಕಾರವು ಸಹಾ 2008–09ರಲ್ಲಿ ಸುಮಾರು 90 ಸಾವಿರ ಕೋಟಿ ತೆರಿಗೆ ಸಂಗ್ರಹದಲ್ಲಿ ಕೊರತೆಯನ್ನು ಎದುರಿಸುತ್ತಿದೆ. ಆದರೆ, ಈ ಹಿನ್ನಡೆ ಆದಮೇಲೂ ಸಣ್ಣ ಕೈಗಾರಿಕೆಗಳಿಗೆ, ವಾಣಿಜ್ಯೋದ್ಯಮಗಳಿಗೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ತೆರಿಗೆಗಳನ್ನು ಸ್ವಲ್ಪ ಇಳಿಸಿದೆ. ವೆಚ್ಚವನ್ನು ಹೆಚ್ಚಿಸಿಕೊಂಡಿದೆ. ರಾಜ್ಯಗಳು ಸಹಾ ವೆಚ್ಚವನ್ನು ಹೆಚ್ಚಿಸುವಂತೆ ಸಲಹೆ ಮಾಡಿದೆ. ಕೇಂದ್ರ ಸರ್ಕಾರ, 2009–10ರ ಮಧ್ಯಂತರ ಅವಧಿಯಲ್ಲಿ ಯಾವುದೇ ಉತ್ತೇಜನ ತೋರಿಸದೆ, ಒಂದು ನೀರಸವಾದ ಆಯವ್ಯಯವನ್ನು ದಿನಾಂಕ 16.2.2009ರಂದು ಮಂಡಿಸಿದೆ.

ಒಂದೇ ವಾರದಲ್ಲಿ ಅವರ ಚಿಂತನೆಯೇ ಬದಲಾಯಿತು. ಹೊಸ ಸರ್ಕಾರ ಬರುತ್ತದೆ, ಇವತ್ತೋ, ನಾಳೆಯೋ ಚುನಾವಣಾ ದಿನಾಂಕ ಘೋಷಣೆಯಾಗುತ್ತಿದೆ. ಇಷ್ಟಾದರೂ ಮಧ್ಯಂತರ ಆಯವ್ಯಯವನ್ನು ಅನುಮೋದಿಸುವ ಮುನ್ನ 30,000 ಕೋಟಿ ರೂ.ಗಳಷ್ಟು ತೆರಿಗೆ ವಿನಾಯಿತಿ ಘೋಷಿಸಿದಿರಿ. ಕರ್ನಾಟಕ ಸರ್ಕಾರ ತನ್ನ ಪೂರ್ಣಾವಧಿ ಬಜೆಟ್‌ನಲ್ಲಿ ನಮ್ಮ ಆರ್ಥಿಕ ನೀತಿಯನ್ನು ಬಹಳ ಸ್ಪಷ್ಟವಾಗಿ ವಿವರಿಸಿರುವುದನ್ನು ಮಾನ್ಯ ಸದಸ್ಯರು ಸ್ವಲ್ಪ ಸಮಾಧಾನ ಚಿತ್ತವಾಗಿ ನೋಡಬೇಕು, ಪರಿಶೀಲಿಸಬೇಕು ಮತ್ತು ಅದರ ಆಧಾರದ ಮೇಲೆ ಸಲಹೆ ಕೊಡಬೇಕೆಂದು ವಿನಂತಿಸುತ್ತೇನೆ.

2008–09ರ ಆಯವ್ಯಯದ ಪ್ರಕಾರ ಕೇಂದ್ರದ ವಿತ್ತೀಯ ಕೊರತೆ ರಾಷ್ಟ್ರೀಯ ಆದಾಯ GDP 2.5%ಗೆ ಇಳಿಯಬೇಕಾಗಿತ್ತು. ಇತ್ತೀಚೆಗೆ ಪ್ರಣಬ್ ಮುಖರ್ಜಿಯವರು ಮಂಡಿಸಿದ ಮಧ್ಯಂತರ ಆಯವ್ಯಯದಲ್ಲಿ ಕಂಡು ಬರುವಂತೆ 2008–09ರ ವಿತ್ತೀಯ ಕೊರತೆ GDP ಶೇಕಡ 6ಕ್ಕೆ ಏರಿದೆ. ಅಂದರೆ, ಕೇಂದ್ರದ ರಾಜಸ್ವ ಕೊರತೆ ಶೇ.1ರ ಬದಲು ಶೇ.4.4ಕ್ಕೆ ಏರಿದೆ. ಮತ್ತೆ ಕೇಂದ್ರದ ಪೂರಕ ಅಂದಾಜುಗಳ ಬಗ್ಗೆ ತಮಗೆ ಆಶ್ಚರ್ಯವಾಗಬಹುದು. ಕೇಂದ್ರ ಸರ್ಕಾರದ 2008–09ರ ಆಯವ್ಯಯದ ಪ್ರಕಾರ ಅಂದಾಜು ವೆಚ್ಚ 7,50,884 ಕೋಟಿ. ವಾಸ್ತವಿಕವಾಗಿ ಆಗಿರುವ ವೆಚ್ಚ 9,953 ಕೋಟಿ. ಅವರ ಪೂರಕ ಅಂದಾಜುಗಳ ಮೊತ್ತ 1,48,094 ಕೋಟಿ. ಈ ರಾಜ್ಯದ ಪೂರಕ ಅಂದಾಜುಗಳು 3,419 ಕೋಟಿ. ನಾನು ಏತಕ್ಕೋಸ್ಕರ ಈ ಹಿನ್ನೆಲೆಯಲ್ಲಿ ಹೇಳುತ್ತೇನೆಂದರೆ, ಇವತ್ತು ಆರ್ಥಿಕ ವ್ಯವಸ್ಥೆಯನ್ನು ಉತ್ತೇಜನಗೊಳಿಸುವುದಕ್ಕೆ, ಕೈಗಾರಿಕೆ ಬೆಳೆಸುವುದಕ್ಕೆ ಮತ್ತು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾವು ಸ್ವಲ್ಪ ಭಾರ ಹೊರಬೇಕಾಗುವ ಅನಿವಾರ್ಯ ಪರಿಸ್ಥಿತಿ ಇದೆ. ಆ ದಿಕ್ಕಿನಲ್ಲಿ ನಾನು ಪ್ರಯತ್ನ ಮಾಡಿದ್ದೇನೆ.

ಆದುದರಿಂದ, ಕರ್ನಾಟಕ ರಾಜ್ಯದ ದೀರ್ಘಾಕಾಲೀನ ಅಭಿವೃದ್ಧಿ ಚಿಂತನೆ ಮಾಡುವ ಮೂಲಕ ಕೈಗಾರಿಕೆಗಳು ಮತ್ತು ಸೇವಾ ವಲಯವು ಈ ಪ್ರಗತಿ

ಸಾಧಿಸಬೇಕಾಗಿರುವುದರಿಂದ ನಾವು ಈಗಾಗಲೇ ಶೇಕಡ 60ರಷ್ಟು ಜನರಿಗೆ ಉದ್ಯೋಗ ನೀಡುವಂತಹ ಕೃಷಿ ಕ್ಷೇತ್ರದ ರಕ್ಷಣೆ ಮಾಡುವುದರ ಜೊತೆಗೆ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲೂ ಜವಾಬ್ದಾರಿ ಹೊತ್ತಿರುವ ರಾಜ್ಯ ಸರ್ಕಾರವು ವಿಕಾಸಕ್ಕೆ ಅನುವು ಮಾಡಿಕೊಡುತ್ತದೆ. ಅದಕ್ಕಾಗಿಯೇ ನಮ್ಮ ಯೋಜನಾ ಗಾತ್ರ 22,118 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿನಿಂದ 29,500 ಕೋಟಿ ರೂ.ಗಳಿಗೆ ಬೆಳೆಯುತ್ತಿದೆ ಎನ್ನುವುದಕ್ಕೆ ಈ ಎಲ್ಲಾ ಹಿನ್ನೆಲೆಗಳೂ ಕಾರಣವಾಗಿದೆ. ಈ ಎಲ್ಲಾ ಹಿನ್ನೆಲೆಗಳ ಆಧಾರದ ಮೇಲೆ ನಾವು ಈ ಕೆಲಸ ಮಾಡಿದ್ದೇವೆ. ಮತ್ತು ನಮ್ಮ ರಾಜ್ಯದ ವಿತ್ತೀಯ ಶಿಸ್ತಿನ ಬಗ್ಗೆ ಅತ್ಯಂತ ವಿನಯದಿಂದ ನಿಮಗೊಂದು ವಿಚಾರ ಹೇಳಬಯಸುತ್ತೇನೆ. ದೇಶದ 3–4 ರಾಜ್ಯಗಳಲ್ಲಿ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಬಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇದರ ಬಗ್ಗೆ ಯಾವ ಸಂಶಯವೂ ಬೇಡ. ನಿಮಗೆ ಎಲ್ಲಾ ಅಂಕಿ–ಅಂಶಗಳನ್ನೂ ಒದಗಿಸಿಕೊಡುತ್ತೇನೆ. ಆದುದರಿಂದ, ಈ ಸಲದ ವಿತ್ತೀಯ ಕೊರತೆ ಕೇಂದ್ರ ಸರ್ಕಾರವು ಸೂಚಿಸಿದಂತೆ ಶೇಕಡ 3.5ರೊಳಗೆ ಇರುತ್ತದೆ. ಈಗಾಗಲೇ ಕೇಂದ್ರ ಸರ್ಕಾರ ಘೋಷಿಸಿದೆ. ಆದರೂ ನಾವು ಕಡಿಮೆಗೊಳಿಸುವುದಕ್ಕೆ ಪ್ರಯತ್ನಿಸುತ್ತೇವೆನ್ನುವ ಭರವಸೆಯನ್ನು ಪ್ರಾರಂಭದಲ್ಲಿ ಕೊಡುವುದಕ್ಕೆ ಇಚ್ಛಿಸುತ್ತೇನೆ.

ಸ್ವಾಮಿ, ತಾವು ಮಾತನಾಡುತ್ತಾ ಹೇಳಿದಿರಿ. ಬಹಳಷ್ಟು ಸಮಸ್ಯೆಗಳಿವೆ, ಮಧ್ಯದಲ್ಲಿ ಮಾನ್ಯ ಕುಮಾರಸ್ವಾಮಿಯವರು ಮಾತನಾಡಿದರು ಎಂದು ಹೇಳಿದೆ. ನಿಜ, ನಾನು ಒಪ್ಪಿಕೊಳ್ಳುತ್ತೇನೆ. ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ ಇದೆ, ರಸ್ತೆಗಳ ಸ್ಥಿತಿ ಹದಗೆಟ್ಟಿದೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಪರಿಸ್ಥಿತಿ ಸರಿಯಿಲ್ಲ, ಮೂಲಭೂತ ಸವಲತ್ತುಗಳಿಲ್ಲ. ನೀರಾವರಿ ಯೋಜನೆಗಳ ಕೊರತೆ ಇದೆ, ದೊಡ್ಡ ಪ್ರಮಾಣದಲ್ಲಿ ಇನ್ನಷ್ಟು ಮಾಡಬೇಕು. ರೈತನ ಸ್ಥಿತಿ ಹದಗೆಟ್ಟಿದೆ. ನಾನು ಅತ್ಯಂತ ಕಳಕಳಿಯಿಂದ ನಿಮ್ಮನ್ನು ಕೇಳುವುದಕ್ಕೆ ಇಚ್ಛಿಸುವುದೇನೆಂದರೆ, ಇದಕ್ಕೆ ನಾವೆಲ್ಲರೂ ಜವಾಬ್ದಾರರು ತಾನೇ? ನೀವು ಯಾವಾಗ ಆರೋಪ ಮಾಡಬೇಕು? ನಾವು 30–40 ವರ್ಷಗಳ ಕಾಲ ಆಡಳಿತ ನಡೆಸಿ ಆ ಕಡೆ ಕುಳಿತು, ನೀವು ಇತ್ತೀಚೆಗೆ ಬಂದು 8–9 ತಿಂಗಳಿನಿಂದ ಇತ್ತ ಕಡೆ ಕುಳಿತಿದ್ದರೆ, ನೀವು ಬೊಟ್ಟು ತೋರಿಸುವ ಮೂಲಕ, 'ನೋಡಿ, ಈ ಸ್ಥಿತಿಗೆ ನೀವು ತಂದಿದ್ದೀರಿ' ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಆಡಳಿತ ನಡೆಸಿದವರು ನೀವು. ಇವತ್ತು ಒಳ್ಳೆಯದಾಗಿದ್ದರೆ ಅದಕ್ಕೆ ನೀವೇ ಕಾರಣ. ಈ ಹದಗೆಟ್ಟ ಪರಿಸ್ಥಿತಿ ಬಂದಿದೆಯೆಂದು ಪ್ರತಿಯೊಬ್ಬ ನಮ್ಮ ಹಿರಿಯ ಶಾಸಕರು ಏನು ಮಾಡುತ್ತಿದ್ದಾರೆ, ಅದಕ್ಕೆ ನೀವೇ ಕಾರಣ ಹೊರತು ಯಡಿಯೂರಪ್ಪ ಅಲ್ಲ.

ಆದುದರಿಂದ, ವಿನಯದಿಂದ ನಿಮಗೆ ಹೇಳುವುದಕ್ಕೆ ನಾನು ಇಚ್ಛಿಸುವುದೇನೆಂದರೆ, ಈ ರೀತಿ ಬಜೆಟ್ ಬಗ್ಗೆ ಚರ್ಚೆಯಾಗುವ ಕಾಲದಲ್ಲಿ, ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಕಾಲದಲ್ಲಿ ಸಮಚಿತ್ತದಿಂದ ನಾವೆಲ್ಲರೂ ಒಟ್ಟಿಗೆ ಕುಳಿತು, ಮಾನ್ಯ ಕುಮಾರಸ್ವಾಮಿಯವರು ಮಾತನಾಡುತ್ತಿದ್ದಾಗ, ನಾನು ಮಾತನಾಡಿ ಒಂದು ಸಲಹೆ ಕೊಟ್ಟೆ. "ಯಡಿಯೂರಪ್ಪನವರೆ, ಈ ಸಲ ಈ ಬಾಬ್ತು ಬೇಡ. ಈ ವರ್ಷ ನೀವು ಇದಕ್ಕೆ ಆದ್ಯತೆ ಕೊಡಲೇಬೇಡಿ, ಇಂತಹುದಕ್ಕೆ ಆದ್ಯತೆ ಕೊಡಿ, ನಾವು ಒಟ್ಟಾಗಿ ನಿಮಗೆ ಸಹಕಾರ ಕೊಡುತ್ತೇವೆ" ಎಂದರೆ, ನೀವು ಹೇಳಿದ್ದಕ್ಕೆ ಆದ್ಯತೆ ಕೊಡಲು ನಾವು ಸಿದ್ಧರಿದ್ದೇವೆ. ನೀರಾವರಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣಕ್ಕೆ ಆದ್ಯತೆ ಕೊಡಬೇಕಾಗಿದೆ. ಪರಿಶಿಷ್ಟ ಜಾತಿ, ವರ್ಗಗಳ ಜನರ ಸ್ಥಿತಿ–ಗತಿಗಳು, ಆ ಕಾಲೋನಿಗಳು, ಅವರ ಪರಿಸ್ಥಿತಿಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಈ ಪರಿಸ್ಥಿತಿಗಳನ್ನು ಸುಧಾರಿಸುವುದಕ್ಕೆ ನಾನು ದಿಟ್ಟ ಹೆಜ್ಜೆಯನ್ನು ಪ್ರಾಮಾಣಿಕವಾಗಿ ಇಡುವಂತಹ ಪ್ರಯತ್ನ ಮಾಡಿದ್ದೇನೆ ಎನ್ನುವಂತಹ ಮಾತನ್ನು ಮಾತ್ರ ನಾನು ಈ ಸಂದರ್ಭದಲ್ಲಿ ನಿಮಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಯಾರು ಬೇಕಾದರೂ ಹಗುರವಾಗಿ ಮಾತನಾಡಬಹುದು. ಈ ದೇಶದಲ್ಲಿ ಯಾವುದಾದರೂ ರಾಜ್ಯ ರಾಷ್ಟ್ರೀಕೃತ ಪಡೆಯುವ ಸಾಲಕ್ಕೆ ಶೇಕಡ 3ರ ಬಡ್ಡಿ ದರ ವಿಧಿಸುತ್ತೇವೆ ಎಂದು ಹೇಳಿದಂತಹ ಈ ದೇಶದಲ್ಲಿ ಯಾವುದಾದರೊಂದು ರಾಜ್ಯವಿದೆಯೇ? ಹೇಳಿ. ನಾವು ಒಂದು ಯೂನಿಟ್ ವಿದ್ಯುತ್‌ಗೆ ಏಳೂವರೆ, ಎಂಟು ರೂಪಾಯಿ, ಒಂಭತ್ತು ರೂಪಾಯಿಗೆ ಖರೀದಿಸುತ್ತಿರುವ ಈ ಕಾಲದಲ್ಲಿ ನೀವು ವಿದ್ಯುತ್ತನ್ನೇ ಕೊಡುತ್ತಿಲ್ಲವೆಂದರೆ, ಹಾಗೆ ಯಾರು ಹೇಳಿದರು ಸ್ವಾಮಿ? ವಿದ್ಯುತ್ತನ್ನು ಅಪೇಕ್ಷಿತ ಮತ್ತು ಅಗತ್ಯಕ್ಕನುಗುಣವಾಗಿ ಕೊಡುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಕಾರಣ, ನೀವು ಆಡಳಿತ ನಡೆಸುವ ಕಾಲದಲ್ಲಿ ಅದಕ್ಕೆ ಆದ್ಯತೆ ಕೊಡಲಿಲ್ಲ. ವಿದ್ಯುತ್‌ಗೆ ಏನು ಆದ್ಯತೆ ಕೊಡಬೇಕಾಗಿತ್ತು, ನಮ್ಮ ರಾಜ್ಯದ ಅಭಿವೃದ್ಧಿಗೆ ವಿದ್ಯುತ್, ನೀರು ಅತ್ಯಂತ ಪ್ರಮುಖವಾದ ಅಂಶವೆಂಬುದನ್ನು ತಾವು ಮರೆತು ಹೋಗಿದ್ದರ ಪರಿಣಾಮ ಸಮಸ್ಯೆಗಳುಂಟಾದವು. ಆದರೆ, ನಾನು ನಿಮಗೆ ಇವತ್ತು ಅತ್ಯಂತ ಜವಾಬ್ದಾರಿಯಿಂದ ಒಂದು ಮಾತನ್ನು ಹೇಳುತ್ತೇನೆ. ಇನ್ನು ನಾಲ್ಕು ವರ್ಷ ಕಾಯುತ್ತಿರುತ್ತೀರಲ್ಲ, ಇನ್ನು ಎರಡು ವರ್ಷಗಳನ್ನು ನೋಡಿ. ಎರಡು ವರ್ಷಗಳ ಬಳಿಕ ಈ ಬಜೆಟ್ ಬಗ್ಗೆ ಇಲ್ಲಿ ಚರ್ಚೆಯಾಗುವ ಕಾಲದಲ್ಲಿ *"ಯಡಿಯೂರಪ್ಪನವರೆ, ನಮ್ಮ ಕಾಲಕ್ಕಿಂತಲೂ ಈ ಕ್ಷೇತ್ರಗಳಲ್ಲಿ 25ರಿಂದ 30 ಪರ್ಸೆಂಟ್‌ನಷ್ಟು improvements ಆಗುತ್ತಿದೆ"* ಎಂದು ನೀವೇ ಹೇಳುವ ರೀತಿಯಲ್ಲಿ ನಾನು ಆಡಳಿತ ನಡೆಸಿ ತೋರಿಸುತ್ತೇನೆ. ಆದರೆ, ಒಂಭತ್ತೇ ತಿಂಗಳಿನಲ್ಲಿ ನೀವೇ ಉದ್ಭವ ಮಾಡಿರುವ ಸಮಸ್ಯೆಗಳ ಬಗ್ಗೆ ಟೀಕೆ ಮಾಡಿ, ನನ್ನತ್ತ ಬೊಟ್ಟು ಮಾಡಿ ತೋರಿಸುವುದು ಎಷ್ಟರಮಟ್ಟಿಗೆ ಸಮಂಜಸ ಎನ್ನುವುದನ್ನು ತಾವು ಶಾಂತಚಿತ್ತರಾಗಿ ಯೋಚಿಸಬೇಕು.

ಸ್ವಾಮಿ, ಇದು ಸಣ್ಣ ವಿಷಯವೇ? ರಾಜ್ಯದಲ್ಲಿ ಪ್ರಥಮ ಬಾರಿಗೆ 3 ಪ್ರತಿಶತ ಬಡ್ಡಿ ದರದಲ್ಲಿ ಕೃಷಿ ಸಾಲವಾಗಿ ವಾಣಿಜ್ಯ ಬ್ಯಾಂಕುಗಳಿಂದ 250 ಕೋಟಿ + 150 ಕೋಟಿ ರೂ.ಗಳನ್ನು ಸಹಕಾರಿ ಬ್ಯಾಂಕ್‌ಗಳಿಂದ ನೀಡಿದ್ದೇವೆ. ಒಟ್ಟು 400 ಕೋಟಿ. ಈ ದೇಶದ ಯಾವ ರಾಜ್ಯದಲ್ಲಿ ಈ ಸವಲತ್ತು ಕೊಟ್ಟಿದ್ದಾರೆಂಬುದನ್ನು ನೀವು ಹೇಳಬೇಕು. ಜೊತೆಗೆ, ಆವರ್ತ ನಿಧಿ ಮತ್ತು 500ರಿಂದ 750 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಸುಮ್ಮನೆ ಅಂಕಿ–ಅಂಶಗಳನ್ನು ಇಟ್ಟುಕೊಳ್ಳುವುದಕ್ಕೋಸ್ಕರವಲ್ಲ. ರೈತ ಸಂಕಷ್ಟದಲ್ಲಿದ್ದಾಗ ಅವನಿಗೆ ನೆರವು ನೀಡಬೇಕೆಂಬ ಸದುದ್ದೇಶದಿಂದ ನಾವು ಮಾಡಿದ್ದೇವೆ. ಮತ್ತೆ ರಾಯಚೂರಿನಲ್ಲಿ ಕೃಷಿ ಮತ್ತು ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಷಯದಲ್ಲಿ 40 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಉಚಿತ ವಿದ್ಯುತ್ ಕೊಡುವುದಕ್ಕೆ 2,100 ಕೋಟಿ ರೂ.ಗಳು ನಮ್ಮ ಮೈಮೇಲೆ ಬರುತ್ತಿದೆ. ಚಾಮರಾಜನಗರದಲ್ಲಿ ಅರಿಶಿನ ಮಾರುಕಟ್ಟೆಗೆ 10 ಕೋಟಿ ರೂ. ಕೊಟ್ಟಿದ್ದೇವೆ. ಬೆಳಗಾವಿಯಲ್ಲಿ ತೋಟಗಾರಿಕೆ ಉತ್ಪನ್ನ ಮಾರುಕಟ್ಟೆಗೆ 100 ಕೋಟಿ ರೂ.ಗಳನ್ನು ತೆಗೆದಿರಿಸಿದ್ದೇವೆ. ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಏಕೆ ನೀವು ಹಿಂದೆ ಇದರ ಬಗ್ಗೆ ಯೋಚಿಸಲಿಲ್ಲ? ಹೈನುಗಾರಿಕೆಯನ್ನು ಪ್ರೋತ್ಸಾಹಿಸುವುದಕ್ಕೆ ಉತ್ತರ ಕರ್ನಾಟಕದಲ್ಲಿ 1,000 ನೂತನ ಸಹಕಾರಿ ಸಂಘಗಳನ್ನು ಸ್ಥಾಪಿಸುವುದಕ್ಕೆ, ಗುಲ್ಬರ್ಗಾ ಹಾಗೂ ಬೆಳಗಾವಿ ವಿಭಾಗಗಳಲ್ಲಿ ಹಾಲಿನ ಶೀತಲೀಕರಣ ಘಟಕಗಳನ್ನು ಸ್ಥಾಪಿಸುವುದಕ್ಕೆ, ಗದಗದಲ್ಲಿ ನೂತನ ಪಶು ವೈದ್ಯಕೀಯ ಶಾಲೆಗಳನ್ನು ಪ್ರಾರಂಭಿಸುವುದಕ್ಕೆ, ಹಾಲು ಉತ್ಪಾದಕರಿಗೆ ಈ ದೇಶದಲ್ಲಿ ಯಾರು ಕೊಟ್ಟರು ಸ್ವಾಮಿ?

ಮಹದೇವಣ್ಣ, ನಿಷ್ಪಕ್ಷಪಾತವಾಗಿ ನೀನು ಹೇಳಬೇಕು, ನೀನು ಅತ್ತ ಕಡೆ ಇದ್ದರೂ ಯಾರು ಕೊಟ್ಟರು? ಇದು ನಮ್ಮ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ನಮ್ಮ ರೈತರು, ನಮ್ಮ ಬಡವರು, ನಮ್ಮ ಕೂಲಿ ಕಾರ್ಮಿಕರು, ಇದರಿಂದ ಏನು ಉತ್ತೇಜನ ಬರುತ್ತದೆ? ಒಂದು ಹಸು ತಂದು ಐದು ಲೀಟರ್‌ಗಳಿಷ್ಟು ಹಾಲು ಕರೆಯುವ ಪ್ರಯತ್ನ ಮಾಡಿದರೆ ಆ ತಾಯಿಗೆ ಪ್ರತಿನಿತ್ಯವೂ ಹತ್ತು ರೂ.ಬರುತ್ತದಲ್ಲವೇ. ಅವಳು ಎರಡು ಹೊತ್ತು ನೆಮ್ಮದಿಯಿಂದ ಊಟ ಮಾಡಿ, ತನ್ನ ಗಂಡನಿಗೆ ನೆರವಾಗಿ, ತನ್ನ ಮಕ್ಕಳನ್ನು ಸಾಕಿ ಅವರನ್ನಾದರೂ ವಿದ್ಯಾವಂತರನ್ನಾಗಿ ಮಾಡಬಹುದಲ್ಲವೇ. ಇದನ್ನು ನಾವು ದೂರದೃಷ್ಟಿ ಇಟ್ಟುಕೊಂಡು ಮಾಡಿದ್ದೇವೆ. ಇದು ನಿಮಗೇಕೆ ಹೊಳೆಯಲಿಲ್ಲ? ಯಡಿಯೂರಪ್ಪ ಹಳ್ಳಿಯಿಂದ ಬಂದವನು ಸ್ವಾಮಿ. ನಾನು ಅಲ್ಲಿಂದಲೇ ಬಂದಿದ್ದೇನೆ. ಅವರ ಕಷ್ಟ–ಸುಖಗಳನ್ನು ವಿಚಾರಿಸಿದ್ದೇನೆ. ಸಮಸ್ಯೆಗಳನ್ನು ಕಣ್ಣಾರೆ ನೋಡಿದ್ದೇನೆ. ಎಲ್ಲಾ ಮಾಡಿದ್ದೇನೆಯೇ? ಇಲ್ಲ. ಮಾಡಬೇಕಾಗಿರುವುದು ಇನ್ನೂ ಶೇಕಡ 99ರಷ್ಟಿದೆ. ಆ ದಿಕ್ಕಿನತ್ತ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಒಂದು ಲೀಟರ್ ಹಾಲಿಗೆ

2 ರೂ.ನಂತೆ ಪ್ರೋತ್ಸಾಹ ಧನ ಕೊಡುವುದು ನೀವು ಅಂದುಕೊಂಡಷ್ಟು ಸುಲಭವಾದ ಕೆಲಸವಲ್ಲ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ನಾನು ನಿಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನೀರಾವರಿ ಬಗ್ಗೆಯೂ ಬಹಳ ಚರ್ಚೆಯಾಗುತ್ತಿದೆ. 2008–09ನೇ ಸಾಲಿನ ಆಯವ್ಯಯದ ಬಗ್ಗೆ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಹೇಳುತ್ತಿದ್ದರು. ನೀವೇನು ಖರ್ಚು ಮಾಡಿದ್ದೀರಿ, ಸ್ವಲ್ಪ ಅಂಕಿ–ಅಂಶಗಳನ್ನು ಕೊಡಿ, ನಮಗೆ ವಿವರ ಬೇಕೆಂದರು. ನಾನು ಖಂಡಿತವಾಗಿಯೂ ಕೊಡುತ್ತೇನೆ. 2008–09ನೇ ಸಾಲಿಗೆ 3,764 ಕೋಟಿ ರೂ.ಗಳಷ್ಟು ಅನುದಾನ ನಾವು ಒದಗಿಸಿದ್ದೆವು. ಆ ಪೈಕಿ ಜನವರಿ ಅಂತ್ಯದವರೆಗೆ 2,773 ಕೋಟಿ ಅಂದರೆ, ಶೇಕಡ 73ರಷ್ಟು ವೆಚ್ಚ ಮಾಡಿದ್ದೇವೆ. ನಿಮಗೆ ಅಂಕಿ–ಅಂಶಗಳನ್ನು ಕೊಡುತ್ತೇನೆ.
ಕಳೆದ ವರ್ಷ ಏನು ಸಮಸ್ಯೆಯಾಯಿತು ಎಂಬುದು ನಮಗೆ ಗೊತ್ತಿದೆ. ರಾಷ್ಟ್ರಪತಿ ಆಡಳಿತದ ಸಮಯ. ಮಾರ್ಚ್2008ರವರೆಗೆ ಕೇವಲ 2102 ಕೋಟಿ ರೂ.ಗಳು ಖರ್ಚಾಯಿತು. ಈ ಸಲ 2,773 ಕೋಟಿ ರೂ.ಗಳು ಖರ್ಚು ಮಾಡಿದ್ದೇವೆ. ಆದ್ದರಿಂದ 2005–06ನೇ ಸಾಲಿಗೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಮತ್ತೆ 2009–10ನೇ ಸಾಲಿನಲ್ಲಿ ನೀರಾವರಿಗೆ ಅನುದಾನವನ್ನು 20ರಷ್ಟು ಹೆಚ್ಚು ಮಾಡಿದ್ದೇನೆ. ಭದ್ರಾ ಮೇಲ್ದಂಡೆ ಯೋಜನೆಗೆ 500 ಕೋಟಿ ರೂ.ಗಳನ್ನು ಕೊಟ್ಟು ಕೆಸಲಗಳನ್ನು ತಕ್ಷಣ ಪ್ರಾರಂಭ ಮಾಡಲಿಕ್ಕೆ ಟೆಂಡರ್ ಪ್ರೊಸೆಸ್ ಮುಗಿಸಿ, ಏಜೆನ್ಸಿ ಫಿಕ್ಸ್ ಮಾಡಿ ಶಂಕುಸ್ಥಾಪನೆ ಮಾಡಿ ಕೆಲಸ ಶುರು ಮಾಡಿ ಎಂದು ಕ್ಲಿಯರೆನ್ಸ್ ಕೊಟ್ಟು ನಾವು ಕೇಂದ್ರ ಸರ್ಕಾರದಿಂದ ಏನು formalities ಇದೆ, ಇಡೀ ಜಗತ್ತಿನಲ್ಲೇ, ಇದೇನು ಕರ್ನಾಟಕದಲ್ಲಿ ಮಾತ್ರವಲ್ಲ, ಇದರ ಪಾಡಿಗೆ ಇದಕ್ಕೆ ಪರ್ಮಿಷನ್ ತೆಗೆದುಕೊಂಡು ಆ ಕಡೆ work ಪ್ರಾರಂಭ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆನ್ನುವುದನ್ನು ಹೇಳುತ್ತಾ, ಬಹುಶಃ ಕೆರೆಗಳ ಅಭಿವೃದ್ಧಿಗೆ ಅಂತರ್ಜಲ ಕುಸಿದು ಹೋಗುತ್ತಿರುವ ಈ ಸಂದರ್ಭದಲ್ಲಿ 764ಕೋಟಿ ರೂ.ಗಳನ್ನು ಕೊಟ್ಟು ಸಣ್ಣ ಪ್ರಮಾಣದ ನೀರಾವರಿಗೆ ಆದ್ಯತೆಯನ್ನು ನೀಡಿದ್ದೇವೆ. ಮುಂದಿನ ವರ್ಷ 63,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವಂಥ ಒಂದು ಸಂಕಲ್ಪ ನಮ್ಮ ಸರ್ಕಾರ ಮಾಡಿದೆಯೆಂದು ನಾನು ಹೇಳಬಯಸುತ್ತೇನೆ. ಗ್ರಾಮೀಣಾಭಿವೃದ್ಧಿಯ ಬಗ್ಗೆ ಇಲ್ಲಿ ಚರ್ಚೆಯಾಯಿತು, ಈ ವರ್ಷ ಗ್ರಾಮೀಣಾಭಿವೃದ್ಧಿಗೆ 3,063 ಕೋಟಿ ರೂ.ಗಳನ್ನು ಒದಗಿಸಿದ್ದೇವೆ. 1,200 ಗ್ರಾಮಗಳಿಗೆ ಸುವರ್ಣ ಗ್ರಾಮೋದಯ, ಅದಕ್ಕಿಂತ 2500 ಕಿ.ಮೀ. ಗ್ರಾಮೀಣ ರಸ್ತೆಗಳಾಗಿವೆ. ಸಕ ಮತ್ತು ತೂಗು ಸೇತುವೆಗಳ ಅಭಿವೃದ್ಧಿ. ಚರಂಡಿ, ಶೌಚಾಲಯಗಳ ಅಭಿವೃದ್ಧಿಗೆ 800 ಕೋಟಿ ರೂ.ಗಳು. ಸೌರ ವಿದ್ಯುತ್ ಬೀದಿದೀಪಗಳಿಗೆ, 1000 ಗ್ರಾಮಸೌಧಗಳ ನಿರ್ಮಾಣ, ಈ ಕಡೆಗೆ ನಾವು ಆದ್ಯತೆಯನ್ನು ಕೊಟ್ಟಿದ್ದೇವೆ. ಬಹುಶಃ

ಎಸ್.ಎಂ.ಕೆ

ಈ ವರ್ಷ ಆರೋಗ್ಯ ಕ್ಷೇತ್ರಕ್ಕೆ 1,840.00 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇವೆ. ಜನಪ್ರಿಯವಾಗುತ್ತಿರುವಂಥ ಆರೋಗ್ಯ ಕವಚ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಣೆ ಮಾಡುವುದಕ್ಕಾಗಿ 517 ಆಂಬುಲೆನ್ಸ್ ಖರೀದಿಸುವುದಕ್ಕೋಸ್ಕರ 221 ಕೋಟಿ ರೂ.ಗಳನ್ನು ತೆಗೆದಿರಿಸಿದ್ದೇವೆ. ಬಹಳ ಮುಖ್ಯವಾಗಿ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿ ಇರಬೇಕಾಗಿತ್ತು, ಅವರದೇ ಆದಂಥ ಬೇರೆ ಕೆಲಸಗಳಲ್ಲಿರಬಹುದು. ಗುಲ್ಬರ್ಗ ವಿಭಾಗ ಏನು neglect ಆಗಿತ್ತು, ಆ region ಅಲ್ಲಿಗೆ 16.00 ಲಕ್ಷ ಬಡ ಕುಟುಂಬಗಳಿಗೆ ಸುಮಾರು 80.00 ಲಕ್ಷ ದಿಂದ 1.50 ಲಕ್ಷದವರೆಗೆ ಆರೋಗ್ಯ ವಿಮೆ ಮೂಲಕ ಉಚಿತ ವೈದ್ಯಕೀಯ ನೆರವನ್ನು ಕೊಡುವುದನ್ನು ಮಾಡಿದ್ದೇವೆ. ಕಿದ್ವಾಯಿ ಆಸ್ಪತ್ರೆಗಾಗಿ ಬೆಂಗಳೂರಿಗೆ ಬರಬೇಕು. ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಒಂದು ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ, ಜಯದೇವ ಹೃದ್ರೋಗ ಆಸ್ಪತ್ರೆಯ ಶಾಖೆ ತೆರೆಯುವುದಕ್ಕೋಸ್ಕರ ತೀರ್ಮಾನ ಮಾಡಿದ್ದೇವೆ. ಧಾರವಾಡದಲ್ಲಿ ನಿಮ್ಹಾನ್ಸ್ ಆಸ್ಪತ್ರೆಯಾಗಿ ಎಷ್ಟು ವರ್ಷಗಳಾಯಿತು? ಅಲ್ಲಿಂದ ಸುಮಾರು ಜನ ಬೆಂಗಳೂರಿಗೆ ಬರುತ್ತಾರೆ. ಅಲ್ಲಿ ಎಲ್ಲಾ ರೀತಿಯ ಆರೋಗ್ಯದ ದೃಷ್ಟಿಯಿಂದ ಸವಲತ್ತುಗಳು ಸಿಗಬೇಕು. ಅದನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಅವರಿಗೆ ಹಣ ಕೊಟ್ಟು ಆ ಕೆಲಸ ತಕ್ಷಣ ಪ್ರಾರಂಭ ಮಾಡಬೇಕೆಂದು ಹೇಳಿ ಆ ಕೆಲಸವನ್ನು ಮಾಡಿಸುತ್ತಿದ್ದೇವೆ. ಹೀಗೆ ಎಲ್ಲಾ ಕ್ಷೇತ್ರದಲ್ಲಿ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. At least, ನಮ್ಮ ಮಹದೇವಪ್ಪನವರು ಮಾತನಾಡಬೇಕಾದರೆ ಯಡಿಯೂರಪ್ಪನವರೇ ನೀವು ನಮ್ಮ ಕಡೆ ಗಮನ ಕೊಟ್ಟಿದ್ದೀರಿ ಎಂದು ಹೇಳುತ್ತಾರೆಂದು ಅಂದುಕೊಂಡಿದ್ದೆ. ಅವರಿಗೆ ಸ್ವಲ್ಪ ಕಳಕಳಿ ಇದೆ, ನೀವೆಲ್ಲಾ ತಿಳಿದುಕೊಳ್ಳಬೇಕು. ಅವರು ಹಿರಿಯರಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನೀವು ಮಾಡದೇ ಇದ್ದರೂ ಚಿಂತೆ ಇಲ್ಲ, ನೀವು ಒಂದು ಸಾರಿ ಚಾಮರಾಜನಗರಕ್ಕೆ ಹೋಗಿ ಬನ್ನಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಮಹದೇವ ಪ್ರಸಾದ್: ನಿಮ್ಮ ದೃಷ್ಟಿ ನಮ್ಮ ಜಿಲ್ಲೆ ಮೇಲೆ ಬಿದ್ದು ನಮ್ಮ ಜಿಲ್ಲೆ ಸ್ವಲ್ಪ ಸುಭಿಕ್ಷವಾದರೆ ನಮಗೆ ಅದೇ ದೊಡ್ಡ ಸಂತೋಷದ ಸುದ್ದಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಈ ರೀತಿ ಇಲ್ಲಿ ಸಹಕಾರ ಕೊಟ್ಟರೆ ಎಲ್ಲರಿಗೂ ಎಲ್ಲಾ ರೀತಿಯ ಸಹಕಾರ ಸಿಗುತ್ತದೆ. ನಾನೇನು ಹೇಳುತ್ತಿದ್ದೇನೆಂದರೆ, ನಿಮ್ಮ ಭಾಗದಲ್ಲಿ ಈ ಬಾರಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಅಭಿವೃದ್ಧಿ ಯೋಜನೆಯಲ್ಲಿ ಕ್ರೋಢೀಕರಿಸಿದ ಮೊತ್ತವನ್ನು 200 ರಿಂದ 600 ಕೋಟಿ ರೂ.ಗಳಿಗೆ ಏರಿಸಿರುವುದರಿಂದ ಹೆಚ್ಚು ಕೆಲಸಗಳಾಗುತ್ತದೆ. ಈ ಬಾರಿ ಒಟ್ಟು 4,000 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು SCP and TSP ಯೋಜನೆಗಳಿಗೆ ಮೀಸಲಿಟ್ಟಿದ್ದೇವೆ. Sc/ST ಗೆ ಯಾವ್ಯಾವ ವರ್ಷ ಎಷ್ಟೆಷ್ಟು ಖರ್ಚಾಯಿತು ಎಂಬ ಬಗ್ಗೆ ವಿವರವನ್ನು

ನಾನು ಕೊಡುತ್ತೇನೆ. ನಿಮಗೆ ಆಶ್ಚರ್ಯವೆಂದರೆ, ನಿಜಕ್ಕೂ ನಾವೆಲ್ಲಿದ್ದೇವೆಂದು ಎಲ್ಲರೂ ಕಣ್ಣು ತೆರೆದು ನೋಡಬೇಕಾಗಿದೆ. ಈ ಗುಲಬರ್ಗಾ ವಿಭಾಗದ ಕೆಲವು ಗ್ರಾಮಗಳಲ್ಲಿ ಈ ಸಾಕ್ಷರತಾ ಪ್ರಮಾಣ ಪ್ರತಿಶತ 12 ಕ್ಕಿಂತಲೂ ಕಡಿಮೆ ಇದೆ. SC/ST ಜನಾಂಗದ ಸಾಕ್ಷರತಾ ಪ್ರಮಾಣ ಇನ್ನೂ ಕಡಿಮೆ ಇದೆ. 2007–08 ರ ಶೈಕ್ಷಣಿಕ ಸಮೀಕ್ಷೆ ಪ್ರಕಾರ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ತನ್ಮನ್‌ಖಾನ್ ಗ್ರಾಮದ ಸಾಕ್ಷರತಾ ಪ್ರಮಾಣ 0.7%. ಗುಲಬರ್ಗಾ ಜಿಲ್ಲೆಯ ಸುರುಪುರ ತಾಲ್ಲೂಕಿನ ಟೆಂಚಿಗೆಡ್ಡಿ ಗ್ರಾಮ 4.5%. ಯಾದಗಿರಿ ತಾಲ್ಲೂಕಿನ ಜವಾಹರ್ ನಗರದಲ್ಲಿ 7.6% ಮಾತ್ರ ಇದೆ. ಇದೆಷ್ಟು ಶೋಚನೀಯವಾದಂಥ ಸ್ಥಿತಿಯಾಗಿದೆ, ಇದರಿಂದ ನಾವು ತಲೆ ತಗ್ಗಿಸುವಂಥದ್ದಲ್ಲವೇ? ಸ್ವಾತಂತ್ರ್ಯ ಬಂದು 59 ವರ್ಷಗಳ ಕಾಲ ನೀವೇ ಅಲ್ಲವೇ ಆಡಳಿತ ನಡೆಸಿದವರು. ನಾನು ಇದ್ದೆನೆ,? ನೀವೇ ಅಲ್ಲವೇ ಇದ್ದುದು. ನೋಡಿ ಎಲ್ಲೆಲ್ಲಿ ಎಷ್ಟೆಷ್ಟು ಅಂಕಿ ಅಂಶಗಳಿವೆ, ಇದನ್ನು ಸುಧಾರಣೆ ಮಾಡಲಿಕ್ಕೆ ಏನಾದರೂ ಪ್ರಯತ್ನ ಮಾಡಬೇಕು ಎಂದು ನಾವು ನೀವೆಲ್ಲಾ ಒಟ್ಟಾಗಿ ಯೋಚನೆ ಮಾಡಬೇಕು. ನೀವು ನಿಜಕ್ಕೂ ನಮಗೆ ಅಭಿನಂದನೆಗಳನ್ನು ಸಲ್ಲಿಸಬೇಕು. ಹತ್ತತ್ತು ವರ್ಷಗಳಲ್ಲಿ ಆಗಿರಲಿಲ್ಲ. ಇದು ಮೊದಲನೇ ಬಾರಿಗೆ ಕಿತ್ತೂರು ರಾಣಿ ಚೆನ್ನಮ್ಮನ ಹೆಸರಿನಲ್ಲಿ ಎಲ್ಲಾ ಎಸ್.ಸಿ/ಎಸ್.ಟಿ. ಜನಾಂಗದ ಹೆಣ್ಣುಮಕ್ಕಳಿಗೆ at a time 114 ವಸತಿ ಶಾಲೆಗಳನ್ನು ತೆಗೆಯುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ಈ ಮನೆಗೆ ನಾನು ಭರವಸೆಯನ್ನು ಕೊಡುತ್ತೇನೆ. ನಾನು ಆದಷ್ಟು ಬೇಗ ಈ ಬಜೆಟ್ ಪಾಸಾಗುತ್ತಿದ್ದಂತೆ ಯಾವುದೇ formalitiesಗೆ ನಾನು ಕಾಯುವುದಿಲ್ಲ. ಎಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವಿದೆ, ಹೆಣ್ಣುಮಕ್ಕಳಿಗೆ ಶಿಕ್ಷಣದ ಅಗತ್ಯವಿದೆ, ಮುಂದಿನ ವರ್ಷ ಇನ್ನು ಹೆಚ್ಚು ಮಾಡೋಣ. ಆದಷ್ಟು ಬೇಗ ಅಲ್ಲಿ ಶಾಲೆಗಳನ್ನು ತೆರೆದು ಮಕ್ಕಳಿಗೆ ಅನುಕೂಲ ಮಾಡಿಕೊಡಲಿಕ್ಕೆ ಏನೇನು ಸಾಧ್ಯವಿದೆ, ಅದನ್ನೆಲ್ಲಾ ಮಾಡುತ್ತೇನೆ. ಎಸ್.ಸಿ/ಎಸ್.ಟಿ. ಬಾಲಕಿಯರು ಶೇಕಡಾ 75 ಕ್ಕಿಂತ ಹೆಚ್ಚು ಅಂಕ ಗಳಿಸಿದರೆ ಅವರಿಗೆ 10,000 ರೂ.ಗಳನ್ನು, ಶೇ.60ಕ್ಕಿಂತ ಹೆಚ್ಚು ಅಂಕ ಗಳಿಸಿದರೆ 5,000 ರೂ.ಗಳನ್ನು ಪ್ರೋತ್ಸಾಹಧನವಾಗಿ ಪ್ರತಿಯೊಬ್ಬ ಹೆಣ್ಣುಮಗಳಿಗೆ ಕೊಡುತ್ತಿದ್ದೇವೆ. ಅದರ ಉದ್ದೇಶವೇನು? ಉನ್ನತ ಶಿಕ್ಷಣವನ್ನು ಪರಮೇಶ್ವರ್‌ರವರು ನಡೆಸುತ್ತಿದ್ದರು, ಅವರು ಮಾಡುವಂಥ ಕೆಲಸವನ್ನು ಒಂದಷ್ಟು ಮಾಡಿದ್ದಾರೆ, ಏನೂ ಮಾಡಿಲ್ಲವೆಂದು ಹೇಳುವುದಿಲ್ಲ. ಅವರಿಗೆ ಆಸಕ್ತಿ ಇತ್ತು, ಆ ದಿಕ್ಕಿನಲ್ಲಿ ನೀವು ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಿ, ಆದರೆ ನಿಮಗೆ ಅಕ್ಕಪಕ್ಕದವರು ನಿಮ್ಮನ್ನು ಬಿಡಬೇಕಲ್ಲ. ನಮಗೆ ಈಗ ಇರುವಷ್ಟು ಸ್ವಾತಂತ್ರ್ಯ ಆಗ ನಿಮಗೆಲ್ಲಿತ್ತು, ಇದರಲ್ಲಿ ಸಮಸ್ಯೆಗಳಿರುತ್ತವೆ, ಅದು ಬೇರೆ ವಿಷಯ. ಆದರೆ ತಮಾಷೆಗೆ ಈ ಮಾತನ್ನು ಹೇಳಿದರೂ ಸಹ ಆ ರೀತಿ ಹೆಣ್ಣುಮಕ್ಕಳಿಗೆ ಪ್ರೋತ್ಸಾಹ ಕೊಡುವುದು, ನೀನು ಫಸ್ಟ್ ಕ್ಲಾಸ್ ತೆಗೆದುಕೊಂಡಿದ್ದೀಯ, ತೆಗೆದುಕೊ ನಿನಗೆ 5,000 ಕೊಡುತ್ತೇವೆ. ನಿಮ್ಮ ತಂದೆತಾಯಿಗಳಿಗೆ ಕೊಡಲಿಕ್ಕೆ ಶಕ್ತಿಯಿಲ್ಲ. ನೀನು ಶೇ.75 ರಷ್ಟು ಅಂಕ

ಪಡೆದುಕೊಂಡಿರುವೆ, ನಿನಗೆ 10,000 ರೂ.ಗಳನ್ನು ಕೊಟ್ಟು ಬೋನಸ್ ರೀತಿ ಆಯಿತು, ನೀನು ನಿನ್ನ ಶಿಕ್ಷಣದಲ್ಲಿ ಮುಂದುವರಿ. ಈ ರೀತಿ ಯಾರು ತಂದೆತಾಯಿಗಳು ಮಾಡಬೇಕಾಗಿತ್ತು ಆ ಕೆಲಸ ಇವತ್ತು ಈ ಸರ್ಕಾರ ಮಾಡುತ್ತಿದೆಯೆಂದರೆ ನೀವು ಯಾರೊಬ್ಬರ ಬಾಯಿಂದಲೂ ಒಳ್ಳೆಯ ಮಾತು ಬರಲಿಲ್ಲವಲ್ಲ, ಕುಮಾರಸ್ವಾಮಿಯವರಂತೂ ಇಂಥ ಒಳ್ಳೆಯದನ್ನು ನೋಡುವುದೇ ಇಲ್ಲ. ನೀವ್ಯಾರು ನೋಡಲೇ ಇಲ್ಲ. ಹೀಗಾಗಿ ನನಗೆ ಏನು ಮಾಡಬೇಕೆಂದು ಗೊತ್ತಾಗಲೇ ಇಲ್ಲ.

ಶ್ರೀ ಹೆಚ್.ಸಿ.ಮಹದೇವಪ್ಪ: ನಾವು ನಿಮಗೆ 67 ವರ್ಷದ ಹುಟ್ಟುಹಬ್ಬಕ್ಕೆ ಶುಭಾಶಯಗಳನ್ನು ಹೇಳುವುದಕ್ಕೆ ಕಾಯುತ್ತಿದ್ದೆವು.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನೊಂದು ವಿಚಿತ್ರ ಸ್ಥಿತಿಯೆಂದರೆ, ಎಸ್.ಸಿ/ಎಸ್.ಟಿ.ಗಳಲ್ಲಿ ನಮ್ಮ ರೈಟ್, ಲೆಫ್ಟ್ ಆ ಹರಿಜನ ಬಸ್ತಿಗಳ ಸ್ಥಿತಿ, ಇನ್ನೊಂದು ಕಡೆ ಎಸ್.ಸಿ.ಸಮಾಜ, ಬಣಜಾರ್ ಸಮಾಜ ಇದೆಯೆನ್ನುವುದೇ ನಿಮಗೆ ನೆನಪಾಗಲಿಲ್ಲವೇ? ಅವರು ಹೇಗೂ ಮುಗ್ಧರಿದ್ದಾರೆ. ಶಿಕ್ಷಣ ಇಲ್ಲ. ಅವರಾಯಿತು, ಅವರ ತಾಂಡಾ ಆಯಿತು, ಕೂಲಿ ಆಯಿತು, ಹೇಗೋ ಜೀವನ ನಡೆಸಿಕೊಂಡು ಹೋಗುತ್ತಾರೆ, ಶಿವಕುಮಾರ್, ಯಾರು active ಇರುತ್ತಾರೋ ಅವರ ಕಡೆ ನೀವು ಗಮನ ಕೊಡುತ್ತೀರಿ. ಯಾರು ಪಾಪ ಗುಡಿಸಲಿನಲ್ಲಿದ್ದಾರೆ, ಅವರು ಹೇಗೂ ನಮ್ಮ ಜೊತೆಗೆ ಇದ್ದೇ ಇರುತ್ತಾರೆಂಬ ಭ್ರಮೆಯಲ್ಲಿ ನೀವು ಇದ್ದಿರಿ. ಆದರೆ ಇವತ್ತು ಯಡಿಯೂರಪ್ಪ ಪ್ರಾಮಾಣಿಕವಾಗಿ ..

ಶ್ರೀ ಡಿ.ಕೆ.ಶಿವಕುಮಾರ್ (ಕನಕಪುರ): ನೀವು ಅದನ್ನೇ ಮಾಡುತ್ತಿರುವುದು. ಯಾರಿಗೆ Potential ಇದೆ, ಯಾರು ಕಾಂಗ್ರೆಸ್ ಹಾಗೂ ಜನತಾ ದಳದವರು potential ಆಗಿರುವವರನ್ನು ಬೆಳೆಸಿದರು, ಇವತ್ತು ಅಂಥವರಿಗೆ ಮಾತ್ರ ತಾವು ಆಪರೇಷನ್ ಮಾಡುತ್ತಿದ್ದೀರಿ ಹೊರತು ಪ್ಯಾದೆ, ಪೆದ್ದರಾಗಿರುವವರನ್ನು ನೀವು ಮುಟ್ಟುತ್ತಿದ್ದೀರಾ, ನೀವು ಯಾರನ್ನು ಮುಟ್ಟುತ್ತಿಲ್ಲ. ಸಂಸ್ಕೃತದಲ್ಲಿ ಒಂದು ಶ್ಲೋಕ ಇದೆ, ಏನೆಂದರೆ, "ಅಶ್ವಂ ನೈವ್ಂ, ಗಜಂ ನೈವಂ, ವ್ಯಾಘ್ರಂ ನೈವಂ ನೈವಚ, ಗಜಾಪುತ್ರಂ ಬಲಿಂ ತದ್ಯತ್ ದೇವೋ ದುರ್ಬಲ ಘಾತಕಾಂತ:" ಇದರ ಅರ್ಥವೇನೆಂದರೆ ಈ ಆನೆ, ಈ ಹಸು, ಸಿಂಹವಿರಬಹುದು ಇದನ್ನು ಯಾರೂ ಬಲಿ ತೆಗೆದುಕೊಳ್ಳುವುದಿಲ್ಲವಂತೆ, ಕುದುರೆಯನ್ನು ಬಲಿ ತೆಗೆದುಕೊಳ್ಳುವುದಿಲ್ಲವಂತೆ, ಕೋಳಿ, ಕುರಿ, ಇಂಥ ಸಣ್ಣಪುಟ್ಟ ಪ್ರಾಣಿಗಳನ್ನು ಮಾತ್ರ ಬಲಿ ತೆಗೆದುಕೊಳ್ಳುತ್ತಾರಂತೆ. ಹಾಗೆ ನೀವು ಕೋಳಿ, ಕುರಿ ಯಾವುದಕ್ಕೂ ಬರುವುದಿಲ್ಲ. ನೀವೆಲ್ಲಾ ದೊಡ್ಡ ದೊಡ್ಡ ಬಲಿ ತೆಗೆದುಕೊಳ್ಳುವುದಕ್ಕೆ ಬರುತ್ತೀರಿ ಹಾಗೆ. ನೀವು ಕಾಂಗ್ರೆಸ್ ಪಕ್ಷ ಯಾರ್ಯಾರು ಒಳ್ಳೆಯ

ನಾಯಕರನ್ನು ತಯಾರು ಮಾಡಿತ್ತು, ಜನತಾದಳ ಯಾರನ್ನು 20–30 ವರ್ಷಗಳು ತಯಾರು ಮಾಡಿತ್ತು, ಅಂಥವರನ್ನೇ ತಾವು ತಮ್ಮ ಬಲೆಗೆ ಹಾಕಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದಿರಿ. ಇದೇ ನಿಮಗೆ ಮುಂದಕ್ಕೆ ಮುಳ್ಳಾಗಿ ಪರಿವರ್ತನೆಯಾಗುತ್ತದೆಂದು ಈ ಸಂದರ್ಭದಲ್ಲಿ ತಮ್ಮ ಹುಟ್ಟುಹಬ್ಬದ ದಿನದಂದು ನಿಮಗೆ ಶುಭಾಶಯ ಹೇಳಿ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಶಿವಕುಮಾರ್, ನನ್ನ ಅನುಭವದಿಂದ ಒಂದು ಮಾತು ಹೇಳುತ್ತೇನೆ. ಇವತ್ತು ನೀವು ಹೇಳಿದ ಸಂಸ್ಕೃತ ಶ್ಲೋಕ ಶೇಕಡ ನೂರರಷ್ಟು ಸರಿ. ದೇವರು ಬಲಿ ಕೇಳುವುದು ಅಮಾಯಕರನ್ನು, ಆನೆ, ಹುಲಿ, ಸಿಂಹವನ್ನಲ್ಲ, ನೀವು ಹೇಳಿದ್ದು ಸರಿಯಿದೆ. ನೀವು ಮಾಡಿದ್ದು ಅದನ್ನೇ.

ಶ್ರೀ ಡಿ.ಕೆ.ಶಿವಕುಮಾರ್: ನೀವು ಹೇಳಿ, ಇಂಥದ್ದನ್ನು ನೀವು ಮಾಡಿದ್ದೀರಿ, ಮಾರಮ್ಮ ಇರಬಹುದು, ಇನ್ನಾವುದೇ ದೇವತೆಯಿರಬಹುದು. ಕುರಿ, ಕೋಳಿ ಇದನ್ನು ಬಲಿ ಕೊಡುತ್ತಾರೆ ಇದನ್ನು ಬಿಟ್ಟರೆ ಮಿತಿ ಮೀರಿದರೆ ಕೋಣ. ಇದನ್ನು ಬಿಟ್ಟರೆ ಆನೆ, ಹುಲಿ, ಸಿಂಹವನ್ನು ಯಾರಾದರೂ ಬಲಿ ತೆಗೆದುಕೊಂಡಿದ್ದಾರೆಯೇ? It is a nature's law.

ಡಾ: ಬಿ.ಎಸ್.ಯಡಿಯೂರಪ್ಪ:– You are right.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:– ಮಾನ್ಯ ಶಿವಕುಮಾರ್‌ರವರೆ, ನೀವು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ಇಬ್ಬರೂ ಸೇರಿಕೊಂಡು, ಇಲ್ಲಿ ಗ್ಯಾಲರಿಯಲ್ಲಿ ನಿಂತುಕೊಂಡು, 'Operation Success' ಎಂದು 8 ಜನ ಶಾಸಕರನ್ನು ಕರೆದುಕೊಂಡು ಹೋಗಿ, cross voting ಮಾಡಿಸಿ, ಅವರನ್ನೆಲ್ಲಾ ನಿಮ್ಮ ಕಡೆಗೆ ತೆಗೆದುಕೊಂಡಿದ್ದಿರಲ್ಲಾ, ಅದನ್ನೆಲ್ಲಾ ಆಗಲೇ ಮರೆತಿರಾ?

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾನೇನು ಹೇಳಲಿಕ್ಕೆ ಹೊರಟಿದ್ದೆ ಎಂದರೆ, ನೀವು ಯಾರನ್ನು 'Vote Bank' ಎಂದು ತಿಳಿದುಕೊಂಡಿದ್ದೀರೋ, ಅವರು ಜಾಗೃತರಾಗಬಾರದು, ಶಿಕ್ಷಣ ಪಡೆಯಬಾರದು, ಇದರಿಂದ ನಾಳೆ ಹೋದಾಗ ಇದನ್ನು ಕೇಳುವಂತಹ ಶಕ್ತಿ ಬರುತ್ತದೆ ಎಂದು ಅವರನ್ನು ಹಾಗೇ ಇಟ್ಟಿದ್ದಿರಿ. ನಾವು ಅವರನ್ನು ಬಡಿದೆಬ್ಬಿಸುವಂತಹ ಪ್ರಯತ್ನ ಮಾಡಿದ್ದೇವೆ. ಇಷ್ಟು ವರ್ಷ ನಿಮ್ಮ ಮಕ್ಕಳು ವಿದ್ಯಾವಂತರಾಗದಿರುವುದಕ್ಕೆ ಇವರು ಕಾರಣ, ತಾಂಡಾದಲ್ಲಿ ಮೂಲ ಸವಲತ್ತುಗಳಿಲ್ಲದಿರುವ ಪರಿಸ್ಥಿತಿಗೆ ಇವರಪ್ಪ ಕಾರಣ ಎಂದು ಹೇಳಿ, ಹೇಳಿ, ಈಗ ಅವರು ಜಾಗೃತರಾಗಿ ನಮ್ಮ ಜೊತೆಗೆ ಬರುತ್ತಿದ್ದಾರೆ. ನಾನು ಬರೇ ಕಥೆಯನ್ನು

ಹೇಳಲಿಲ್ಲ. ಭಗವಂತ ಮತ್ತು ನಿಮ್ಮಂತಹವರ ಆಶೀರ್ವಾದದಿಂದ ಇಲ್ಲಿ ಅವಕಾಶ ಸಿಕ್ಕಾಗ, ಆ ಸಮೂಹಕ್ಕೆ ನ್ಯಾಯ ಒದಗಿಸಿಕೊಡುವಂತಹ ಪ್ರಯತ್ನ ಮಾಡುತ್ತಿದ್ದೇನೆ. ಒಂದೇ ಸಾರಿ 500 ಬಂಜಾರ ತಾಂಡಾಗಳ ಅಭಿವೃದ್ಧಿಗೆ ನಾನು ಹಣ ಕೊಡುವಂತಹ ಪ್ರಯತ್ನ ಮಾಡಿದ್ದೇನೆ. ಮಾನ್ಯ ಶಿವಕುಮಾರ್‌ರವರೆ, ನಾನು ಹೇಳುವುದು ಏನೆಂದರೆ, ಇನ್ನಾದರೂ ಯಡಿಯೂರಪ್ಪ ಯಾವ ದಿಕ್ಕಿನಲ್ಲಿ ಯೋಚನೆ ಮಾಡುತ್ತಿದ್ದಾನೆಂದು ನೀವು ಅರ್ಥ ಮಾಡಿಕೊಳ್ಳಬೇಕು. ನಾನು ದೇವರಾಣೆ, ಪ್ರಮಾಣ ಪೂರ್ವಕವಾಗಿ ಒಂದು ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ vote ಕಾರಣವಲ್ಲ. Vote ಇದ್ದೇ ಇರುತ್ತದೆ ಬಿಡಿ. ನಾವೇನೂ ಸನ್ಯಾಸಿಗಳಲ್ಲ. ಒಳ್ಳೆಯ ಕೆಲಸ ಮಾಡಿದರೆ, ಅವರನ್ನು ಅಭಿವೃದ್ಧಿಯತ್ತ ಎತ್ತಿಕೊಂಡು ಹೋದರೆ, ಆ ಜನ ನಮ್ಮ ಜೊತೆಗೆ ಬರುತ್ತಾರೆ. ನಾಯಕರ ಬಗ್ಗೆ ನಮಗೆ ವಿಶ್ವಾಸವಿಲ್ಲ. You are correct. ನೀವು ಯಾರನ್ನೋ ಬೆಳೆಸಿದ್ದೀರಿ, ನಾವು ಯಾರನ್ನೋ ಬೆಳೆಸಿದ್ದೇವೆ. ಆ ನಾಯಕ ಬಂದಾಕ್ಷಣ ಪರಿವರ್ತನೆ ಆಗುವುದಿಲ್ಲ ಸ್ವಾಮಿ. ಆ ಕಾಲ ಹೋಯಿತು. ಅದು ನಿಮ್ಮ ಕಾಲದಲ್ಲಿತ್ತು. ಸ್ವಾಮಿ, ನಿಮ್ಮದು ಕಡಿಮೆ ಸಾಧನೆಯೇನಲ್ಲ. ಈ ಕಡೆಗೆ ನೀವು ಯೋಚನೆ ಮಾಡಬೇಕು. ದೆಹಲಿಗೆ ಹೋಗಿ ಒಂದು 'ಬಿ' ಫಾರಂ ತಂದರೆ, ನಮ್ಮ ಮಾಧ್ಯಮದ ಸ್ನೇಹಿತರಿದ್ದಾರೆ, ನೂರಕ್ಕೆ ತೊಂಭತ್ತು ಭಾಗ ಆತ ಎಂ.ಎಲ್.ಎ. ಆದಂತೆಯೇ ಸರಿ. ಅಷ್ಟೊಂದು ನಿಮ್ಮ ಪರವಾಗಿದ್ದರು ಜನ. ನಮ್ಮನ್ನು ಕೇಳುವವರು ಯಾರಿದ್ದರು ಸ್ವಾಮಿ? ನಾವು ಹೋದರೆ ಅಟ್ಟಿಸಿಕೊಂಡು ಬರುತ್ತಿದ್ದರು. ಅಂತಹ ಪರಿಸ್ಥಿತಿ ಇತ್ತು ತಾನೇ? ಅಂತಹ ಮುಖಂಡರ ಮೇಲೆ ನಾವು ವಿಶ್ವಾಸ ಇಟ್ಟೇ ಇಲ್ಲ. ಯಾರು ಅವತ್ತಿನ ವಾತಾವರಣದಲ್ಲಿ ಕಾಂಗ್ರೆಸ್ ಹೆಸರಿನಲ್ಲಿ ಆ ಟೈಮ್‌ನಲ್ಲಿ ಗೆದ್ದು ಬಂದರು, ಆ ತರಹದವರು ಖಂಡಿತಾ, ಅಕಸ್ಮಾತ್ ತಾತ್ಕಾಲಿಕವಾಗಿ ಯಾರೋ ಕೆಲವರು ಬಂದಿದ್ದರೂ, ಅವರು ಇಲ್ಲಿಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, realize ಮಾಡಿಕೊಳ್ಳದಿದ್ದರೆ, ಅವರು ಅಲ್ಲಿಯೂ ಉಳಿಯುವುದಿಲ್ಲ, ಇಲ್ಲಿಯೂ ಉಳಿಯುವುದಿಲ್ಲ. ಆ ವಿಷಯ ಬೇರೆ. ಆದರೆ, ನಾವು ಮುಖಂಡರನ್ನು ನಂಬಿಕೊಂಡಿಲ್ಲ. ಆ ಸಮೂಹವನ್ನು ಬಡಿದೆಬ್ಬಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇಷ್ಟು ಮಾತ್ರ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದಕ್ಕಿಂತ ಹೆಚ್ಚು ಹೇಳುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಮುಖ್ಯಮಂತ್ರಿಗಳೆ, ಕಾಂಗ್ರೆಸ್ ಅಧಿಕಾರ ಇದ್ದಂತಹ ಸಂದರ್ಭದಲ್ಲಿ Scheduled Caste ಎಂದರೆ ಎಲ್ಲರನ್ನೂ ಸರಿ ಸಮಾನವಾಗಿ ನೋಡತಕ್ಕಂಥ ಒಂದು ಪರಿಪಾಠವನ್ನು ಹಾಕಿಕೊಂಡು ಬಂದಿತ್ತು. ಆದರೆ ನೀವು ಎಲ್ಲೋ ಒಂದು ಕಡೆ, ಎಡವಿದ್ದೀರಿ. ದಯಮಾಡಿ ಸ್ವಲ್ಪ ಅರ್ಥ ಮಾಡಿಕೊಳ್ಳಿ. [ಗೊಂದಲ] ಇವತ್ತು ನೀವು SCಯಲ್ಲಿ Left ಅನ್ನಬಹುದು, Right

ಅನ್ನಬಹುದು. ಅವರು ಅಸ್ಪೃಶ್ಯರು ಎಂಬುದನ್ನೂ ಕೂಡ ಮರೆಯಬಾರದು. ಅಸ್ಪೃಶ್ಯರು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ, ವಂಚನೆಗೆ ಒಳಗಾಗಿದ್ದಾರೆ. ಅವರಿಗೆ ಆದ್ಯತೆಯನ್ನು ಕೂಡ ಕೊಟ್ಟಿದ್ದೇವೆ. ಸಂವಿಧಾನದಲ್ಲಿ ಇರತಕ್ಕಂಥ ಅವಕಾಶವನ್ನು ಕೊಟ್ಟಿದ್ದೇವೆ. ಆದರೆ, ನೀವು ಎಲ್ಲೋ ಒಂದುಕಡೆ ಅವರನ್ನು ಮತ್ತು ಬೇರೆಯವರನ್ನು ಸರಿ ಸಮಾನವಾಗಿ ನೋಡುತ್ತಿಲ್ಲ. ತಾಂಡಾಗಳನ್ನು ಪರಿವರ್ತನೆ ಮಾಡತಕ್ಕಂಥದ್ದು ಹೊಸ ಯೋಜನೆ ಏನಲ್ಲ. ನಾವು ಮಾಡಿದ್ದನ್ನೇ ನೀವು ಮುಂದುವರೆಸುತ್ತಿದ್ದೀರಿ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆದರೆ, ಎಲ್ಲೋ ಒಂದು ಕಡೆ ನಿಮ್ಮ ಮಾತಿನಲ್ಲಿ ಏನು ಅರ್ಥವಾಗುತ್ತಿದೆ ಎಂದರೆ, ಅವರನ್ನು ಓಲೈಸತಕ್ಕಂಥ ರೀತಿಯಲ್ಲಿ, ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟತಕ್ಕಂಥ ಕೆಲಸ ಮಾಡತಕ್ಕದ್ದು ಸರಿಯಲ್ಲ. ನಿಮ್ಮ ಮಾತಿನ ಅರ್ಥ ಏನೆಂದರೆ, ಅಲ್ಲಿ SCಯಲ್ಲಿ ಇರತಕ್ಕಂಥವರನ್ನು ಅಥವಾ ಅಸ್ಪೃಶ್ಯರನ್ನು ಇವತ್ತು ಕಾಂಗ್ರೆಸ್ ಹೆಚ್ಚು ಓಲೈಸಿತು, ನಾವು ಓಲೈಸಿಲ್ಲ ಎನ್ನತಕ್ಕಂಥ ಅರ್ಥವೇ?

[ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾನೇನು ಹೇಳುತ್ತೇನೆಂದರೆ ನೀವು ಈ ಸಮುದಾಯದ ಅಭಿವೃದ್ಧಿ ಬಗ್ಗೆ ಯೋಚನೆ ಮಾಡಲಿಲ್ಲ. ಅವರು 'Vote Bank' ಆಗಿ ನಮ್ಮ ಹತ್ತಿರ ಇರುತ್ತಾರೆ ಎಂದುಕೊಂಡಿದ್ದಿರಿ. ಅವರು ಜಾಗೃತರಾಗುತ್ತಾರೆ ಎನ್ನುವುದು ಗೊತ್ತಿದ್ದರೆ, ಖಂಡಿತವಾಗಿಯೂ ನಾನು ಮಾಡುವಂತಹ ಕೆಲಸವನ್ನು ನೀವೇ ಮುಂಚೆ ಮಾಡುತ್ತಿದ್ದಿರಿ. ನೀವು ಯಾವುದೋ ಭ್ರಮಾಲೋಕದಲ್ಲಿದ್ದಿರಿ. ನಾನು ಹಳ್ಳಿಯಲ್ಲೇ ಬೆಳೆದವನು. ನೀವು ಹಳ್ಳಿಯಲ್ಲಿ ಬೆಳೆದರೂ, ನಗರಕ್ಕೆ ಹೆಚ್ಚು ಓಡಾಡುತ್ತೀರಿ. ಇವತ್ತೂ ನಾನು ಹಳ್ಳಿಯವನೇ. ನನ್ನ ಸಂಸ್ಕೃತಿ, ನನ್ನ ಒಡನಾಟ, ನನ್ನ ವ್ಯವಹಾರಗಳೆಲ್ಲಾ ಹಳ್ಳಿಯಲ್ಲೇ. ಹೀಗಾಗಿ ಒಂದಷ್ಟು ಕೈ ಹಾಕಿ ರಿಪೇರಿ ಮಾಡಲಿಕ್ಕೆ ಸಾಧ್ಯವೇ? ಎಂದು ನಾನು ನೋಡುತ್ತಿದ್ದೇನೆ. ಭಗವಂತನ ಇಚ್ಛೆ ಏನಿದೆಯೋ ಗೊತ್ತಿಲ್ಲ. ಅಧಿಕಾರ ಇದ್ದಾಗ ಅದು ನನಗೆ ಸಾಧ್ಯವಾದರೆ ಸಮಾಧಾನವಾಗುತ್ತದೆ. ಈ ಅಧಿಕಾರವೇನು ಶಾಶ್ವತವಲ್ಲ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಕಷ್ಟ ಸುಖ ವಿಚಾರಿಸಲಿಕ್ಕೆ ಹಳ್ಳಿಗಳಿಗೆ ಹೋಗುತ್ತಿದ್ದರು. ಅದರಲ್ಲಿ ಅವರು ಎಷ್ಟರಮಟ್ಟಿಗೆ ಯಶಸ್ವಿಯಾದರು, ಬಿಟ್ಟರು ಎಂಬುದು ಬೇರೆ ವಿಚಾರ. ಆ ದಿಕ್ಕಿನಲ್ಲಿ ಅವರು ಪ್ರಯತ್ನವೊಂದನ್ನು ಮಾಡಿದ್ದರು. ಅದನ್ನು ಹಿಂದಿನವರು ಯಾರೂ ಮಾಡಿರಲಿಲ್ಲ. ಆದರೆ ಯಡಿಯೂರಪ್ಪ ಬಂದ ಮೇಲೆ, 'ಜನ ಸ್ಪಂದನ' ಸಭೆಗಳನ್ನು ಮಾಡುವುದಕ್ಕೆ ಶುರು ಮಾಡಿದೆವು. 'ಜನತಾ ದರ್ಶನ' ಎಂದು ಇಲ್ಲಿಗೆ ಬರುವುದು ಬೇಡ, ನಾವೇ ಅವರಲ್ಲಿಗೆ ಹೋಗೋಣ ಎಂದು ಅದನ್ನು ಮಾಡಿದೆವು. ಆ ಬಗ್ಗೆ ನೀವು ಹೇಳಿದಿರಿ.

ಮಾನ್ಯ ಕುಮಾರಸ್ವಾಮಿಯವರು ಸೇರಿ ಅದನ್ನು ಟೀಕೆ ಮಾಡಿದರು. BPL cards ಸಿಕ್ಕಿಲ್ಲ, ಮನೆ ಸಿಗುತ್ತಿಲ್ಲವೆಂದು ತುಂಬಾ ಜನ ಬರುತ್ತಿದ್ದಾರೆ ಎಂದಿರಿ. 'ಹೌದು ಸ್ವಾಮಿ', 100% you are right. ಅದಕ್ಕೆ you are responsible, ಯಡಿಯೂರಪ್ಪ ಅಲ್ಲ. ಇದನ್ನು ತಿಳಿದುಕೊಳ್ಳುವುದಕ್ಕಾಗಿಯೇ ನಾವು 'ಜನ ಸ್ಪಂದನ' ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಯಾರಿಗೆ BPL card ಸಿಕ್ಕಿಲ್ಲ, ಯಾರಿಗೆ ಸೈಟ್ ಸಿಕ್ಕಿಲ್ಲ, ಯಾರಿಗೆ ಮನೆ ಸಿಕ್ಕಿಲ್ಲ, ಯಾರು ಬಂದಿದ್ದನ್ನೆಲ್ಲಾ mis-use ಮಾಡುತ್ತಿದ್ದಾರೆ, ಇದನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶ ಇರಲಿಲ್ಲ, ಆದ್ದರಿಂದ ಆ ದಿಕ್ಕಿನಲ್ಲಿ ನಾನೊಂದು ಪ್ರಯತ್ನವನ್ನು ಮಾಡಿದೆ. 60 ವರ್ಷಗಳ ನಂತರ KPSCಗೆ ಒಬ್ಬ ಬಂಜಾರ ಸಮಾಜದವರನ್ನು ಈಗ ನೇಮಕ ಮಾಡಿದ್ದೇನೆ. ಮಾನ್ಯ ಬಾಲಕೃಷ್ಣರವರೆ, ಇದರಲ್ಲಿ ನನ್ನ ಸ್ವಾರ್ಥ ಏನಿದೆ? ಆ ಸಮುದಾಯವನ್ನು ಹಿಂದಿನವರು ಮರೆತಿದ್ದರು. ನಾನು ಜವಾಬ್ದಾರಿ ತೆಗೆದುಕೊಂಡು ...

ಶ್ರೀ ಹೆಚ್.ಸಿ.ಬಾಲಕೃಷ್ಣ:– ಕೇವಲ ತಿಳಿದುಕೊಳ್ಳುವಂತಹ ಪ್ರಯತ್ನ ಮಾಡುತ್ತಿರಬೇಡಿ. ಅನುಷ್ಠಾನವಾಗುವಂತಹ ಪ್ರಯತ್ನ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಆಯಿತಪ್ಪ, ನೀನು ಹೇಗಾದರೂ ತಿಳಿದುಕೋ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ನೀವು ಬರೇ ತಿಳಿದುಕೊಳ್ಳುವುದರಲ್ಲೇ ಇದ್ದರೆ, ಬಹಳ ಕಷ್ಟವಾಗುತ್ತದೆ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಧ್ಯದಲ್ಲಿ ಈ ರೀತಿ ಎದ್ದು ಮಾತನಾಡಿದರೆ ಹೇಗೆ? ನಾನು ಇಲ್ಲಿ reply ಕೊಡುತ್ತಿದ್ದೇನೆ. ನೀವು ಮಾತನಾಡಬೇಕಾದರೆ ನಾನು ಮಧ್ಯೆ ಮಾತನಾಡಿಲ್ಲ. No, Sir, please... This is not correct.

[ಗೊಂದಲ]

ದಯವಿಟ್ಟು ನಾನು ಯೀಲ್ಡ್ ಆಗಿಲ್ಲ. ಮಧ್ಯೆ ಮಾತನಾಡಬೇಡಿ. ಉತ್ತರ ಕೊಡಲು ಬಿಡಿ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ:– ನೀವು ಸಿ.ಎಂ. ಆಗಿದ್ದಾಗಲೂ ಇನ್ನೂ ತಿಳಿದುಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದರೆ ಹೇಗೆ? ಅನುಷ್ಠಾನಗೊಳಿಸುವಂತಹ ಪ್ರಯತ್ನವನ್ನು ಮಾಡಿ.

[ಗೊಂದಲ]

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ ಮೇಲೆ clarification ಕೇಳಿ.

[ಗೊಂದಲ]

ಶ್ರೀ ಆರ್.ಧ್ರುವನಾರಾಯಣ್:– ಮಾನ್ಯ ಅಧ್ಯಕ್ಷರೆ, point of order.

[ಗೊಂದಲ]

ಅಧ್ಯಕ್ಷರು:– ಇಲ್ಲಿ ಯಾವುದೂ point of order ಬರುವುದಿಲ್ಲ. Please, ಕುಳಿತುಕೊಳ್ಳಿ. ಆಮೇಲೆ ಬೇಕಾದರೆ ನೀವು ಸ್ಪಷ್ಟೀಕರಣ ಕೇಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಧ್ರುವನಾರಾಯಣರವರೆ, ನಿಮಗ್ಯಾಕೆ ಸಿಟ್ಟು ಬರುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸತ್ಯ ಹೇಳಿದರೆ ನಿಮಗ್ಯಾಕೆ ಸಿಟ್ಟು ಬರುತ್ತದೆ? ಆಮೇಲೆ, clarification ಬೇಕಾದರೆ ಕೇಳಿ. ಈಗ ನನಗೆ ಉತ್ತರ ಕೊಡಲು ಬಿಡಿ.

[ಗೊಂದಲ]

ಅಧ್ಯಕ್ಷರು:– ಉತ್ತರವಾದ ಮೇಲೆ clarification ಕೇಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಈ ರಾಜ್ಯದ ಜನತೆಗೆ ತಪ್ಪು ಮಾಹಿತಿಯನ್ನು ಕೊಡುವಂತಹ ಪ್ರಯತ್ನವೊಂದನ್ನು ನೀವು ಮಾಡುತ್ತಿದ್ದೀರಿ.

[ಗೊಂದಲ]

ಅಧ್ಯಕ್ಷರು:– ಮಾನ್ಯ ಮಹದೇವಪ್ಪನವರೆ, ಆಮೇಲೆ ನೀವು ಸ್ಪಷ್ಟೀಕರಣ ಕೇಳಿ. ಮೊದಲು ಅವರು ಉತ್ತರ complete ಮಾಡಲಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ನೋಡಿ, ರಾಜಕಾರಣ ಮಾತನಾಡುವುದಾದರೆ, ನಾನು ಮಾತನಾಡಲಿಕ್ಕೆ ಸಿದ್ಧನಿದ್ದೇನೆ. ಇವತ್ತು ಕೇಂದ್ರ ಸರ್ಕಾರ ಬಜೆಟ್ ಅನ್ನು ಮಂಡನೆ ಮಾಡಿತು. ಬಜೆಟ್ ಅನ್ನು ಮಂಡನೆ ಮಾಡಿದ ಮೇಲೆ, ಇನ್ನೊಂದು ಸರ್ಕಾರ ಬರುವುದಕ್ಕೆ ಚುನಾವಣೆ ಘೋಷಣೆ ಮಾಡುವಂತಹ ಕಾಲದಲ್ಲಿ, 30 ಸಾವಿರ ಕೋಟಿ ರೂ.ಗಳ concessions ಘೋಷಣೆ ಮಾಡಿಲ್ಲವೇ? Everyday ಪತ್ರಿಕೆಯಲ್ಲಿ full page advertisements ಬರುತ್ತಿಲ್ಲವೇ? ಮಾನ್ಯ

ಕುಮಾರಸ್ವಾಮಿಯವರು ಜಾಹೀರಾತು ನೀಡುತ್ತಿರುವ ಬಗ್ಗೆ ಪ್ರಶ್ನೆ ಮಾಡಿದರು. ನಿಮ್ಮ ಅಂಕಿ ಅಂಶಗಳನ್ನು ನಾನು ಕೊಡಲೇ? ಈಗ ಉದಾಹರಣೆಗೆ ಹೇಳುವುದಾದರೆ,...

[ಗೊಂದಲ]

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ನಂತರ ಸ್ಪಷ್ಟೀಕರಣ ಕೇಳುವಿರಂತೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಕುಮಾರಸ್ವಾಮಿಯವರು ಜಾಹೀರಾತಿನ ಬಗ್ಗೆ ಪ್ರಸ್ತಾಪ ಮಾಡಿದರು. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಜಾಹೀರಾತಿಗೆ 20 ತಿಂಗಳಿನಲ್ಲಿ ಅವರು 18 ಕೋಟಿ 79 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದರು. ಈ ಯಡಿಯೂರಪ್ಪ ಜನವರಿ ಅಂತ್ಯದವರೆಗೆ 9 ತಿಂಗಳಿಗೆ 7 ಕೋಟಿ 36 ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದಾನೆ. [ಗೊಂದಲ] ಇದೇನು ಸಾರ್ ಇದು? ಹೀಗಾದರೆ ನಾನು ಉತ್ತರ ಕೊಡುವುದಿಲ್ಲ, ಕುಳಿತುಕೊಂಡು ಬಿಡುತ್ತೇನೆ.

[ಗೊಂದಲ]

ಅಧ್ಯಕ್ಷರು:– ಮಾನ್ಯ ರಮಾನಾಥ ರೈರವರು ಮತ್ತು ಇತರ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಬಿ.ರಮಾನಾಥ ರೈ:– ನಾನು 5 ಬಾರಿ ಎಂ.ಎಲ್.ಎ.ಯಾಗಿ ಆಯ್ಕೆಯಾಗಿ ಬಂದಿದ್ದೇನೆ. ನಾನೇನೂ ಹೊಸದಾಗಿ ಆಯ್ಕೆಯಾಗಿ ಬಂದಿಲ್ಲ. ಹೇಗೆ ಮತ್ತು ಯಾವಾಗ ಮಾತನಾಡಬೇಕೆಂಬುದು ನನಗೆ ಗೊತ್ತಿದೆ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಆಡಳಿತ ಪಕ್ಷದ ಕಡೆ ಇರುವ ಸದಸ್ಯರು ಅವರ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು, ಅವರು ಏನು ಹೇಳುತ್ತಿದ್ದಾರೆ, ನಾವೇನಾದರೂ ಪ್ರಶ್ನೆಯನ್ನು ಕೇಳಿದರೆ, ಅದು ತಿರುಗುಬಾಣವಾಗಬಾರದು ಅಷ್ಟೆ.[ಗೊಂದಲ]

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುತ್ತಿದ್ದಾರೆ, ಅವರಿಗೆ ಗೌರವ ಕೊಡಬೇಕು, ಆದರೆ ಏನೊ ಅಪ್ಪಿತಪ್ಪಿ ಕೆಲವು ವಿಚಾರಗಳಿಗೆ, ಅವರು[ರಮಾನಾಥ ರೈ] 5 ಸಾರಿ ಗೆದ್ದಿದ್ದಾರೆ, ನಿಂತುಕೊಳ್ಳುತ್ತಿರಲಿಲ್ಲ, ನಿಂತುಕೊಂಡರು, ನಿಂತುಕೊಂಡಾಕ್ಷಣ, ವೈಯಕ್ತಿಕ ಚರಿತ್ರೆ ಎಂದೆಲ್ಲಾ ಮಾತನಾಡಿದರೆ ಹೇಗೆ?[ಗೊಂದಲ]

ಶ್ರೀ ರೇಣುಕಾಚಾರ್ಯ: ಅವರ ವೈಯಕ್ತಿಕ ಚರಿತ್ರೆ ಬಗ್ಗೆ ಮಾತನಾಡಲಿಲ್ಲ..[ಗೊಂದಲ]

ಅಧ್ಯಕ್ಷರು: ಯಾರೂ ಆ ರೀತಿ ಕಾಮೆಂಟ್ ಮಾಡಿಲ್ಲವಂತೆ, ಕುಳಿತುಕೊಳ್ಳಿ..[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್, ಈಗ ಮಾಧ್ಯಮದ ಸ್ನೇಹಿತರ ಮೂಲಕ ಈ ರಾಜ್ಯದ ಜನತೆಗೆ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಜನರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದು ಹೇಳಿ ಮಂಕೂಬೂದಿಯನ್ನು ಎರಚುವಲ್ಲಿ ಯಾರು ಯಶಸ್ವಿಯಾಗಲು ಸಾಧ್ಯವಿಲ್ಲ, ಅಂಕಿಅಂಶಗಳನ್ನು ತೋರಿಸುತ್ತೇನೆ. ಉದಾಹರಣೆಗೆ 2004–05ರಲ್ಲಿ SC/ST ಜನಾಂಗಕ್ಕೆ 474 ಕೋಟಿ ಅನುದಾನವನ್ನು ಒದಗಿಸಿಕೊಟ್ಟಿದ್ದು, 2005–06ರಲ್ಲಿ 651 ಕೋಟಿ, 2006–07ರಲ್ಲಿ ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗಿ 1876 ಕೋಟಿ ಒದಗಿಸಲಾಯಿತು. ಉಪ ಮುಖ್ಯಮಂತ್ರಿಯಾಗಿ 2ನೇ ಬಜೆಟ್ ಮಂಡನೆ ಮಾಡಿದಾಗ 2007–08ರಲ್ಲಿ 2721 ಕೋಟಿ ರೂ.ಗಳನ್ನು ಕೊಡಲಾಯಿತು. 2008–09ರಲ್ಲಿ 3958 ಕೋಟಿಯನ್ನು ಕೊಟ್ಟಿದ್ದೇನೆ. ಕೊಟ್ಟರೂ ಕೂಡ ಖರ್ಚು ಎಷ್ಟು ಮಾಡಿದರೆಂದು ನೀವು ಕೇಳಬಹುದು, ನೀವು ಅದೇ ಪ್ರಶ್ನೆಯನ್ನು ಕೇಳುತ್ತೀರೆಂದು ಗೊತ್ತು. 3958 ಕೋಟಿಯನ್ನು 2008–09ನೇ ಸಾಲಿನಲ್ಲೇನು ಇಟ್ಟಿದ್ದೇನೆ, ಜನವರಿ ಅಂತ್ಯದವರೆಗೆ 2400 ಕೋಟಿ ಅಂದರೆ 60% ಆ ದಿಕ್ಕಿನಲ್ಲಿ ಖರ್ಚು ಮಾಡಿದ್ದೇನೆ. 2009–10ನೇ ಸಾಲಿಗೆ 4061 ಕೋಟಿ ಇಟ್ಟಿದ್ದೇವೆ, ಅಂದರೆ 3 ವರ್ಷಗಳ ಹಿಂದೆ SC/ST ಜನಾಂಗಕ್ಕೆ ನೀಡುತ್ತಿದ್ದ ಅನುದಾನವನ್ನು ಹೋಲಿಕೆ ಮಾಡಿದರೆ ನಾವು 6 ಪಟ್ಟು ಹೆಚ್ಚು ಅನುದಾನವನ್ನು ಕೊಟ್ಟಿದ್ದೇವೆ, ಇಷ್ಟನ್ನು ಮಾತ್ರ ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಹಿಂದುಳಿದ ವರ್ಗಗಳಿಗೆ, "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ಈ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವ ವ್ಯಕ್ತಿ ನಾನು. ಆದುದರಿಂದಲೇ ಈ ರೀತಿ ಬಡಜನಾಂಗವನ್ನು ಗುರುತಿಸಿ, ಕುಂಬಾರ, ಕಮ್ಮಾರ, ಬಡಿಗ, ದೇವಾಂಗ, ಮೂರ್ತೆದಾರ, ಅಕ್ಕಸಾಲಿಗ, ದರ್ಜಿ, ಕ್ಷಾವ್ರಿಕ ಈ ರೀತಿ ಸಂಪ್ರದಾಯವಿರುವವರಿಗೆ ಸುಮಾರು 1 ಲಕ್ಷ ಕುಟುಂಬಕ್ಕೆ ಅನುಕೂಲ ಮಾಡಿಕೊಡಬೇಕು, ಸಬ್ಸಿಡಿ ಕೊಡಬೇಕು, ಅವರು ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು 50 ಕೋಟಿ ಸಹಾಯಧನ 100 ಕೋಟಿ ಅನುದಾನವನ್ನು ಒದಗಿಸುತ್ತಿದ್ದೇನೆ, ಎಲ್ಲಾ ಸಮಾಜಗಳ ಸಂಘಟನೆಗಳಿಗೆ ಮೂಲಭೂತ ಸೌಲಭ್ಯ ಒದಗಿಸುವುದಕ್ಕೆ 20 ಕೋಟಿ ಹಣವನ್ನಿಟ್ಟಿದ್ದೇನೆ. ಅಲ್ಪಸಂಖ್ಯಾತರ ಬಗ್ಗೆ, ನಾನು ಕೇಳುವುದೇನೆಂದರೆ, ಬಹುಶಃ ಸ್ವಾತಂತ್ರ್ಯ ಬಂದ ಮೇಲೆ ಅಲ್ಪಸಂಖ್ಯಾತರು ನಿಮಗೆ ಕೊಟ್ಟಷ್ಟು ಬೆಂಬಲ ಬೇರೆ ಯಾವ ಸಮೂಹ

ಕೂಡ ಕೊಟ್ಟಿರುವುದಕ್ಕೆ ಸಾಧ್ಯವಿಲ್ಲ. ಆದರೆ ಹಿಂದಿನ ಬಜೆಟ್ ನಲ್ಲಿ ತಾವಿಟ್ಟಿರುವ ಹಣವೆಷ್ಟು? ಅವರ ಶಿಕ್ಷಣಕ್ಕೆ ಕೊಟ್ಟ ಹಣವೆಷ್ಟು? ಇವತ್ತು ನಮ್ಮ ಸರ್ಕಾರ ಬಂದ ಮೇಲೆ ಕೊಡುತ್ತಿರುವ ಹಣವೆಷ್ಟೆಂದು ಯೋಚನೆ ಮಾಡಿದರೆ, ನಿಮಗೆ ಆಶ್ಚರ್ಯವೆಂದರೆ, 2008–09ನೇ ಸಾಲಿನ ಆಯವ್ಯಯದಲ್ಲಿ 143 ಕೋಟಿ ಅನುದಾನವನ್ನು ಒದಗಿಸಿದ್ದೇನೆ, 2007–08ನೇ ಸಾಲಿಗಿಂತ 47% ಹೆಚ್ಚುವರಿಯಾಗಿ ನಾನು ಕೊಟ್ಟಿದ್ದೇನೆ, ಈ ವರ್ಷ 167 ಕೋಟಿ ಇಟ್ಟಿದ್ದೇವೆ. ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 2005–06 14 ಕೋಟಿ ಇತ್ತು, ಈಗ 51 ಕೋಟಿಯನ್ನಿಟ್ಟಿದ್ದೇವೆ. ಹೀಗೆ ಎಲ್ಲಾ ವರ್ಗದ ಜನರಿಗೆ ಬೇಕಾದ್ದನ್ನು ಅನುಕೂಲ ಮಾಡಿಕೊಡುವುದಷ್ಟೆ ಅಲ್ಲ, ಹಿಂದು–ಮುಸ್ಲಿಮ, ಹಿಂದು–ಕ್ರೈಸ್ತ ಭಾವೈಕ್ಯತೆ ಅನುಕೂಲತೆಗಾಗಿ ಅವರು ಕೇಳಿದಂಥ ಹಣವನ್ನು ಕೊಡಬೇಕೆಂದು ಅದಕ್ಕಾಗಿ 10 ಕೋಟಿಯನ್ನಿಟ್ಟಿದ್ದೇನೆ. ರಾಷ್ಟ್ರಕವಿ ಕುವೆಂಪು ಅವರು ಹೇಳಿದ ಮಾತು ನೆನಪಿಗೆ ಬರುತ್ತದೆ– "ಸರ್ವಜನಾಂಗದ ಶಾಂತಿಯ ತೋಟ"ವೆಂಬುದನ್ನು ನಾನು ಉಲ್ಲೇಖಿಸಿದ್ದೇನೆ, ಆ ರೀತಿ ಎಲ್ಲಾ ಜನರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನವನ್ನು ಮಾಡುತ್ತೇನೆ. ರೈತರಿಗೆ ಏನು ಮಾಡಿದಿರೆಂದು ಕೇಳಬಹುದು, ಸ್ವಾಮಿ, ಎಷ್ಟು ಲಕ್ಷ ಜನರಿಗೆ ಅನುಕೂಲವಾಗುತ್ತದೆಂದು ಲೆಕ್ಕಾ ನೋಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 3% ದರದಲ್ಲಿ ಸಾಲವನ್ನೇನು ಕೊಡುತ್ತಿದ್ದಾರೆ, ಇದರಿಂದ 15 ಲಕ್ಷ ಕುಟುಂಬಕ್ಕೆ ಅನುಕೂಲವಾಗುತ್ತದೆ. ಹಾಗೆ ರೈತರ ಪಂಪ್ ಸೆಟ್ ಗಳಿಗೆ ಉಚಿತವಾಗಿ ವಿದ್ಯುತ್ ಕೊಡುವ ಬಗ್ಗೆ ನೀವೇ ಅಂಕಿಅಂಶಗಳನ್ನು 17 ಲಕ್ಷ ಕುಟುಂಬದ ಬಗ್ಗೆ ಹೇಳಿದಿರಿ. ಹಾಲು ಉತ್ಪಾದಕರಿಗೆ 2 ರೂಪಾಯಿಗಳ ಸಹಾಯಧನವನ್ನು ಕೊಡುತ್ತಿದ್ದೇನೆ, ಅದರಿಂದ 5 ಲಕ್ಷ ಕುಟುಂಬಕ್ಕೆ ಅನುಕೂಲವಾಗುತ್ತಿದೆ, ಸಾವಯವ ಕೃಷಿಯಲ್ಲಿ 50,000 ರೈತರಿಗೆ ಅನುಕೂಲವಾಗುವಂಥ ಯೋಜನೆಯನ್ನು ಮಾಡಿದ್ದೇವೆ, ಯಶಸ್ವಿ ಯೋಜನೆಯಿಂದ 6.29 ಲಕ್ಷ ಬಡ ಕುಟುಂಬಗಳಿಗೆ ಅನುಕೂಲವಾಗುತ್ತಿದೆ, ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯಿಂದ 16 ಲಕ್ಷ ರೈತರಿಗೆ ಅನುಕೂಲವಾಗುತ್ತಿದೆ, 1.10 ಲಕ್ಷ ಸ್ತ್ರೀಶಕ್ತಿ ಗುಂಪುಗಳ ಸಹಾಯಧನ ಯೋಜನೆಯಿಂದ 16 ಮಹಿಳೆಯರಿಗೆ ಅನುಕೂಲವಾಗುತ್ತದೆ. ಹೀಗೆ ಸಣ್ಣ ಸಣ್ಣ ಗುಂಪುಗಳಿಗೆ ಅನುಕೂಲ ಮಾಡಿಕೊಡುವ ಯೋಜನೆಗಳ ಜೊತೆಗೆ ರೈತರ ಸಮೂಹಕ್ಕೆ ನಾನು ನನ್ನ ಶಕ್ತಿಮೀರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಮತ್ತೆ, ಪ್ರಾದೇಶಿಕ ಅಸಮಾನತೆ ನಿವಾರಣೆಗೋಸ್ಕರ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೋಸ್ಕರ ನಂಜುಂಡಪ್ಪ ವರದಿಯ ಪ್ರಕಾರ ಕಳೆದ 2 ವರ್ಷಗಳಿಂದ ವಿಶೇಷ ಯೋಜನೆಯನ್ನು ರೂಪಿಸಿದ್ದೇವೆ. 2007–08ರಲ್ಲಿ 1572 ಕೋಟಿ, 2008–09ರಲ್ಲಿ 2547 ಕೋಟಿ ಅನುದಾನವನ್ನು ಒದಗಿಸಿದ್ದೇವೆ. ಈ ಸಾರಿ ಪ್ರತ್ಯೇಕ ಲೆಕ್ಕಶೀರ್ಷಿಕೆ ಮಾಡಿದರೆ, ವಲಯವಾರು, ಇಲಾಖೆವಾರು ವೆಚ್ಚವನ್ನು ಕ್ರೋಢೀಕರಣವನ್ನು ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆಂದು ನಾವು

ಮಾಡಿದ್ದೇವೆ. ಜನವರಿ ಅಂತ್ಯಕ್ಕೆ ಸುಮಾರು 50% ಹಣ ಖರ್ಚಾಗಿದೆ. ಮಾರ್ಚ್ ಅಂತ್ಯಕ್ಕೆ 80% ಹಣ ನಂಜುಂಡಪ್ಪ ವರದಿಯ ಪ್ರಕಾರ ಹಣ ಖರ್ಚಾಗುತ್ತದೆ ಎನ್ನುವ ವಿಶ್ವಾಸ ನನಗಿದೆ, ಅದರ ಆಧಾರದ ಮೇಲೆ ನಾನು ಅಂಕಿಅಂಶಗಳನ್ನು ನಿಮಗೆ ಕೊಡುತ್ತಿದ್ದೇನೆ 2009–10ನೇ ಸಾಲಿನಿಂದ ಹೊಸ ಲೆಕ್ಕಶೀರ್ಷಿಕೆಯಲ್ಲಿ ಮಾಡಿದಾಗ ಏಕೆ ಆಗಲ್ಲಿಲವೆಂದು ಕೇಳುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೋಸ್ಕರವೇ ನಮ್ಮ ಶಾಸಕರಾದ ಶಶಿಲ್ ನಮೋಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇನ್ನು ಪಡಿತರ ಕಾರ್ಡುಗಳ ಬಗ್ಗೆ ಚರ್ಚೆಯಾಯಿತು. ನಿಮ್ಮಲ್ಲಿ ಪಕ್ಷಭೇದ ಮರೆತು ನಾನು ವಿನಯದಿಂದ ವಿನಂತಿ ಮಾಡುವುದೇನೆಂದರೆ, ನಿಜವಾದ ಬಡವರಿಗೆ ಪಡಿತರ ಕಾರ್ಡು ಸಿಗಬೇಕು. ಆ ಕಡೆ ಈ ಕಡೆ ಎಂದಲ್ಲ ನಾವೆಲ್ಲರೂ ಸೇರಿ, ಬಡವರಿಗೆ ಸಿಕ್ಕಿಲ್ಲವೆಂದು ಕೂಗುತ್ತಿದ್ದೇವೆ, ಇದು ಬಡವರಿಗೆ ಸಿಗಲೇ ಬೇಕು ಇದರಲ್ಲಿ ಎರಡನೇ ಮಾತಿಲ್ಲ. ಆದರೆ ನ್ಯಾಯಬೆಲೆ ಅಂಗಡಿಯವನು ದುರುಪಯೋಗ ಮಾಡಿಕೊಂಡಿದ್ದಾನೆ, ದುಬಾರಿ ಅಕ್ಕಿ ಬೆಲೆ ಇದ್ದಾಗ ನೂರೂರು ಕಾರ್ಡುಗಳನ್ನು ಇಟ್ಟುಕೊಂಡು ದುರುಪಯೋಗ ಮಾಡಿಕೊಳ್ಳುತ್ತಿದ್ದಾನೆ, ಅದನ್ನು ಕಂಟ್ರೋಲ್ ಮಾಡುವ ಪ್ರಯತ್ನ, ಮತ್ತು ಯಾರು ಇದ್ದ ಕುಟುಂಬಗಳೇ ಎರಡು ಮೂರು ಕಾರ್ಡ್‌ಗಳನ್ನು ಇಟ್ಟುಕೊಂಡಿದ್ದಾರೆ. ಇದು ನಿಮ್ಮ ಕಾಲದಿಂದಲೇ 3–4 ವರ್ಷಗಳಿಂದಲೇ ಫೋಟೊ ತೆಗೆಯುವುದು ಮಾಡುವುದು ವಿಳಂಬವಾಗಿ ಈಗ ನೂರಾರು ಜನರು ಬಂದು ಅಲ್ಲಿ ಕ್ಯೂನಲ್ಲಿ ನಿಂತುಕೊಂಡರೆಂದು ಹಂಗಾಮಿಯಾಗಿ ಕಾರ್ಡುಗಳನ್ನು ಕೊಡುತ್ತೇವೆಂದು ತೀರ್ಮಾನವನ್ನು ತೆಗೆದುಕೊಂಡಿರುವುದು ನಿಜ. ಅದನ್ನು ವೆರಿಫಿಕೇಷನ್ ಮಾಡಿಯಾದ ಮೇಲೆ ನಿಜವಾದವರಿಗೆ ಅದು ಸಿಗಬೇಕು. ಅಲ್ಲಿಯವರೆಗೆ ನಿಜವಾದ ಬಡವರಿಗೆ ವಂಚನೆಯಾಗಬಾರದೆಂದು ಹಂಗಾಮಿಯಾಗಿ ನಾವು ಕಾರ್ಡು ಕೊಡುತ್ತಿದ್ದೇವೆಯೇ ಹೊರತು, ನಿಮ್ಮಿಂದ ನಾನು ಸಹಕಾರ ಬಯಸುವುದೇನೆಂದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಹೊಸದಾಗಿ ಪಡಿತರ ಕಾರ್ಡುಗಳನ್ನು ಕೊಡುತ್ತಿರುವುದರಿಂದ, ಅಕ್ಕಿಯನ್ನು ಹೆಚ್ಚು ಕೊಡುವುದಕ್ಕೆ...

ಶ್ರೀ ಟಿ.ಬಿ.ಜಯಚಂದ್ರ: ಇಲ್ಲ ತಪ್ಪು ಸಂದೇಶ ಹೋಗುತ್ತದೆ, ತಾವು ಬೆಳಗಾಂನಲ್ಲಿ ಅಧಿವೇಶನ ನಡೆಯುವಂಥ ಸಮಯದಲ್ಲಿ ಒಂದು ಸಾರಿ ಅಫಿಡವಿಟ್ ಕೊಟ್ಟ ಮೇಲೆ ತಾತ್ಕಾಲಿಕವಾಗಿ ಕಾರ್ಡುಗಳನ್ನು ಕೊಡುವುದು ನಮ್ಮ ಜವಾಬ್ದಾರಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದಿರಿ, ಕೊಟ್ಟಿದ್ದರಿಂದ ಲಕ್ಷಾಂತರ ಜನರಿಗೆ ಇವತ್ತು ಕಾರ್ಡು ಸಿಕ್ಕಿದೆ.

ಆದರೆ ಈಗ ನೀವು ನಿನ್ನೆ ವೆರಿಫಿಕೇಷನ್‌ಗೆಂದು ಹೇಳಿಕೊಟ್ಟಿದ್ದರಲ್ಲಾ, ವೆರಿಫಿಕೇಷನ್ ಆದ ಮೇಲೆ food grains ಕೊಡುತ್ತೇವೆಂದರೆ ಖಂಡಿತಾ 38 ಲಕ್ಷದಿಂದ ಎಂಟು ಲಕ್ಷಕ್ಕೆ ಬರುವುದು. ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಈ ಮನೆಯ ಮೂಲಕ ಭರವಸೆ ಕೊಡುತ್ತೇನೆ. ಯಾರಿಗೆ ತಾತ್ಕಾಲಿಕ ಕಾರ್ಡು ಕೊಟ್ಟಿದ್ದೇವೆ, ಅವರಿಗೆ ಮುಂದಿನ ತಿಂಗಳಿನಿಂದಲೇ ಅಕ್ಕಿ ಕೊಡುವುದಕ್ಕೆ ನಾವು ಪ್ರಾರಂಭ ಮಾಡುತ್ತೇವೆ. ನಾನು ನಿಮಗೆ ಏನು ಸಹಕಾರ ಕೇಳುತ್ತಿದ್ದೇನೆಂದರೆ, ಮೊನ್ನೆ ತಾನೆ ನಮ್ಮ ಮುಖ್ಯ ಕಾರ್ಯದರ್ಶಿಯವರನ್ನು ಕೇಂದ್ರಕ್ಕೆ ಕಳುಹಿಸಿಕೊಟ್ಟು ನಮಗೆ ಹೆಚ್ಚುವರಿಯಾಗಿ ಅಕ್ಕಿ ಕೊಡಿ. ದುಬಾರಿ ಬೆಲೆಯಾದರೂ ಪರವಾಗಿಲ್ಲ, ನಾವು ಕೊಂಡುಕೊಳ್ಳುವುದಕ್ಕೆ ತಯಾರಿದ್ದೇವೆಂದು ಹೇಳಿದ್ದೇವೆ. ನೀವು ಸ್ವಲ್ಪ influence ಮಾಡಿ ಸಹಕಾರ ಕೊಟ್ಟರೆ ಅನುಕೂಲವಾಗುತ್ತದೆ. ನಾವು ಕಡಿಮೆ ದರದಲ್ಲೇನೂ ಅಕ್ಕಿ ಕೇಳುತ್ತಿಲ್ಲ. ನೀವು ಹೇಳಿದ ಹಾಗೆ ಮಾರುಕಟ್ಟೆಯಲ್ಲಿ ನಾವು ಖರೀದಿ ಮಾಡುವುದಕ್ಕೆ ಹೋದರೆ ಇರುವ ಬೆಲೆಯೂ ಜಾಸ್ತಿಯಾಗುತ್ತಾ ಹೋಗುತ್ತದೆ ಎಂದು ಅದಕ್ಕೋಸ್ಕರ ನಿಮ್ಮ ಸಹಕಾರ ನೀಡಿದರೆ, ಹೆಚ್ಚು ಅನುಕೂಲವಾಗುತ್ತದೆ. ಇನ್ನು ವಿದ್ಯುತ್ ಬಗ್ಗೆ ಹೇಳಬೇಕೆಂದರೆ, ಮಾನ್ಯ ಜಯಚಂದ್ರರವರೇ ಇಷ್ಟೇ ಆದರೆ ನಿಮ್ಮ ಶಿವಕುಮಾರ್‌ರವರು ಒಪ್ಪಿಕೊಳ್ಳಬೇಕಲ್ಲಾ? ಮಾನ್ಯ ಯಡಿಯೂರಪ್ಪನವರು ಬಂದ ಮೇಲೆ ಎಂಟು ತಿಂಗಳುಗಳಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ಸುಮಾರು 6,900ಮೆ.ವ್ಯಾ.ವಿದ್ಯುತ್ ಉತ್ಪಾದನೆ ಮಾಡಿ ಸೇವ್ ಮಾಡಿದ್ದೇವೆ. ಕೇಂದ್ರ ಸರ್ಕಾರವೂ ನಮಗೆ ಸಹಕಾರ ಕೊಟ್ಟಿದೆ. ಛತ್ತೀಸ್‌ಗಡದಲ್ಲಿ ಲ್ಯಾಂಡ್ ಅಕ್ವಿಸಿಷನ್ ಪ್ರಾರಂಭವಾಗಿದೆ. ಮಾರ್ಚ್ ವೇಳೆಗೆ ಲೋಕಸಭಾ ಚುನಾವಣೆಗಳು ಘೋಷಣೆ ಆಗದೇ ಇದ್ದರೆ ಶಂಕುಸ್ಥಾಪನೆ ಮಾಡಿ ಅಲ್ಲಿಯ ಕೆಲಸಗಳೇ ಪ್ರಾರಂಭ ಮಾಡುವ ಹಂತಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಯಾವ ವಿದ್ಯುತ್ ಬರ ಇತ್ತು, ಅದನ್ನು ಬಗೆಹರಿಸುವುದಕ್ಕೆ ಅತ್ಯಂತ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. 13,000 ಮೆ.ವ್ಯಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವುದಕ್ಕೆ ದಿಟ್ಟ ಹೆಜ್ಜೆ ಇಡುತ್ತಿದ್ದೇವೆ. ನನಗೆ ವಿಶ್ವಾಸ ಇದೆ 5,000 ಮೆ.ವ್ಯಾ. ವಿದ್ಯುತ್ತನ್ನು ನಿಶ್ಚಿತವಾಗಿ ಉತ್ಪಾದನೆ ಮಾಡುತ್ತೇವೆ ಎನ್ನುವ ವಿಶ್ವಾಸ ಇದೆ. ರಸ್ತೆಗಳ ಬಗ್ಗೆ ಹೇಳಬೇಕೆಂದರೆ, ನೀವು ಅಪ್ರಿಷಿಯೇಟ್ ಮಾಡಬೇಕು. ಇವತ್ತು ಸಾರ್ವಜನಿಕರನ್ನು EPP ಆಧಾರದ ಮೇಲೆ ದೊಡ್ಡ ದೊಡ್ಡ ಕೈಗಾರಿಕೆಗಳವರು ಯಾರು ಇದರಲ್ಲಿ ಆಸಕ್ತಿ ಇದೆ ಅವರನ್ನು ಕರೆದು 10,000 ಕಿ.ಮೀ. ಮುಖ್ಯ ರಸ್ತೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 12,600 ಕಿ.ಮಿ. ರಸ್ತೆ ಬಗ್ಗೆ ಖಾಸಗಿ ಸಹಭಾಗಿತ್ವದಲ್ಲಿ ಕೆಲಸ ಮಾಡುವುದಕ್ಕಾಗಿ 500 ಕೋಟಿ ರೂ. ಬಂಡಾವಳವನ್ನು ಇಟ್ಟಿದ್ದೇವೆ. ವಿಶ್ವ ಬ್ಯಾಂಕ್ ನೆರವು ಮತ್ತು ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅದು ಬೇರೆ 2685 ಕಿ.ಮಿ. ರಸ್ತೆ ಮತ್ತು 32 ಸೇತುವೆಗಳನ್ನು ನಿರ್ಮಿಸುತ್ತಿದ್ದೇವೆ. ರಸ್ತೆಗಳ ನಿರ್ಮಾಣಕ್ಕಾಗಿ ಹೆಚ್ಚು ಒತ್ತು ಕೊಟ್ಟಿದ್ದೇವೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹಳ ಮುಖ್ಯವಾಗಿ ನಗರಾಭಿವೃದ್ಧಿ. first time ನಾನು ಒಂದು ಪ್ರಯತ್ನ ಮಾಡುತ್ತಿದ್ದೇನೆ. ನೀವೆಲ್ಲಾ ಸಹಕಾರ ಕೊಡಬೇಕು. ಕಾರ್ಪೋರೇಷನ್

ನಗರಕ್ಕೆ ನಾನು ಏನು ಹೇಳಿದ್ದೇನೆ, 100 ಕೋಟಿ ರೂಪಾಯಿಗಳ ಕಾರ್ಯಕ್ರಮ ತಯಾರಿಸಿ 50 ಕೋಟಿ ರೂ. ಪ್ರತಿ ವರ್ಷ ಕೊಡುತ್ತಿದ್ದೇವೆ. ನೀವು estimate, plan ಎಂದು ಹೇಳಿ ಕುಳಿತರೆ ಅದು ಸೆಪ್ಟಂಬರ್, ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್‌ಗಳಿಗೆ ಹೊರಟು ಹೋಗುತ್ತೀರಿ, ಬೇಡ. ನಾನು ಈ ಸಾರಿ ಹೊಸದಾಗಿ ಆ ಕಾಮಗಾರಿಗಳನ್ನು ಘೋಷಣೆ ಮಾಡಿದೆವು, ಕೆಲವು ಕಡೆ ಕಾಮಗಾರಿಗಳು ಕೊನೇ ಪಕ್ಷ ಪ್ರಾರಂಭವಾಗಿದೆ. ಇನ್ನೊಂದು ಎರಡು – ಮೂರು ತಿಂಗಳುಗಳಲ್ಲಿ 50% ಆದರೂ ಪ್ರೊಗ್ರೆಸ್ ಆಗಬಹುದು. ಮಾನ್ಯ ಸುರೇಶ್ ಕುಮಾರ್‌ರವರು ಪರ್ಸನಲ್ಲಾಗಿ ಎಲ್ಲಾ ಪ್ರಯತ್ನಗಳನ್ನು ನಡೆಸಿದ್ದಾರೆ. ಆದರೆ ಮುಂದಿನ ವರ್ಷದಿಂದ ನಾನು ಜಿಲ್ಲಾ ಕೇಂದ್ರಗಳಿಗೆ ಪುರಸಭೆ ನಗರಸಭೆ ಇರುವಂತಹ ಕಡೆಗಳಲ್ಲಿ ಸಹ ನಾನು ಈ ಹಣವನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ಆ ದಿಕ್ಕಿನಲ್ಲಿ ನೀವು ಪೂರ್ಣ ಸಹಕಾರ ಕೊಟ್ಟರೆ ಹೆಚ್ಚು ಅನುಕೂಲ ಆಗಬಹುದು. 50 ಕೋಟಿ ರೂ. ನಗರಕ್ಕೆ, ಜಿಲ್ಲಾ ಕೇಂದ್ರಕ್ಕೆ 15 ಕೋಟಿ ರೂ. ತಾಲ್ಲೂಕು ಕೇಂದ್ರಗಳಿಗೆ 5 ಕೋಟಿ ರೂ. ಪಟ್ಟಣ ಪಂಚಾಯಿತಿಗಳಿಗೆ 2 ಕೋಟಿ ರೂ. ಇದರಿಂದ ಅಲ್ಲಿ ಮೂಲಭೂತ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಈ ಕೆಲಸವನ್ನು ಮಾಡಿದ್ದೇನೆ. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಕಾಮಗಾರಿಗಳ ಮೇಲೆ ಮಾಡಿದ ಖರ್ಚು ಮಾನ್ಯ ಜಯಚಂದ್ರರವರೇ, ಬಹಳ ದೊಡ್ಡ ಪ್ರಮಾಣದಲ್ಲಿ ನಾವು ಮಾಡಿದ್ದೇವೆ. ಆ ದಿಕ್ಕಿನಲ್ಲಿ ಪ್ರಯತ್ನ ನಡೆಸಿದ್ದೇವೆ. ವಿವರಗಳಿಗೆ ಹೋಗುವುದಿಲ್ಲ, ಬಹಳ ಹೊತ್ತಾಗುತ್ತದೆ, ನಾನು ಆ ಮನೆಗೆ ಹೋಗಬೇಕಾಗಿದೆ. 2003–04ರಲ್ಲಿ 390 ಕೋಟಿ ರೂ. 2004–05 ರಲ್ಲಿ 538 ಕೋಟಿ ರೂ. 2005–06ರಲ್ಲಿ 595 ಕೋಟಿ ರೂ. 2006–07ರಲ್ಲಿ 610 ಕೋಟಿ ರೂ. 2006–07ರಲ್ಲಿ 400 ಕೋಟಿ ರೂ. ಸೀಸ್ ಮಾಡಿದ್ದೇವೆ. 2007–08ರಲ್ಲಿ 1180 ಕೋಟಿ ರೂ. ಖರ್ಚು ಮಾಡಿದರೆ 250 ಕೋಟಿ ರೂ. ನಾವು ಕೊಟ್ಟಿದ್ದೇವೆ. 2008–09ರಲ್ಲಿ 1500 ಕೋಟಿ ರೂ. ಖರ್ಚು ಮಾಡಿದರೆ 300 ಕೋಟಿ ನಾವು ನಮ್ಮ ಸರ್ಕಾರದಿಂದ ಕೊಟ್ಟಿದ್ದೇವೆ. ಈ ವರ್ಷ 2009–10ಕ್ಕೆ 2000ಕೋಟಿ ರೂ. ಸಾಲ ತಂದಾದರೂ ಈ ರಸ್ತೆಗಳನ್ನು improve ಮಾಡಬೇಕು. ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಬೆಂಗಳೂರು ಅಭಿವೃದ್ಧಿಗೋಸ್ಕರ ನಾನು ಮಾಡುತ್ತಿದ್ದೇನೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ ಐದು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿಗೆ ನಾವೇನು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ ಬರುವಂತಹ ದಿವಸಗಳಲ್ಲಿ ಬೆಂಗಳೂರು ಅಭಿವೃದ್ಧಿಗೆ ಮೂರರಿಂದ ನಾಲ್ಕು ಪಟ್ಟು ಹೆಚ್ಚು ಹಣವನ್ನು ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಖರ್ಚು ಮಾಡುತ್ತಿದ್ದೇವೆ. ಬರುವಂತಹ 2–3 ವರ್ಷಗಳಲ್ಲಿ ಒಂದು ಕ್ರಾಂತಿಕರವಾದ ಬದಲಾವಣೆ ಮಾಡಿ ಬೆಂಗಳೂರನ್ನು ವಿಶ್ವ ದರ್ಜೆ ನಗರವನ್ನಾಗಿ ಮಾಡಬೇಕೆಂಬ ನಿಮ್ಮೆಲ್ಲರ ಅಪೇಕ್ಷೆ ಏನಿದೆ, ಆ ದಿಕ್ಕಿನಲ್ಲಿ ದಾಪುಗಾಲು ಹಾಕುತ್ತಿದ್ದೇವೆ. ಅನೇಕ

ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಮಾಗಡಿ ರಸ್ತೆ, ಕಾರ್ಡ್ ರಸ್ತೆ ಕೆಳಸೇತುವೆ ಮತ್ತು ಮಲ್ಲೇಶ್ವರಂ ರಸ್ತೆ ಕೆಳ ಸೇತುವೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ತೆರೆಯಲಾಗಿದೆ. ನಗರದ ಪಶ್ಚಿಮ ಭಾಗದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ನೇರ ಸಂಪರ್ಕ ನಿರ್ಮಿಸುವುದಕ್ಕಾಗಿ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಹಳೆಯ ಸೆಂಟ್ರಲ್ ಜೈಲಿನ ಆವರಣದಲ್ಲಿ Freedom Park ಕಾಮಗಾರಿ ಬಹಳ ಮಂದಗತಿಯಿಂದ ನಡೆಯುತ್ತಿತ್ತು. ಈಗ ಅದನ್ನೆಲ್ಲಾ ಪೂರ್ಣಗೊಳಿಸಿದ್ದೇವೆ. 28ನೇ ತಾರೀಖು ಅದರ ಉದ್ಘಾಟನಾ ಕಾರ್ಯಕ್ರಮ ಇದೆ. ಬಹಳ ದೊಡ್ಡ ಪ್ರಮಾಣದಲ್ಲಿ ಆ ಕೆಲಸಕಾರ್ಯಗಳು ಆಗುತ್ತಿವೆ. ಹೀಗೆ ಮೊದಲಿಗಿಂತ ನಾಲ್ಕು ಪಟ್ಟು ಹೆಚ್ಚು ಬೆಂಗಳೂರು ನಗರದ ಅಭಿವೃದ್ಧಿಗಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಮೆಟ್ರೋ ಬಗ್ಗೆ ನಮಗೂ ನಿಮಗೂ ಇಬ್ಬರಿಗೂ ಆಸಕ್ತಿ ಇದೆ. ಈಗಾಗಲೇ ನಾವು 550 ಕೋಟಿ ರೂ. ಖರ್ಚು ಮಾಡಿದ್ದೇವೆ. ಈ ಹಿಂದೆ ಮಾಡಿದ ಒಟ್ಟು ಖರ್ಚಿಗಿಂತ ಹೆಚ್ಚಿನ ಖರ್ಚನ್ನು ನಾವು ಮಾಡಿದ್ದೇವೆ. ಪ್ರತಿಷ್ಠಿತ ಮೆಟ್ರೋ ರೈಲು ನಿಗಧಿತ ಅವಧಿಯಲ್ಲಿ ಕಾರ್ಯಾರಂಭ ಆಗಬೇಕು. ಮೊದಲ ಹಂತದ ಪ್ರಯಾಣ ಮುಂದಿನ ವರ್ಷದ ಅಂತ್ಯದೊಳಗೆ ಆಗಬೇಕು 2010ರೊಳಗಾಗಿ ಸುಮಾರು 600 ಕೋಟಿ ಖರ್ಚು ಮಾಡುತ್ತೇವೆ. ಬಹುಶಃ ನಮ್ಮ ಶಾಸಕ ಮಿತ್ರರು ಯಾರು ಬೆಂಗಳೂರಿನಲ್ಲಿದ್ದೀರಿ, 28 ಕ್ಷೇತ್ರಗಳಲ್ಲಿಯೂ ಸಾಕಷ್ಟು ಕೆಲಸಗಳು ಆಗುತ್ತಿವೆ. ಆದರೆ ಯಾರು ಬೆಂಗಳೂರು ನಗರ ಅಲ್ಲದ ಶಾಸಕರು ಇದ್ದಾರೆ, ಅವರು ಒಂದು ಸುತ್ತು ಬೆಂಗಳೂರು ನಗರಕ್ಕೆ ಹೋಗಿ ಬಂದರೆ ಏನು ಕೆಲಸ ಆಗುತ್ತಿದೆ ಎಂದು ನೋಡಿದರೆ, ನಮ್ಮ ನಮ್ಮ ಜಿಲ್ಲೆಗಳಲ್ಲಿ ನಮ್ಮ ನಮ್ಮ ತಾಲ್ಲೂಕುಗಳಲ್ಲಿ ಆ ರೀತಿ ಕೆಲಸ ಮಾಡುವುದಕ್ಕೆ ಅನುಕೂಲ ಆಗಬಹುದು ಎನ್ನುವ ದೃಷ್ಟಿಯಿಂದ ಬಿಡುವಿದ್ದಾಗ ಒಂದು ಸಾರಿ ಬೆಂಗಳೂರು ನಗರದ ಸುತ್ತಮುತ್ತ ಯಾವ ರೀತಿ ಅಭಿವೃದ್ಧಿ ಕಾರ್ಯ ಆಗುತ್ತಿದೆ ಇದನ್ನು ನೋಡುವುದಕ್ಕೆ ಹೋಗಿ ಬರಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನೀವು ಬರೀ ಬೆಂಗಳೂರಿನಲ್ಲಿರುವ ಶಾಸಕರಿಗೆ 100–150ಕೋಟಿ ರೂ. ಹಣ ಕೊಟ್ಟು ನಮ್ಮ ಗ್ರಾಮೀಣ ಪ್ರದೇಶಗಳಿಗೆ ಒಂದು ಕೋಟಿ ಹಣವನ್ನೂ ಕೊಟ್ಟಿಲ್ಲ. ನೀವು ಮಾಡಿ ಬೇಡವೆಂದು ಹೇಳುವುದಿಲ್ಲ. ಬೆಂಗಳೂರು ಅಭಿವೃದ್ಧಿ ಮಾಡಬೇಕು ಬೇಡವೆಂದು ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಬೆಂಗಳೂರು ನಗರದಲ್ಲಿ ಆಗಿರುವ ಕೆಲಸವನ್ನು ನೋಡಿ ಎಂದು ಹೇಳುತ್ತಿದ್ದಾರೆ. ನಾವು ನೋಡುತ್ತಿದ್ದೇವೆ.

ಅಧ್ಯಕ್ಷರು: ಅವರ ರಿಪ್ಲೈ ಮುಗಿಯಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಅದರ ಬಗ್ಗೆ ಗಮನ ಕೊಡುತ್ತೇನೆ. ಬೆಂಗಳೂರು ನಗರದ ಅಭಿವೃದ್ಧಿಗೆ ಮುಂದಿನ ವರ್ಷ 7376 ಕೋಟಿ ರೂ. ಮೀಸಲಿಟ್ಟಿದ್ದೇವೆ. BBMP, BDA ಹಾಗೂ BWSSB ಸಂಸ್ಥೆಯ ಕೆಲಸಗಳಾದರೆ ಇನ್ನು ಒಂದು ವರ್ಷದಲ್ಲಿ ಬೆಂಗಳೂರು ಚಿತ್ರಣವೇ ಬದಲಾವಣೆಯಾಗುತ್ತದೆ. ಆ ದಿಕ್ಕಿನಲ್ಲಿ ನೀವು ಸಹಕಾರ ಕೊಡಬೇಕು. ಮಾನ್ಯ ಶಿವಕುಮಾರ್‌ರವರು ಹೇಳಿದಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳು ಸಿಗಬೇಕು. ಅದರ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ಅದು ಬಂದಾಗ ಅದರ ಕಡೆಗೆ ಗಮನ ಕೊಡಬೇಕು. ಬೆಂಗಳೂರು ನಗರದ ಬಗ್ಗೆ ಮಾತನಾಡುವಂತಹ ಕಾಲದಲ್ಲಿ ಇದಕ್ಕೆ ಯಾವ ರೀತಿ ಒತ್ತು ಕೊಟ್ಟಿದ್ದೇವೆ, ಕೆಲಸ ಮಾಡುತ್ತಿದ್ದೇವೆಂದು ಹೇಳಿದ್ದೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 800 ಕೋಟಿ ರೂ. ಮತ್ತು BBMP ಯಿಂದ 500 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಣೆ ಮಾಡುವುದಕ್ಕೆ 2000 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಕೊಟ್ಟು ಕೆಲಸಗಳನ್ನು ಮಾಡುತ್ತಿದ್ದೇವೆ. ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಹೆಚ್ಚು ಅಭಿವೃದ್ಧಿಗೊಳಿಸಬೇಕೆಂದು ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ನೀವೆಲ್ಲಾ ಸಹಕಾರ ಕೊಟ್ಟರೆ ಪ್ರತಿ ಜಿಲ್ಲೆಯಲ್ಲಿ ಒಂದು ಸಾವಿರದಿಂದ ಎರಡು ಸಾವಿರ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಅಗತ್ಯವಿರುವಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿ, Infrastructure develop ಮಾಡಿ ಯಾರಾದರೂ ಕೈಗಾರಿಕೋದ್ಯಮಿಗಳು ಬಂದರೆ, ಆ ಮೀಟಿಂಗ್ ಈ ಮೀಟಿಂಗ್ ಎಂದು ಓಡಾಡಿಸುತ್ತಾಡಿಸಿ ಅವರು ವಾಪಸ್ ಹೋಗುವ ಬದಲಿಗೆ ನೀನು ಎಲ್ಲಪ್ಪ ಕಾರ್ಖಾನೆ ಹಾಕುತ್ತೀಯ ಬೆಂಗಳೂರು ಬಿಟ್ಟು ಬೇರೆ ಕಡೆ ಮಾಡುತ್ತೀಯ ಎಂದು ಹೇಳಿ ಅದಕ್ಕೆ ಜಿಮೀನು ತಯಾರಾಗಿದೆ ಎಷ್ಟು ಎಕರೆ ಬೇಕೆಂದು ನೋಡಿಕೊಂಡು ಬಾ, ಯಾವ ಕಾರ್ಖಾನೆ ಹಾಕುತ್ತೀಯ? ಈ ರೀತಿ across the ಟೇಬಲ್ ಕುಳಿತು ಅವನಿಗೆ ಬೇಕಾದ ಅನುಕೂಲಗಳನ್ನು ಕೊಟ್ಟು ಅದನ್ನು ಬಗೆಹರಿಸಿ ಒಂದಷ್ಟು ಕೈಗಾರಿಕೆಗಳನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ನೀವೂ ಕೂಡ ಅದರ ಬಗ್ಗೆ ಪ್ರಯತ್ನ ಮಾಡಿದರೆ ಬಹುಶಃ ಹೆಚ್ಚು ಅನುಕೂಲವಾಗಬಹುದು ಎಂದು ನನ್ನ ಅಪೇಕ್ಷೆ ಇದೆ. 1200 ಎಕರೆಯಿಂದ 2,000 ಎಕರೆ ಜಮೀನು ಸ್ವಾಧೀನಪಡಿಸುವುದಕ್ಕೆ ಅಗತ್ಯ ಸವಲತ್ತುಗಳನ್ನು ಕೊಟ್ಟು ಕೈಗಾರಿಕಾ ವಸಾಹಾತುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಒಂದು ಸಾವಿರ ಕೋಟಿ ರೂ.ಗಳನ್ನು ನಾವು ವೆಚ್ಚ ಮಾಡಬೇಕೆಂದಿದ್ದೇವೆ. ಇದು ಗ್ರಾಮೀಣ ಜನರಿಗೆ ಬೇರೆ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ನನ್ನ ಕಣ್ಣು ಮುಂದೆ ಇಟ್ಟುಕೊಂಡಿದ್ದೇನೆ. ನಿಮಗೆ ಈಗಾಗಲೇ ಗೊತ್ತಿದೆ, ಹೊಸ ಗಣಿಗಾರಿಕೆ ನೀತಿಯನ್ನು ನಾವು ಜಾರಿಗೆ ತಂದಿದೇವೆ. ನೀವೆಲ್ಲ ಸಹಕಾರ

LA.V.S.F.10

ಕೊಡಿ, ನಮ್ಮ ಸಂಪತ್ತು ಹಾಳಾಗಿ ಹೋಗುವುದಕ್ಕೆ ನಾವು ಬಿಡುವುದಿಲ್ಲ. ಇದರ ಬಗ್ಗೆ ಬಿಗು ನಿಲುವನ್ನು ನಾನು ತೆಗೆದುಕೊಂಡಿದ್ದೇನೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಸಿದ್ಧ ಉಡುಪು ತಯಾರಿಕಾ ಕ್ಷೇತ್ರಕ್ಕೆ ವಿಶೇಷ ಪ್ರೋತ್ಸಾಹ ನೀಡಬೇಕೆಂದು ವಿವಿಧನಗರಗಳಲ್ಲಿ ಸಮುಚ್ಚಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿಮ 40ಕೋಟಿ ರೂ. ಗಳನ್ನು ಒದಗಿಸಿದ್ದೇವೆ. ಎಲ್ಲೆಲ್ಲಿ ಮಾಡಬೇಕೆಂದು ತಾವು ಸಲಹೆ ಕೊಡಿ. 5000 ನೇಕಾರರ ಮಗ್ಗಗಳಿಗೆ ಮಗ್ಗದ ಕೋಣೆಗಳು ಮತ್ತು ಮನೆ ನಿರ್ಮಾಣ ಮಾಡುವುದಕ್ಕೋಸ್ಕರ 30 ಕೋಟಿ ರೂ.ಗಳನ್ನು ವಿಶೇಷ ಅನುದಾನವನ್ನು ನಾನು ಕೊಟ್ಟಿದ್ದೇನೆ. ಮಾನ್ಯ ಡಿ.ಕೆ.ಶಿವಕುಮಾರ್‌ರವರಿಗೆ ಸಮಾಧಾನ ಆಗಲಿ ಎಂದು ಮಂಡ್ಯದ ಬಗ್ಗೆ ಹೇಳುತ್ತಿದ್ದೇನೆ. ನಾನೇ ಹೋಗಿದ್ದೆ, ನಾನು ಅಲ್ಲಿ ಹುಟ್ಟಿ ಬೆಳೆದಂತಹದವನು, ಅದರ ಋಣ ತೀರಿಸಬೇಕಾಗಿದೆ. ನಾನು ಅಲ್ಲಿಗೆ ಹೋದಾಗ ಅಲ್ಲಿಯ ಸ್ಥಿತಿ- ಬಹಳಷ್ಟು ಸುಧಾರಣೆ ಆಗುತ್ತಿದೆ. 50 ಕೋಟಿ ರೂ. ನಾವು ಬಜೆಟ್‌ನಲ್ಲಿ ಕೊಟ್ಟಿದ್ದೇವೆ. 50 ಕೋಟಿ ರೂ. ಸಾಲ ತೆಗೆದುಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇದೆ. ಮಾಡಿದರೆ, ಬಹುಶಃ ನನಗನ್ನಿಸುತ್ತದೆ, ಒಂದು ವರ್ಷದಲ್ಲಿಯೇ ಸಾಕಷ್ಟು ಸುಧಾರಣೆಗಳು ಆಗಿ ನಾವು ನೆಮ್ಮದಿಯಿಂದ ಹೌದು! ಒಂದು ಅಭಿವೃದ್ಧಿ ಆಯಿತು ಎಂದು ಸಮಾಧಾನ ಪಟ್ಟುಕೊಳ್ಳುವಂತಹ ಅಭಿವೃದ್ಧಿ ಆಗುತ್ತದೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ. ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಕೊಪ್ಪಳ, ಬಳ್ಳಾರಿ, ಬಾಗಲಕೋಟೆ ಬೆಳಗಾವಿ, ಬ್ಯಾಡಗಿ, ಬಸವಕಲ್ಯಾಣ, ಚಿಕ್ಕೋಡಿ ಇತ್ಯಾದಿ ಸ್ಥಳಗಳಲ್ಲಿ ವಿಶೇಷವಾಗಿ ಕೈಗಾರಿಕಾ ವಸಾಹಾತುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪ್ರವಾಸೋದ್ಯಮಕ್ಕೆ ನಾವು ಎಷ್ಟು ಕೊಟ್ಟರೂ ಕಡಿಮೆ. ಇಲ್ಲಿ ನಮಗೆ ಇಷ್ಟೊಂದು ಅನುಕೂಲ ಇದೆ. ಆ ಕ್ಷೇತ್ರವನ್ನು ನಾವು ನೆಗ್ಲೆಕ್ಟ್ ಮಾಡಿದ್ದೆವು. ಕಳೆದ 2–3 ವರ್ಷಗಳಿಂದ ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಕೊಟ್ಟ ಹಣ ಪೂರ್ತಿ ಖರ್ಚಾಗುತ್ತಿಲ್ಲ.

ಅದಕ್ಕೆ ಅಧಿಕಾರಿಗಳಿಗೆ ವಿಶೇಷವಾಗಿ ಗಮನವನ್ನು ನಾವು ಕೊಟ್ಟರೆ, ಈ ಸಾರಿ ಅದಕ್ಕೆ 180 ಕೋಟಿ ರೂ.ಗಳನ್ನು ನಾವು ತೆಗೆದಿಟ್ಟಿದ್ದೇವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 20 ರಷ್ಟು ಹೆಚ್ಚು ಹಣವನ್ನು ನಾವು ಕೊಟ್ಟಿದ್ದೇವೆ. ಖಾಸಗಿ ಸಹಭಾಗಿತ್ವದಲ್ಲಿ ನಾವು ಅದನ್ನು ಸರಿಯಾದ ರೀತಿಯಲ್ಲಿ ಬೆಳೆಸಬೇಕು ಎನ್ನುವ ದೃಷ್ಟಿಯಿಂದ ಅನುಕೂಲ ಮಾಡುತ್ತಿದ್ದೇವೆ. ಈ ಕೆ.ಎಸ್.ಎಫ್.ಸಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಪಡೆದ ಸಾಲಗಳ ಮರುಪಾವತಿಗೆ, ಕೈಗಾರಿಕೆಗಳವರಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ one time settlement ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ವೃತ್ತಿ ತೆರಿಗೆ ಮಿತಿಯನ್ನು ಹತ್ತು ಸಾವಿರಕ್ಕೆ ಏರಿಸಿದ್ದೇವೆ. ಐದು ಸಾವಿರದಿಂದ ಹತ್ತು ಸಾವಿರಕ್ಕೆ ಏರಿಸಿದ್ದೇವೆ. ನೂತನ ವಯೋಮಿತಿಯನ್ನು ಜಾರಿಗೆ ತಂದಿದ್ದೇವೆ. ಹೋಟೆಲ್ ಮೇಲಿನ ವಿಲಾಸ ತೆರಿಗೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮುದ್ರಾಂಕ ಶುಲ್ಕವನ್ನು ಶೇ.7.5 ರಿಂದ 6 ಕ್ಕೆ ಇಳಿಸಿದ್ದೇವೆ. ವಿದ್ಯುತ್

ಚಾಲಿತ ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ನಾವು ರೂಪಿಸುತ್ತಿದ್ದೇವೆ. ಮತ್ತೆ ತಮಗೆ ಯೋಜನಾ ವೆಚ್ಚದ ಬಗ್ಗೆ ಎಲ್ಲರೂ ಮಾತನಾಡಿದ್ದೀರಿ. ಮಾತನಾಡಬೇಕಾದಂಥ ಅತ್ಯಂತ ಪ್ರಮುಖವಾದ ವಿಚಾರವೇ ಅದು ಆಗಿರುವುದರಿಂದ ಎಲ್ಲರೂ ಮಾತನಾಡಿದ್ದೀರಿ. ಆದರೆ ಒಂದು ಸಂಗತಿಯನ್ನು ನಾನು ನಿಮಗೆ ಹೇಳಬಯಸುತ್ತೇನೆ. ಈ ವರ್ಷದ ಬಜೆಟ್‌ಗೆ ಅನುಮೋದನೆ ಸಿಕ್ಕಿದ್ದೇ ಜುಲೈ 2008 ರಲ್ಲಿ ಶಿವಕುಮಾರ್‌ರವರೆ. ಅಂದರೆ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳುಗಳನ್ನು ಕಳೆದುಹೋಗಿತ್ತು. ಹೀಗಾಗಿ ಸ್ವಲ್ಪ ಹಿನ್ನಡೆ ಆಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಹಿನ್ನಡೆಯನ್ನು ಹೋದ ವರ್ಷಕ್ಕೆ ಹೋಲಿಸಿದರೆ ಏನಾಗಿದೆ ಎಂಬುದನ್ನು ಈಗ ನಾನು ನಿಮಗೆ ಹೇಳುತ್ತೇನೆ. 2004–05ರಲ್ಲಿ ಯೋಜನಾ ವೆಚ್ಚ ಖರ್ಚಾಗಿದ್ದು 6786 ಕೋಟಿ. 2005–06 ರಲ್ಲಿ 9496 ಕೋಟಿ, ಅಂದರೆ ಹಿಂದಿನ ವರ್ಷಕ್ಕೆ 27% ಜಾಸ್ತಿಯಾಯಿತು. 2006–07 ರಲ್ಲಿ 11,888 ಕೋಟಿಯಾಯಿತು. ಅಂದರೆ ಹಿಂದಿನ ವರ್ಷಕ್ಕಿಂತ 24% ಹೆಚ್ಚು ಖರ್ಚು ಮಾಡಲಾಗಿದೆ. 2007–08 ರಲ್ಲಿ unfortuantely, 10189 ಕೋಟಿಯಾಯಿತು, ಅಂದರೆ–17% ಆಗಿದೆ, ಆಗ ರಾಷ್ಟ್ರಪತಿ ಆಡಳಿತ ಇತ್ತು. ಆದರೆ ಈ ವರ್ಷ 13978 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಹೋದ ವರ್ಷಕ್ಕಿಂತ 37% ಜನವರಿಗೆ ಹೋಲಿಕೆ ಮಾಡಿದರೆ, ನಾನು ಜನವರಿಯ ಅಂಕಿ ಅಂಶವನ್ನು ಹೇಳುತ್ತಿರತಕ್ಕಂಥದ್ದು. 37% ಹಿಂದಿನ ವರ್ಷಕ್ಕಿಂತ ಹೆಚ್ಚು ಖರ್ಚು ಆಗಿದೆ. ಆದರೆ ನಾನು ನಿಮಗೆ ಭರವಸೆಯನ್ನು ಕೊಡುತ್ತೇನೆ, ಈ ವರ್ಷ ನಿಶ್ಚಿತವಾಗಿ, ಹೋದ ವರ್ಷಕ್ಕೆ ಹೋಲಿಸಿದರೆ ಈಗಾಗಲೇ ನಾವು ಜನವರಿಗೆ 3789 ಕೋಟಿ ಹೆಚ್ಚು ಖರ್ಚು ಮಾಡಿದ್ದೇವೆ. ಅಂದರೆ ಸುಮಾರು ಪ್ರತಿಶತ 37 ರಷ್ಟು ನಾವು ಹೆಚ್ಚು ಖರ್ಚು ಮಾಡಿದ್ದೇವೆ. ನಮ್ಮ ಯೋಜನಾ ಗಾತ್ರ ಬಹಳಷ್ಟು ಹೆಚ್ಚಿರುವುದರಿಂದ 26181 ಕೋಟಿಗೆ ಹೋಲಿಸಿದರೆ ಅದು ಸುಮಾರು 53.4 ಖರ್ಚಾಗಿದೆ. ಹಿಂದಿನ ವರ್ಷಗಳಿಗೆ ನಾನು ಹೋಲಿಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನಿಷ್ಟು ಮಾತ್ರ ನಿಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಶ್ಚಿತವಾಗಿ ಯೋಜನಾ ವೆಚ್ಚ 90% ದಾಟುತ್ತೇವೆ, ಅದರ ಹತ್ತಿರ ಹತ್ತಿರ ಹೋಗುವುದಕ್ಕೆ ಎಲ್ಲ ರೀತಿಯಲ್ಲಿ ನಾವು ಪ್ರಯತ್ನವನ್ನು ಮಾಡುತ್ತೇವೆ. ಏಕೆಂದರೆ ಈಗಾಗಲೇ ನಿಮಗೆ ಜನವರಿಯವರೆಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ನಾವು ಏನು ಖರ್ಚು ಮಾಡಿದ್ದೇವೆಂದು ಹೇಳಿದ್ದೇನೆ. ಫೆಬ್ರವರಿ ಅಂತ್ಯವಾಗುತ್ತ ಬರುತ್ತಿದ್ದಂತೆ ಮತ್ತೆ ಹೊಸ ಅಂಕಿ ಅಂಶ ನಮಗೆ ಸಿಕ್ಕೇ ಸಿಗುತ್ತದೆ. ಮಾರ್ಚ್‌ನಲ್ಲಿ ಎಲ್ಲ ಅಂಕಿ ಅಂಶ ಬರುತ್ತದೆ. ಒಂದು ಕೆಟ್ಟ ಪದ್ಧತಿ ಹಿಂದಿನಿಂದ ಬಂದಿರುವುದೇನೆಂದರೆ ಜನವರಿ, ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಹಣವನ್ನು ಖರ್ಚು ಮಾಡುವಂಥದ್ದು ಅಭ್ಯಾಸವಾಗಿದೆ. ಅದಕ್ಕೋಸ್ಕರ ನಾನು ಏನು ಮಾಡಿದ್ದೇನೆಂದರೆ 2009–10ರ ಬಜೆಟ್ ಆಗುತ್ತಿದ್ದಾಗ ಏಪ್ರಿಲ್ ಕೊನೆಯೊಳಗೆ ಏನೇನು ಫಾರ್ಮಲಿಟಿಸ್

ಇರುತ್ತದೋ ಅವೆಲ್ಲವೂ ಮುಗಿದುಹೋಗಿಬಿಡಬೇಕು, ನಿಮ್ಮ ಹತ್ತಿರ ಸಿಬ್ಬಂದಿ ಇಲ್ಲ, ನಿಮ್ಮ ಅಧಿಕಾರಿಗಳು ಸೋಂಬೇರಿಗಳು ಕೆಲಸಗಳನ್ನು ಮಾಡುವುದಿಲ್ಲ ಎನ್ನುವುದಾದರೆ, ನಮ್ಮ ಅಧಿಕಾರಿಗಳು ಎಸ್ಟಿಮೇಟ್ ಪ್ಲಾನ್ ಮಾಡುವುದಕ್ಕೆ ಯಾವುದಾದರೂ ಪ್ರೈವೇಟ್ ಏಜೆನ್ಸಿಯನ್ನು ತೆಗೆದುಕೊಳ್ಳಿ, But, ಏಪ್ರಿಲ್ ಕೊನೆಯೊಳಗೆ ಎಲ್ಲಾ ಫಾರ್ಮಾಲಿಟಿಸ್ ಏನಿದೆಯೋ ಅವೆಲ್ಲವೂ ಮುಗಿದಿರಬೇಕು ಎಂದು ಡೈರೆಕ್ಷನ್ ಕೊಟ್ಟಿದ್ದೇವೆ. ಬಜೆಟ್ ಭಾಷಣದಲ್ಲಿಯೂ ಕೂಡ ನಾನು ಆ ಮಾತನ್ನು ಹೇಳಿದ್ದೇನೆ. ಆದುದರಿಂದ ಇದನ್ನು ತಾವು ಒಪ್ಪುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ನಿಶ್ಚಿತವಾಗಿ ಒಂದು ಬದಲಾವಣೆಯನ್ನು ತರುವಂಥ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇನ್ನು ವರ್ಗಾವಣೆ ಬಗ್ಗೆ ಹೇಳಬೇಕೆಂದರೆ, ವಿಶೇಷವಾಗಿ ಆಡಳಿತ ಪಕ್ಷದವರು ಹೆಚ್ಚು ವರ್ಗಾವಣೆಯನ್ನುಮಾಡಿಸಿಕೊಳ್ಳುತ್ತಾರೆ ಎನ್ನುವುದು ನಡೆದುಕೊಂಡು ಬಂದಿರುವಂಥದ್ದು ಈ ಖಾಯಿಲೆ. ಆದರೆ ನಾವು ಈಗಾಗಲೇ ನಾವು ಅಧಿಕಾರಕ್ಕೆ ಬಂದಮೇಲೆ ಅವರಿಗೆ ಯಾರೋ ಬೇಕೋ ವರ್ಗಾವಣೆಯಾಗಿದೆ. ಆದುದರಿಂದ ಈ ಬಾರಿ ಬಹಳ ಕಟ್ಟುನಿಟ್ಟಾಗಿ ವರ್ಗಾವಣೆಗೆ ಕೈ ಹಾಕಬಾರದು, ಖಾಲಿ ಇರುವ ಹುದ್ದೆಗಳಿಗೆ ಮಾತ್ರ ವರ್ಗಾವಣೆ ಮಾಡಬೇಕು, ಅನಿವಾರ್ಯವಾಗಿ ಮಾಡಬೇಕಾದಂಥದ್ದನ್ನು ಬಿಟ್ಟರೆ ವರ್ಗಾವಣೆಯನ್ನು ಯಾವುದೇ ಕಾರಣಕ್ಕೆ ಮಾಡಬಾರದು ಎಂದಿದ್ದೇವೆ. ಆದರೂ ಜನ ಬೇಸರ ಮಾಡಿಕೊಳ್ಳುತ್ತಾರೆ. ಒಂದು ಕಡೆ ಇದ್ದ ಅಧಿಕಾರಿಗಳನ್ನು ಇನ್ನೊಂದು ಕಡೆಗೆ ವರ್ಗಾವಣೆ ಮಾಡಿದರೆ ಏನು ಬದಲಾವಣೆಯಾಗುತ್ತದೆ? ನಮ್ಮ ಶಾಸಕರ ಚಾಕಚಕ್ಯತೆ ಇರುವುದೇ ಇರುವ ಅಧಿಕಾರಿಯಿಂದ ಹೆಚ್ಚು ಕೆಲಸವನ್ನು ತೆಗೆದುಕೊಳ್ಳುವಂಥದ್ದು. ಈ ರೀತಿ ಮಾಡದಿದ್ದರೆ ಈ ವರ್ಗಾವಣೆ ಸಮಸ್ಯೆಗೆ, ಈ ರೋಗಕ್ಕೆ ಕೊನೆ ಇಲ್ಲದಂತಾಗುತ್ತದೆ. ಅದಕ್ಕೋಸ್ಕರ ಸ್ವಲ್ಪ ಬಿಗಿ ನಿಲುವನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ತೆರಿಗೆ ಆದಾಯದಲ್ಲಿ ಸಮಾಧಾನಕರ ಪ್ರಗತಿಯಾಗಿಲ್ಲವೆಂದು ಹಲವಾರು ಮಾನ್ಯ ಸದಸ್ಯರುಗಳು ಮಾತನಾಡುತ್ತಾ ತಮ್ಮ ಭಾವನೆಯನ್ನು ವ್ಯಕ್ತಮಾಡಿದ್ದಾರೆ. ಆದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇಕಡ 11% ತೆರಿಗೆಯಲ್ಲಿ ಹೆಚ್ಚಳವಾಗಿದೆ. ಆದರೆ ನಮ್ಮ ಅಪೇಕ್ಷೆ ಜಾಸ್ತಿ ಇತ್ತು. ಈ ಆರ್ಥಿಕ ಹಿಂಜರಿತದ ಪರಿಣಾಮ ನಮಗೆ ವ್ಯತ್ಯಾಸವಾದರೂ ಸಹ ನಮ್ಮ ಕಮರ್ಶಿಯಲ್ ಟ್ಯಾಕ್ಸ್, ಎಕ್ಸೈಸ್ ಮೇಲೆ ವಿಶೇಷ ಪರಿಶ್ರಮ ಹಾಕಿದ ಪರಿಣಾಮದಿಂದ, ನೋಡಿ ವಾಣಿಜ್ಯ ತೆರಿಗೆಯಲ್ಲಿ 2007–08 ರಲ್ಲಿ 15552 ಕೋಟಿ ತೆರಿಗೆ ಸಂಗ್ರಹವಾಗಿದ್ದರೆ 2008–09 ರಲ್ಲಿ ನಮ್ಮ ಅಂದಾಜು ಇದ್ದದ್ದು 17595 ಕೋಟಿ ಸಂಗ್ರಹವಾಗಿದೆ. ಅಂದರೆ 13% ಜಾಸ್ತಿಯಾಯಿತು. ರಾಜ್ಯ ಅಬಕಾರಿಯಲ್ಲಿ 4812 ಕೋಟಿ ಕಳೆದ ವರ್ಷದಲ್ಲಿ ಸಂಗ್ರಹವಾಗಿತ್ತು, ಈ ವರ್ಷ ನಾವು ಎಕ್ಸ್‌ಪೆಕ್ಟ್ ಮಾಡಿರುವುದು 5627 ಕೋಟಿ, ಅಂದರೆ 17% ಹೆಚ್ಚಳವಾಗುತ್ತದೆ. ಮೋಟಾರು ವಾಹನ ತೆರಿಗೆಯಲ್ಲಿ ಕಾರಣಗಳು ತಮಗೆ ಗೊತ್ತಿದೆ. ಕಳೆದ ಸಾರಿ 1788

ಕೋಟಿ ಸಂಗ್ರಹವಾಗಿದ್ದರೆ ಈ ಸಾರಿ 1875 ಕೋಟಿ ಸಂಗ್ರಹವಾಗಿದೆ. ಅಂದರೆ ಶೇಕಡ 5 ರಷ್ಟು ಜಾಸ್ತಿಯಾಗಿದೆ. ಆದರೆ ಕಡಿಮೆ ಆಗಿರುವುದು ಒಂದೇ ಬಾಬಿನಲ್ಲಿ. ಅದು ಯಾವುದೆಂದರೆ ನೋಂದಣಿ ಮತ್ತು ಮುದ್ರಣದಲ್ಲಿ. ಕಳೆದ ಸಲ 3617 ಕೋಟಿಯಾಗಿದ್ದರೆ ಈ ಸಾರಿ 3318 ಕೋಟಿಯಾಗಿದೆ. –8% ಆಗಿದೆ. ಇದಕ್ಕೆ ಕಾರಣ ರಿಜಿಸ್ಟ್ರೇಶನ್ ಎಲ್ಲವೂ ನಿಂತಿತು, ಬಹುಶಃ ಇನ್ನು ಮೇಲೆ ಸುಧಾರಣೆಯಾಗಬಹುದೆಂಬ ವಿಶ್ವಾಸ ನನಗಿದೆ. ಆದರೆ ಒಟ್ಟು ತೆರಿಗೆ 2007–08 ರಲ್ಲಿ 26367 ಕೋಟಿ ಸಂಗ್ರಹವಾಗಿದ್ದರೆ ಈ ಬಾರಿ 29138 ಕೋಟಿ ಸಂಗ್ರಹವಾಗುತ್ತದೆ ಎನ್ನುವ ವಿಶ್ವಾಸ ನನಗಿದೆ. ಅಂದರೆ 11% ಏರಿಕೆಯಾಗಿದೆ. ನಮ್ಮದು ನಿರೀಕ್ಷೆ ಸುಮಾರು 22 ಪ್ರತಿಶತ ಆಗಬೇಕು ಎಂದು ಇತ್ತು. ಬೇರೆ ಬೇರೆ ಕಾರಣಕ್ಕೋಸ್ಕರ ಈ ಹಿನ್ನೆಡೆಯಾಗಿದ್ದರಿಂದ ನಮಗೆ ಸ್ವಲ್ಪ ಅದರಲ್ಲಿ ತೊಂದರೆಯಾಗಿದೆ. ಒಂದು ಮಾತನ್ನು ನಾನು ಅತ್ಯಂತ ವಿನಯದಿಂದ ನಿಮಗೆ ಹೇಳಬಯಸುತ್ತೇನೆ. ಬೆಂಗಳೂರಿನಲ್ಲಿರುವಂಥ ಜಮೀನುಗಳ ಮಾರಾಟದಿಂದ 3 ಸಾವಿರ ಕೋಟಿ ರೂಪಾಯಿ ಬರುತ್ತದೆಂದು ನಾವು ನಿರೀಕ್ಷೆ ಮಾಡಿದ್ದು ನಿಜ. ಆದರೆ ನಮಗೆ ಬರಲಿಲ್ಲ. ಒಂದಿನ್ನೂರು ಕೋಟಿಯೊಳಗೇ ಎಲ್ಲಾ ಸೇರಿ ಆಯಿತು. ಕಾರಣ ಒಂದೆರಡ್ಮೂರು ಸಂಗತಿ ಅದರಲ್ಲಿ ಇರುವಂಥದ್ದು. ಒಂದು, ಅದನ್ನು ಮಾರಾಟ ಮಾಡಿಬಿಡಬಹುದಾಗಿತ್ತು. ಒಂದು, ಒಂದೂವರೆ ಸಾವಿರ ಕೋಟಿ ಬಂದರೆ ಮಾರಿ ಮುಗಿಸಿಬಿಡೋಣ, ಒಟ್ಟಿನಲ್ಲಿ ಬೊಕ್ಕಸಕ್ಕೆ ಹಣ ಬಂದರೆ ಸಾಕು ಎಂದು ಆ ರೀತಿಯಲ್ಲಿ ನಾವು ಮಾಡಲಿಲ್ಲ. ಒಂದು ವರ್ಷ, ಆರು ತಿಂಗಳು ಕಾಯ್ದರೆ ಸ್ವಲ್ಪ ಜನ ಸೆಟ್ಲ್ ಆಗುತ್ತಾರೆ, ಆಮೇಲೆ ಜಮೀನಿಗೆ ಒಳ್ಳೆಯ ಬೆಲೆ ಸಿಗಬಹುದು ಎನ್ನುವುದಕ್ಕೋಸ್ಕರ ಮಾರಲಿಲ್ಲ. ಈಗ ನಮ್ಮ ನಿರೀಕ್ಷೆಯಂತೆ 2009–10 ಕ್ಕೆ ಆಗಿಯೇ ಆಗುತ್ತದೆ. ಅದಕ್ಕೋಸ್ಕರ ಅದೊಂದರಲ್ಲಿ ನಮಗೆ ಹಿನ್ನಡೆಯಾಗಿದೆ ಹೊರತು, ಒಟ್ಟಾರೆ ನಮಗೆ ಸುಮಾರು ಮೂರು ಸಾವಿರ ಕೋಟಿ ನಾವು ಆದಾಯವನ್ನು ಏನು ನಿರೀಕ್ಷೆ ಮಾಡಿದ್ದೆವೋ ಅಷ್ಟು ಕಡಿಮೆಯಾಗಿದೆ. ಆದರೆ ಜಮೀನಿದೆ, ಜಮೀನಿನಿಂದ ನಮಗೆ ದುಡ್ಡು ಬಂದೇ ಬರುತ್ತದೆ. ಆದುದರಿಂದ ನಾನು ಅದನ್ನು ಲೆಕ್ಕ ಹಾಕುವುದಕ್ಕೆ ಹೋಗಿಲ್ಲ. ನಮ್ಮ ಆದಾಯದ ನಿರೀಕ್ಷೆ ಏನಿತ್ತು, ಈ ವರ್ಷ ಮಾರ್ಚ್ ಅಂತ್ಯದೊಳಗೆ ಸುಮಾರು ಮೂರು ಸಾವಿರ ಕೋಟಿ ಮೈಮೇಲೆ ಬರಬಹುದು. ಅಂದರೆ ನಮ್ಮ ನಿರೀಕ್ಷೆಯಲ್ಲಿ ಇಷ್ಟು ಹಿನ್ನಡೆಯಾಗಬಹುದೇ ಹೊರತು ಒಂಭತ್ತು ಸಾವಿರ, ಹತ್ತು ಸಾವಿರ ಕೋಟಿ ಎನ್ನುವ ಪ್ರಶ್ನೆಯೇ ಇಲ್ಲ. ನಾವು ಈ ವರ್ಷ ಈ ಜಮೀನುಗಳನ್ನು ಮಾರಾಟ ಮಾಡುವುದರಿಂದ 1900 ಕೋಟಿ ಬರುತ್ತದೆ ಎಂದು ನಿರೀಕ್ಷೆ ಇದೆ. ನಾವು ಮತ್ತು ನಮ್ಮ ರೆವಿನ್ಯೂ ಮಂತ್ರಿಗಳು ಈ ಬಗ್ಗೆ ಗಮನ ಹರಿಸಿದಾಗ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಬೆಂಗಳೂರಿನಲ್ಲಿ ಒತ್ತುವರಿಯಾಗಿರುವಂಥದ್ದು ಕೂಡ ಇದೆ. ಶಿವಕುಮಾರ್‌ರವರೆ, ನಾವು ನಿರ್ದಾಕ್ಷಿಣ್ಯವಾಗಿ ಅದನ್ನು ವಶಕ್ಕೆ ತೆಗೆದುಕೊಂಡು ಹರಾಜು ಮಾಡಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಸರ್ಕಾರಕ್ಕೆ ತುಂಬುವುದಕ್ಕೆ

ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಮತ್ತೆ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಿಸುವುದರ ಬಗ್ಗೆ ಹೇಳಬಯಸುತ್ತೇನೆ. ಏಕೆಂದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲವನ್ನು ಹೇಗೆ ಸಂಗ್ರಹ ಮಾಡುತ್ತೀರಿ ಯಡಿಯೂರಪ್ಪನವರೆ ಎಂದು ನೀವು ಕೇಳಬಹುದು. ಐ.ಎಂ.ಎಫ್.ಎಲ್. ಮತ್ತು ಬಿಯರ್ ಮತ್ತು ಇನ್ನಿತರ ಆಲ್ಕೋಹಾಲ್ ಪ್ರಮಾಣ ಕಡಿಮೆ ಇರುವ ಮದ್ಯಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕದಲ್ಲಿ ಹೆಚ್ಚಳವನ್ನು ಮಾಡುವುದಿದೆ. ಮತ್ತೆ ಚಿಲ್ಲರೆ ಮದ್ಯ ಮಾರಾಟಗಾರರ ಲಾಭಾಂಶದಲ್ಲಿ ಸ್ವಲ್ಪ ಇಳಿಕೆಯನ್ನು ಮಾಡುತ್ತೇವೆ. ಏಕೆಂದರೆ ಎಷ್ಟು ಹೋಗುತ್ತಿತ್ತೋ ಅದರ ನಾಲ್ಕು ಪಟ್ಟು ಕೇಸ್‌ಗಳು ಖರ್ಚಾಗುತ್ತಿರುವುದರಿಂದ ಅದರಲ್ಲಿ ಕಮಿಶನ್ ಅವರಿಗೆ ಏನು ಸಿಗುತ್ತಿತ್ತೋ ಅದನ್ನು ಕಡಿಮೆ ಮಾಡುವ ಸಲುವಾಗಿ ಅದನ್ನು ಇಳೀಕೆ ಮಾಡುತ್ತೇವೆ. ಐ.ಎಂ.ಎಫ್.ಎಲ್. ನ ಎಂ.ಆರ್.ಪಿ ಯಲ್ಲಿ ಹೆಚ್ಚಿನ ಬದಲಾವಣೆ ಆಗುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಐ.ಎಂ.ಎಫ್.ಎಲ್.ಮೇಲೆ ಹೆಚ್ಚುವರಿ ಅಬಕಾರಿ ಸುಂಕದ ದರದ ಶ್ರೇಣಿಯನ್ನು ಪರಿಷ್ಕರಿಸುತ್ತೇವೆ. ಈ ಕ್ರಮದಿಂದಾಗಿ 820 ಕೋಟಿ ಹೆಚ್ಚುವರಿಯಾಗಿ ಆದಾಯ ಬರುತ್ತದೆ ಎಂದು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಅಧಿಸೂಚನೆಯನ್ನು ಕೂಡ ನಾನು ಹೊರಡಿಸುತ್ತೇನೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮೂರ್ನಾಲ್ಕು ಅಂಶಗಳನ್ನು ಈ ಮನೆಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ಈ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರವರ ಹೆಸರನ್ನು ಇಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದಿಂದ ರೆಕಮೆಂಡ್ ಮಾಡಿ ನಾವು ಕಳುಹಿಸುತ್ತೇವೆ. ನೀವೆಲ್ಲರೂ ಇದನ್ನು ಸ್ವಾಗತ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ನಾವು ಈಗಾಗಲೇ ತಮಗೆ ಕೇಂದ್ರ ಸರ್ಕಾರಕ್ಕೆ ಎಲ್ಲಾ ಶಾಸಕರು ಬರೆದುಬಿಟ್ಟೇ ಕೊಟ್ಟಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಆಯಿತು ಬಿಡಿ. ಬಹಳ ಸಂತೋಷ. ಒಳ್ಳೆಯ ಸಲಹೆ. ಆಮೇಲೆ ಕನ್ನಡ ತಂತ್ರಾಂಶ ಅಭಿವೃದ್ಧಿ ಮಾರಾಟದ ಮೇಲಿನ ವ್ಯಾಟ್ ತೆರಿಗೆಯನ್ನು ಶೇಕಡ 12.5 ರಿಂದ ಶೇಕಡ 4 ಕ್ಕೆ ಇಳಿಸುತ್ತಿದ್ದೇವೆ. ಪ್ರಸ್ತುತ ಗ್ರಾಮ ಸಹಾಯಕರಿಗೆ ಕೊಡುತ್ತಿರುವ ಗೌರವ ಧನದ ಮೊತ್ತವನ್ನು 2 ಸಾವಿರದಿಂದ 3 ಸಾವಿರಕ್ಕೆ ಏರಿಸುತ್ತಿದ್ದೇವೆ. ಅವರಿಂದ ಹೆಚ್ಚು ಕೆಲಸವನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಒಂದು ಸಾವಿರ ರೂ.ಗಳನ್ನು ಹೆಚ್ಚು ಕೊಡಲು ಹೊರಟಿದ್ದೇವೆ. ಸಿಲಿಪಾಲಿನ್ ಪ್ಲಾಸ್ಟಿಕ್ ಮತ್ತು ಟಾರ್ಪಾಲ್ ಮೇಲಿನ ವ್ಯಾಟ್‌ನ್ನು ಶೇಕಡ 12.5 ರಿಂದ ಶೇಕಡ 4ಕ್ಕೆ ಇಳಿಸುತ್ತಿದ್ದೇವೆ. Federation of Kodava ಸಮಾಜದ ಒಂದು ಸಂಸ್ಕೃತಿ ಮತ್ತು ಕ್ರೀಡಾ ಸಮುಚ್ಚಯ ಕಟ್ಟಡಕ್ಕೆ ಒಂದು ಕೋಟಿ ರೂಪಾಯಿಗಳ

ಸಹಾಯಧನವನ್ನು ಮಾಡುತ್ತಿದ್ದೇವೆ. ಸಾವಯವ ತ್ಯಾಜ್ಯ ವಸ್ತು ಕನ್ವರ್ಟರ್‌ಗಳ ಮಾರಾಟದ ಮೇಲಿನ ವ್ಯಾಟ್ ತೆರಿಗೆಯನ್ನು ಶೇ 12.5 ರಿಂದ ಶೇ. 4ಕ್ಕೆ ಇಳಿಸುತ್ತಿದ್ದೇವೆ.

ಸಾರಾಯಿ ನಿಷೇಧದಿಂದ ನಿರಾಶ್ರಿತರಾದಂತಹ, ಆ ವೃತ್ತಿ ಮಾಡುವಂತಹ ಈಡಿಗ ಸಮಾಜದವರಿಗೆ ಶೇಕಡ 3ರ ಬಡ್ಡಿ ದರದಲ್ಲಿ ಸಾಲ ಕೊಡುವುದಕ್ಕೆ ಒಂದು ವಿನೂತನ ಯೋಜನೆಯನ್ನು ರೂಪಿಸುತ್ತಿದ್ದೇವೆ. ಅಡಿಕೆಗೆ ಬೆಂಬಲ ಬೆಲೆ ಕೊಡುವಂತಾದ್ದು ತುಂಬಾ ಅಗತ್ಯ ಇದೆ. ಅದರೆ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚೆಯಾಗಿದೆ. ಅಡಿಕೆಗೆ ಪ್ರತಿ ಕ್ವಿಂಟಾಲ್‌ಗೆ 9,500 ರೂಪಾಯಿ ಬೆಂಬಲ ಬೆಲೆಯನ್ನು ನಾವು ಕೊಡುತ್ತೇವೆ. ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಗ್ರಾಮದಲ್ಲಿ ಆರ್ಯಈಡಿಗ ಒಂದು ಮಹಾಸಂಸ್ಥಾನ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಛಲವಾದಿ ಜನಾಂಗದ ಅಭಿವೃದ್ಧಿ ಸಲುವಾಗಿ ಬೆಂಗಳೂರು, ಶಿವಮೊಗ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಛಲವಾದಿ ಭವನ ಕಟ್ಟುವುದಕ್ಕೆ ಒಂದೊಂದು ಕೋಟಿ ರೂಪಾಯಿ ಕೊಡುತ್ತೇನೆಂದು ನಾನು promise ಮಾಡಿದ್ದೆನು. ಅದು ಬಜೆಟ್‌ನಲ್ಲಿ ಕೈಬಿಟ್ಟು ಹೋಗಿತ್ತು. ಅಲ್ಲಿ ಮೂರು ಕಡೆಗೆ ಮೂರು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ದೊಡ್ಡ ಪ್ರಮಾಣದಲ್ಲಿ ಬಸವ ಉತ್ಸವವನ್ನು ಆಚರಿಸಬೇಕು ಎಂದು ಹೇಳಿದ್ದಾರೆ. ಅದಕ್ಕೆ ಸರ್ಕಾರದ ಕಡೆಯಿಂದ 50 ಲಕ್ಷ ರೂಪಾಯಿ ಪ್ರತಿವರ್ಷ ಅನುದಾನ ಕೊಟ್ಟು ಅದು ವಿಜೃಂಭಣೆಯಿಂದ ನಡೆಯಬೇಕು ಎಂದು ಇದೆ. ಮಳವಳ್ಳಿ ತಾಲ್ಲೂಕಿನ ಪೂರಿಗಾಲಿಯಲ್ಲಿ ಏತನೀರಾವರಿ ಯೋಜನೆಗೆ ಮಂಜೂರಾತಿ ಹಾಗೂ ಮುಂದಿನ ವರ್ಷ ಅದಕ್ಕೆ ಐದು ಕೋಟಿ ರೂಪಾಯಿ ಒದಗಿಸುತ್ತಿದ್ದೇವೆ. ನವಿಲುಗುಂದ ತಾಲ್ಲೂಕಿನ ಅಣ್ಣಿಗೇರಿಯಲ್ಲಿ ಪಂಪ ಸ್ಮಾರಕ ನಿರ್ಮಾಣ ಮಾಡುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕುಪ್ಪಳ್ಳಿಯ ಕುವೆಂಪು ಪ್ರತಿಷ್ಠಾನ ಚೆನ್ನಾಗಿ ನಡೆಯಬೇಕೆಂಬ ದೃಷ್ಟಿಯಿಂದ ಪ್ರತಿವರ್ಷ 50 ಲಕ್ಷ ರೂಪಾಯಿಗಳ ಅನುದಾನ. ಚಿತ್ರದುರ್ಗ ಜಿಲ್ಲೆಯ ಸಾಣೇಹಳ್ಳಿಯಲ್ಲಿ ಸಾಂಸ್ಕೃತಿಕ ಚಟುವಟಿಕೆ ಇಡೀ ರಾಜ್ಯದ ಗಮನ ಸೆಳೆಯುತ್ತಿದೆ. ಪ್ರತಿವರ್ಷ ಚೆನ್ನಾಗಿ ಮಾಡಲಿ ಎಂದು ಅವರಿಗೆ 20 ಲಕ್ಷ ರೂಪಾಯಿ ಅನುದಾನ ಕೊಡಬೇಕು. ಕರ್ನಾಟಕದ ದಿವಂಗತ ಎಸ್.ಎಲ್ ಜಗನ್ನಾಥ್‌ರಾವ್ ಜೋಷಿಯವರ ಒಂದು ಮನೆ ನರಗುಂದದಲ್ಲಿ ಇದೆ, ಅದನ್ನು ವಶಕ್ಕೆ ತೆಗೆದುಕೊಂಡು, ಅಲ್ಲಿ ಒಂದು ಸ್ಮಾರಕ ಭವನ ನಿರ್ಮಾಣ ಹಾಗೂ ಒಂದು ಕೋಟಿ ರೂಪಾಯಿಯಲ್ಲಿ ಅದನ್ನು ಅಭಿವೃದ್ಧಿ ಪಡಿಸಬೇಕೆಂದು ಇದ್ದೇವೆ. ಬಾರ್ಕೂರಿನ ಬೆಣ್ಣೆಕುದ್ರಾದಲ್ಲಿ ಕರ್ನಾಟಕದ ಮೊಗವೀರ ಸಮಾಜದ ಮೂಲಸ್ಥಾನದಲ್ಲಿ ಸಮಾಜ ಭವನ ಮತ್ತು ಪೀಠ ಸ್ಥಾಪನೆಗಾಗಿ ಒಂದು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಮಹಾರಾಷ್ಟ್ರದಲ್ಲಿರುವ ಪಂಡರಾಪುರಕ್ಕೆ ವಿಠಲ ರುಕ್ಮಾಯಿ ದೇವಸ್ಥಾನಕ್ಕೆ ಕರ್ನಾಟಕದಿಂದ ಸಾವಿರಾರು ಜನ ಭಕ್ತರು ಪ್ರತಿನಿತ್ಯ

ಹೋಗುತ್ತಾರೆ. ಭಕ್ತರ ಅನುಕೂಲಕ್ಕಾಗಿ ಪಂಡರಾಪುರದಲ್ಲಿ ಯಾತ್ರಿನಿವಾಸ್ ನಿರ್ಮಾಣಕ್ಕೆ ಒಂದು ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇನೆ.

ಶ್ರೀ ಬಿ. ಪ್ರಕಾಶ್ ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ಅಲ್ಲಿಗೆ ಎರಡು ಕೋಟಿ ರೂಪಾಯಿ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಿದ್ದೆ... ದಯವಿಟ್ಟು ಅಲ್ಲಿಗೆ ಎರಡು ಕೋಟಿ ರೂಪಾಯಿ ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ದತ್ತಪೀಠ ಮತ್ತು ಮುಳ್ಳಯ್ಯನ ಗಿರಿ ಆ ಜಿಲ್ಲೆಯಲ್ಲಿ ಪ್ರಮುಖ ಪ್ರವಾಸಿ ತಾಣವಾಗಿದೆ. ಅಲ್ಲಿ ಪ್ರತಿನಿತ್ಯ ಸಾವಿರಾರು ಜನ ಬಂದು ಹೋಗುತ್ತಾರೆ. ಅಲ್ಲಿ ಮೂಲಭೂತ ಸವಲತ್ತುಗಳನ್ನು ಒದಗಿಸುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕನ್ನಡ ಚಲನಚಿತ್ರೋದ್ಯಮಕ್ಕೆ ಹೆಚ್ಚಿನ ಒಂದು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ, ಇವತ್ತು ಕನ್ನಡ ಚಲನಚಿತ್ರೋದ್ಯಮ ಈ ವರ್ಷ ವಜ್ರ ಮಹೋತ್ಸವ ಆಚರಿಸುತ್ತಿದೆ. ಈ ಸಂಭ್ರಮದ ಆಚರಣೆ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡುವುದು ನಮ್ಮ ಸರ್ಕಾರದ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ರಾಷ್ಟ್ರಪ್ರಶಸ್ತಿ ವಿಜೇತ ಕನ್ನಡ ಚಲನ ಚಿತ್ರಗಳಿಗೆ ಉತ್ತೇಜನ ಹಣವನ್ನು ಮೂರು ಲಕ್ಷ ರೂಪಾಯಿಯಿಂದ ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸುತ್ತಿದ್ದೇವೆ. ಪ್ರತಿವರ್ಷ 50 ಕನ್ನಡ ಚಲನ ಚಿತ್ರಗಳಿಗೆ ತಲಾ ಹತ್ತು ಲಕ್ಷ ರೂಪಾಯಿ ಸಹಾಯ ಧನ ನೀಡುತ್ತಿದ್ದು, ಅದಕ್ಕೆ ಹೆಚ್ಚುವರಿಯಾಗಿ ಎರಡು ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಚಲನ ಚಿತ್ರ ಕಾರ್ಮಿಕರ ಕಲ್ಯಾಣ ದತ್ತಿ ನಿಧಿ ಸ್ಥಾಪಿಸುವುದಕ್ಕೋಸ್ಕರ ಒಂದು ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇವೆ. ಕನ್ನಡ ಚಲನ ಚಿತ್ರ ಮತ್ತು ಹಾಡುಗಳನ್ನು duplicate ಮಾಡಿ ಮಾರಾಟ ಮಾಡುವ ಒಂದು ಕೆಟ್ಟ ಪದ್ಧತಿ ನಮ್ಮಲ್ಲಿ ಇದೆ. ಇದೊಂದು ಅಪರಾಧ. ಈಗಿರುವ ಕಾನೂನುಗಳಿಂದ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಿ.ಡಿ, ಡಿ.ವಿ.ಡಿ ಮತ್ತು ಕ್ಯಾಸೆಟ್‌ಗಳ piracy ಹಾವಳಿ ನಿಲ್ಲಿಸುವುದಕ್ಕೋಸ್ಕರ ವಿಶೇಷ ಕಾನೂನನ್ನು ತಂದು ತಡೆಹಿಡಿಯುವುದಕ್ಕೆ ಒಂದು ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಗದಗ ಜಿಲ್ಲೆಯ ಲಕ್ಕುಂಡಿ ಒಂದು ಐತಿಹಾಸಿಕ ಸ್ಥಳ. ಇದರ ಅಭಿವೃದ್ಧಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದೆಲ್ಲವನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು, ಅದನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಸಿದ್ದು ಸವದಿ: ಶ್ರೀಶೈಲ ಮಲ್ಲಿಕಾರ್ಜುನ ಯಾತ್ರಾ ನಿವಾಸದ ಬಗ್ಗೆ ಹೇಳಲಿಲ್ಲ. ನಮ್ಮ ವೀರಶೈವರು ಬಹಳ ಮಂದಿ ಹೋಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ತಮ್ಮೆಲ್ಲರ ಅನುಮತಿಯನ್ನು ಪಡೆದುಕೊಂಡು ಇಂದು ಬೆಳಿಗ್ಗೆ ತಿರುಪತಿಗೆ ಪೂಜೆಗೆಂದು ಹೋಗಿದ್ದೆನು. ಇವತ್ತು ತಿರುಪತಿಯಲ್ಲಿ ಸುಮಾರು 90–95 ಕೋಟಿ ರೂಪಾಯಿ ವೆಚ್ಚದಲ್ಲಿ 500 ಕೊಠಡಿಗಳ ಒಂದು ಕಟ್ಟಡದ ಶಂಕುಸ್ಥಾಪನೆ ಮಾಡಿ ಸಾರ್ವಜನಿಕ ಸಹಕಾರದೊಂದಿಗೆ ಅದನ್ನು ಅಭಿವೃದ್ಧಿ ಪಡಿಸಲು ಬೆಳಿಗ್ಗೆ ಶಿಲಾನ್ಯಾಸ ಮಾಡಿದ್ದೇವೆ. ಮತ್ತೊಮ್ಮೆ ಇಲ್ಲಿ ಭಾಗವಹಿಸಿದ ಸಲಹೆ ಕೊಟ್ಟಂತಹ ಎಲ್ಲಾ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಆಯವ್ಯಯಕ್ಕೆ ಅನುಮೋದನೆ ನೀಡಬೇಕು. ಈ ಬಾರಿ ಅತ್ಯಂತ ಒಳ್ಳೆಯ ರೀತಿಯಲ್ಲಿ ಚರ್ಚೆಯಾಗಿದೆ. ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನೀವು ಏಕೋ ಏನೋ 8–9 ತಿಂಗಳಿಂದ ನಮ್ಮ ಮೇಲೆ ಸಿಟ್ಟು ಮಾಡಿಕೊಂಡಿದ್ದೀರಿ. ಯಾವುದೇ ಸಹಕಾರ ಕೊಡಲಿಲ್ಲ. ನಾವು ಇಲ್ಲಿ ಇರುತ್ತೇವೋ, ಹೋಗುತ್ತೇವೋ ಎನ್ನುವ ಕಾರಣಕ್ಕೋಸ್ಕರ ಏನೋ co-operate ಮಾಡಲಿಲ್ಲ. ಆದರೆ ಇವರು ಐದು ವರ್ಷ ಇರುತ್ತಾರೆ ಎಂದೆನಿಸಿದ ಮೇಲಾದರೂ ಈಗ co-operate ಮಾಡುತ್ತಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನೀವು ಸಹಕಾರ ಕೊಟ್ಟರೆ ಇನ್ನೂ ಒಳ್ಳೆಯ ಕೆಲಸ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಆಯವ್ಯಯವನ್ನು ಮಂಜೂರು ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೇ, ಶಾಸಕರ ನಿಧಿ ಬಗ್ಗೆ ಹೇಳಲಿಲ್ಲ.

ಅಧ್ಯಕ್ಷರು: ಸನ್ಮಾನ್ಯ ಮುಖ್ಯಮಂತ್ರಿಗಳೇ, ಶಾಸಕರ ನಿಧಿ ಬಗ್ಗೆ ಕೇಳುತ್ತಿದ್ದಾರೆ.

LA, Vol-5, F. 11

ಶ್ರೀ ಬಿ.ಎಸ್.ಯಡಿಯೂರಪ್ಪ: ಶಾಸಕರ ನಿಧಿ 50 ಲಕ್ಷ ರೂಪಾಯಿ ಇತ್ತು. ಇನ್ನು 50 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇನೆ. ಮುಂದಿನ ಆರ್ಥಿಕ ಸ್ಥಿತಿ ನೋಡಿಕೊಂಡು ಮತ್ತೆ ಮೇ ತಿಂಗಳಲ್ಲಿ ಸೇರುತ್ತೇವಲ್ಲ, ಆಗ ಪರಿಶೀಲನೆ ಮಾಡೋಣ. ಒಂದು ಕೋಟಿ ರೂಪಾಯಿ ಪೂರ್ತಿ ಹಣವನ್ನು ನಾವು ಕೊಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಆಯವ್ಯಯದ ಚರ್ಚೆಯ ಸಂದರ್ಭದಲ್ಲಿ ಅನೇಕ ಲೋಪದೋಷಗಳ ಬಗ್ಗೆ, ಆಯವ್ಯಯದಲ್ಲಿ ಮಂಡನೆ ಮಾಡಿರುವಂತಹ ನ್ಯೂನತೆಗಳ

ಬಗ್ಗೆ ಸಾಕಷ್ಟು ವಿಚಾರಗಳನ್ನು ವಿರೋಧ ಪಕ್ಷದ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಎಲ್ಲರಿಗೂ ತೃಪ್ತಿ ಪಡಿಸುವಂತಹ ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾರೆ ಮತ್ತು ಸಮಜಾಯಿಸಿ ಉತ್ತರವನ್ನು ಕೊಡುತ್ತಾರೆಂದು ನಿರೀಕ್ಷೆ ನಮ್ಮದಾಗಿತ್ತು. ಆದರೆ ಆ ನಿರೀಕ್ಷೆ ಒಂದು ಕಡೆ ಹುಸಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಒಂದು ಮುಖ್ಯವಾಗಿರತಕ್ಕಂಥ ವಿಚಾರ. ಕೇಂದ್ರ ಸರ್ಕಾರದ ಸಾಲದ ಯೋಜನೆ, ಆ ಸಾಲದ ಯೋಜನೆಯಲ್ಲಿ ಇವತ್ತು ಆಡಳಿತಾತ್ಮಕವಾದಂತಹ ಕೆಲವು ತೊಂದರೆಗಳಾಗಿವೆ. ಸಾಲವನ್ನು PLD Bank ಮುಖೇನ ಪಡೆದಿರುವಂತಹ ಸಣ್ಣ ರೈತರಿಗೆ ಸಾಲ ಮನ್ನಾ ಆಗದಿರುವಂತಹ ಸಂದರ್ಭಗಳು ಇದೆ. ಅದರ ಬಗ್ಗೆ ಯಾವುದೇ ರೀತಿಯಾದಂತಹ ಗಮನ ಹರಿಸಿಲ್ಲವೆನ್ನುವ ವಿಚಾರವನ್ನು ಸಾಕಷ್ಟು ಸದಸ್ಯರು ಪ್ರಸ್ತಾಪ ಮಾಡಿದರು. ಅದಕ್ಕೆ ಸಂಬಂಧಪಟ್ಟ ಹಾಗೆ ಏನು ಕಾರ್ಯಕ್ರಮವನ್ನು ಹಾಕಿದ್ದಾರೆಂದು ಹೇಳುವಂತಹ ಪ್ರಸ್ತಾಪವನ್ನು ಕೂಡ ಮಾಡಲಿಲ್ಲ. ನೀರಾವರಿ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದರು. ನೀರಾವರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಈಗಾಗಲೇ ನಾವು 2,700 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಇನ್ನೂ ಕೂಡ ಖರ್ಚು ಮಾಡಿ, ನೂರಕ್ಕೆ ನೂರು ಸಾಧನೆ ಮಾಡುತ್ತೇವೆಂದು ಹೇಳಿದರು. ಆದರೆ ನೀವು ನೀರಾವರಿ ಯೋಜನೆಗೆ ಆದ್ಯತೆ ಮೇಲೆ ಎಷ್ಟು ಹಣ ಇಡಬೇಕು ಎನ್ನುವುದರಲ್ಲಿ ಇಟ್ಟಿದ್ದೇ ಕಡಿಮೆ, ಅದರಲ್ಲಿ ಸಂಪೂರ್ಣವಾಗಿ ಬಿಡುಗಡೆ ಮಾಡಿದ್ದೇವೆಂದು ಹೇಳುವುದರಲ್ಲಿ ಏನೂ ಕೂಡ ಪ್ರಯೋಜನವಾಗುವುದಿಲ್ಲ. ಅದು ನಮ್ಮ ಯೋಜನೆಗೆ
ಸಹಾಯವಾಗಬೇಕಾಗಿರತಕ್ಕಂಥಾದ್ದು. ಇವತ್ತು ನಾವು 34 ಲಕ್ಷ ಎಕರೆಗಳನ್ನು ಗುರಿಯಲ್ಲಿಟ್ಟು, ಕೇವಲ 24 ಲಕ್ಷ ಎಕರೆಗೆ ಮಾತ್ರ ನೀರಾವರಿ ಕೊಡುವುದಕ್ಕೆ ಸಾಧ್ಯವಾಗಿದೆ. ಇನ್ನು 12 ಲಕ್ಷ ಎಕರೆಗೆ reach ಆಗಬೇಕಾಗಿರುವಾಗ ಸುಮಾರು ನೀವು 50-60 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾದಂತಹ ಸಂದರ್ಭದಲ್ಲಿ ನೀವು ಇದಕ್ಕೆ ಪ್ರತಿಯಾಗಿ 3,000-4,000 ಕೋಟಿ ರೂಪಾಯಿಗಳನ್ನು ಇಡುವುದರಿಂದ ಖಂಡಿತವಾಗಿ ಕೂಡ ಪರಿಸ್ಥಿತಿ ಸುಧಾರಣೆಯಾಗುವುದಕ್ಕೆ ಸಾಧ್ಯವಿಲ್ಲ. ನೀವು ರೈತರ ನಾಯಕರು. ರೈತರ ಬಗ್ಗೆ ಕಾಳಜಿ ಇರುವಂತಹ ಜನರು, ನೀರಾವರಿಗೆ ಹೆಚ್ಚಿನ ಆದ್ಯತೆ ಹಾಗೂ ಒತ್ತನ್ನು ಕೊಡಬೇಕಾಗುತ್ತದೆ. ಆದರೆ ಅದನ್ನು ಕೊಡಲಿಲ್ಲವೆನ್ನುವುದು ಒಂದು ಮಾತನ್ನು ಹೇಳುತ್ತೇನೆ. ಇನ್ನು ಇದ್ಯುಚ್ಛಕ್ತಿ ವಿಚಾರದಲ್ಲಿ ಕೂಡ ಹೇಳುವುದಾದರೆ, ಇವತ್ತು ಕರ್ನಾಟಕ ಕಗ್ಗತ್ತಲಿನಲ್ಲಿ ಇದೆ. ಇವತ್ತು ಏನಾಗಿದೆ? ನೀವು ಇನ್ನು ಮುಂದಿನ ಐದು ವರ್ಷಕ್ಕೆ 5,000 ಮೆಗಾವ್ಯಾಟ್ ವಿದ್ಯುತ್ ಉತ್ಪತ್ತಿ ಮಾಡುತ್ತೇವೆಂದು ಹೇಳುವುದರ ಜೊತೆಗೆ, ಯಾವ ರೀತಿ ಹಣವನ್ನು ತೊಡಗಿಸುತ್ತೀರಿ ಎನ್ನುವ ವಿಚಾರದಲ್ಲಿ ಜನರ ಮನಸ್ಸಿನಲ್ಲಿ ಇರುವಂತಹ ಅನುಮಾನವನ್ನು ನಿವಾರಣೆ ಮಾಡುವಂತಹ ಕೆಲಸವನ್ನು

ನೀವು ಮಾಡಲಿಲ್ಲ. Food ಬಗ್ಗೆ ಒಂದು ಮಾತನ್ನು ಹೇಳಿದಿರಿ. ಇವತ್ತು ತಾತ್ಕಾಲಿಕವಾಗಿ ಕೊಟ್ಟಿರುವಂತಹ ಎಲ್ಲಾ ಕಾರ್ಡುಗಳಿಗೆ ಕೂಡ....

ಅಧ್ಯಕ್ಷರು: ರೇವಣ್ಣನವರೇ, 'ಅವರು ಮಾತನಾಡಿದ್ದು ಮುಗಿದ ಮೇಲೆ ನೀವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಬಜೆಟ್ ಬಗ್ಗೆ clarifiacation ಕೇಳುತ್ತಿದ್ದಾರೆ. ಉಪನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಯಾವ ಪರಿಸ್ಥಿತಿ ಇದೆ ನೋಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾರ್ಚ್ ಒಂದನೇ ತಾರೀಖಿನಿಂದ ತಾತ್ಕಾಲಿಕವಾಗಿ ಪಡೆದಿರುವಂತಹ ಕಾರ್ಡುಗಳಿಗೆ food grains ಕೊಡುವುದಕ್ಕೆ ಎಲ್ಲಾ ರೀತಿಯಲ್ಲಿ ಪ್ರಯತ್ನ ಪಡುತ್ತೇವೆ ಎನ್ನುವ ಮಾತನ್ನು ಕೂಡ ಹೇಳಿದ್ದೀರಿ. ನಾವು ವಿರೋಧಪಕ್ಷದಲ್ಲಿ ಎಲ್ಲರನ್ನೂ ಟೀಕೆ ಮಾಡುತ್ತೇವೆಂದು ಅಲ್ಲ. ರೈತರ ಪರವಾಗಿರುವಂಥ 3% ಅನ್ನು ರಾಷ್ಟ್ರೀಕೃತ Bankನಿಂದ ಪಡೆದಿರುವಂಥ ಸಾಲಕ್ಕೆ ನೀವು ಕೊಡುತ್ತಿರುವಂಥಾದ್ದನ್ನು ಕೂಡ ನಾವು ಸ್ವಾಗತ ಮಾಡುತ್ತೇವೆ. ಅದರ ಬಗ್ಗೆ ನಾವು ಏನು ಹೇಳುವುದಿಲ್ಲ. ಅದೇ ರೀತಿಯಾಗಿ ಇವತ್ತು ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದೀರಿ, ಅದನ್ನೂ ಕೂಡ ನಾವು ಸ್ವಾಗತ ಮಾಡುತ್ತೇವೆ. ಅದೇ ರೀತಿಯಾಗಿ ತೆಂಗು ಬೆಳೆಗಾರರು ಕೂಡ ಇವತ್ತು ಅತ್ಯಂತ ಕಷ್ಟದಲ್ಲಿದ್ದಾರೆ. ತೆಂಗು ಇವತ್ತು 3,700 ರೂಪಾಯಿಗಳು, 3,800 ರೂಪಾಯಿಗಳಿಗೆ ಹರಾಜು ಆಗುತ್ತಿದೆ. ಅವರಿಗೆ ಇವತ್ತು 5,000, 6,000 ರೂಪಾಯಿಗಳನ್ನು ಕೊಟ್ಟರೂ ಕೂಡ ಸಾಲದೇ ಇರುವಂಥ ಪರಿಸ್ಥಿತಿ ಇರುವಾಗ ಅವರ ಬಗ್ಗೆಯೂ ಕೂಡ ಕಾಳಜಿಯನ್ನು ವಹಿಸುತ್ತೀರೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಅದು ಏನೂ ಆಗಲಿಲ್ಲ. ಇನ್ನು ಡಾ:ನಂಜುಂಡಪ್ಪನವರ ವರದಿಯಲ್ಲಿ ಕಳೆದ ಎರಡು ವರ್ಷದಲ್ಲಿ ಕೂಡ ಸುಮಾರು 4,000ಕೋಟಿ ರೂಪಾಯಿಗಳನ್ನು ಇಡುತ್ತೇವೆಂಬ ಮಾತನ್ನು ಹೇಳಿದಿರಿ. ಅದರೆ ನೀವು ನಿಜವಾಗಿಯೂ ಕೂಡ ಡಾ:ನಂಜುಂಡಪ್ಪನವರ ಉದ್ದೇಶವೇನು ಇದೆ, ಆ ಉದ್ದೇಶವನ್ನು ಬಿಟ್ಟು ಬೇರೆ ಬೇರೆ ರೀತಿಯಲ್ಲಿ divert ಮಾಡಿ ಹಣವನ್ನು ಖರ್ಚು ಮಾಡುವಂಥ ಕೆಲಸವನ್ನು ಮಾಡಿದ್ದೀರಿ.

ಅಧ್ಯಕ್ಷರು: ತಾವು ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನೀವು ಕೇಳುವುದು ಬೇಡವೆಂದರೆ ನಾನು ಕುಳಿತುಬಿಡುತ್ತೇನೆ. ನಾನು clarification ಕೇಳುವಂಥಾದ್ದನ್ನು ಕೇಳುವುದಿಲ್ಲವೆಂದರೆ ಇದು ಎಂಥಾದ್ದು? ಇವತ್ತು ನಾವು.. .. ..

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಜಯಚಂದ್ರರವರೆ, ನಿಮ್ಮ clarification ಅನ್ನು ಅವರು ಯಾರು ಕೇಳುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಮುಖ್ಯಮಂತ್ರಿಯವರೆ, ನಮ್ಮ ಉದ್ಧೇಶವಿದ್ದದ್ದು ನೀವು ಸಂಪನ್ಮೂಲವನ್ನು ಕ್ರೋಢಿಕರಿಸುವುದರಲ್ಲಿ ಇವತ್ತು ಬಹಳ ambitious ಅನ್ನು projectionsಗೆ ಕೊಟ್ಟು, ಇವತ್ತು ನೀವು ಸಂಪನ್ಮೂಲವನ್ನು ಎಲ್ಲಿಂದ ತರುತ್ತೀರೆನ್ನುವಂಥ ಮಾತನ್ನು ನಾವು ಅನೇಕ ಸಾರಿ ಹೇಳಿದ್ದೇವೆ. ಸುಮಾರು 10 ರಿಂದ 15 ಸಾವಿರ ಕೋಟಿ ರೂಪಾಯಿಗಳ ಕೊರತೆ ಬೀಳುತ್ತದೆಂಬ ಮಾತನ್ನು ಹೇಳಿದ್ದೇವೆ. ಇವತ್ತು ಕೇವಲ ಸಾಲದಿಂದ, Market borrowings ನಿಂದ ಹೆಚ್ಚು ಬಡ್ಡಿಯನ್ನು ಕೊಟ್ಟು ಇವತ್ತು ಸಾಲವನ್ನು ತರುವಂಥ ಕೆಲಸವನ್ನು ಮಾಡಿದ್ದೀರಿ. ಇದರಿಂದ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ, ಪೂರಕವಾಗಿ ಇವತ್ತು ಯಾವುದೇ asset create ಆಗತಕ್ಕಂಥ ಪ್ರಶ್ನೆಯೇ ಇಲ್ಲ. ಆದರೆ ಇವತ್ತು ಸಾಲ ಹೆಚ್ಚಾಗುತ್ತಿದೆ, ಸಾಲವನ್ನು ಯಾವ ರೀತಿಯಾಗಿ ಕಡಿಮೆ ಮಾಡುತ್ತೀರೆಂಬ ಪ್ರಶ್ನೆಗಳನ್ನು ಸಹ ಪ್ರಸ್ತಾಪ ಮಾಡಿದೆವು. ಅದರ ಬಗ್ಗೆ ಯಾವ ರೀತಿಯಾದ ಗಮನವನ್ನು ಹರಿಸಿಲ್ಲ. ಇಲ್ಲಿ ನಿಮ್ಮ ಮುಖ್ಯವಾದಂಥ ಉದ್ದೇಶವೇನಾಗಿತ್ತೆಂದರೆ, ಕೇಂದ್ರಸರ್ಕಾರದಿಂದ ಯೋಜನೆಗಳ ಮುಖೇನಾ ಬರತಕ್ಕಂಥ ಹಣವನ್ನು ನೀವು ಇವತ್ತು ಪಡೆಯುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಎರಡನೆಯ installment ಅನ್ನು claim ಮಾಡುವಂಥಾದ್ದರಲ್ಲಿ ಇವತ್ತು ಬಹಳಷ್ಟು ಇಲಾಖೆಗಳಲ್ಲಿ ಆಗಿಲ್ಲ. ಆ ಇಲಾಖೆಗಳು RDPR ಇರಬಹುದು, irrigation ಇರಬಹುದು, ಕೇಂದ್ರಸರ್ಕಾರದಿಂದ ಪಡೆಯುವಂಥ ಹಣದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಅವರು ಹಣವನ್ನು ಕೊಡುವುದಕ್ಕೆ ತಯಾರಾಗಿ ಇದ್ದರೂ ಕೂಡ, ಈ ಹಣವನ್ನು ಪಡೆಯುವುದರಲ್ಲಿ ನಿಮ್ಮ utilization certificate ಕೊಡುವುದರಲ್ಲಿ ಇವತ್ತು ವಿಳಂಬವಾಗಿರುವುದರಿಂದ ನಿಮಗೆ ಎರಡನೆಯ installment ಬರುವುದಿಲ್ಲ ಮತ್ತು additionality ಕೂಡ ಬರುವುದಕ್ಕೆ ಸಾಧ್ಯವಿಲ್ಲ. ನೀವು ಅಲ್ಲೆ ಸಂಪೂರ್ಣವಾಗಿ ವಿಫಲರಾಗಿದ್ದೀರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿಮ್ಮ ಮಾತಿನ ಒಟ್ಟಾರೆ ಅರ್ಥವೇನೆಂದರೆ, ಈಗ ನೀವು ಘೋಷಣೆಯನ್ನು ಮಾಡಿರುವಂಥಾದ್ದನ್ನು ನೋಡಿದರೆ, ನಾವು ಇನ್ನೂ ಎಷ್ಟು ಘೋಷಣೆಗಳು ಇವೆಯೋ ಮಾಡಲಿ ಎಂದು ಕುಳಿತಿದ್ದೆವು. ನಿಮ್ಮ ಘೋಷಣೆಗಳು ಇವತ್ತು ಅದು ಕೇವಲ ಬಜೆಟ್‌ಗೆ ಸೀಮಿತವಾಗಿಲ್ಲ. ತಮ್ಮ ಬಜೆಟ್ ಭಾಷಣದ ನಂತರವೂ ಕೂಡ, ಇವತ್ತು ನೀವು ಅನೇಕ ಘೋಷಣೆಗಳನ್ನು ಮಾಡಿದ್ದೀರಿ. ನಿಮ್ಮೆಲ್ಲರ ಒಟ್ಟಾರೆ ಅಭಿಪ್ರಾಯವೇನು ಇತ್ತೆಂದರೆ ನಿಮ್ಮ ಕುರ್ಚಿ ಇರುವಂಥಾದ್ದು, ಈ ರಾಜ್ಯದ ಜನರ ಮೇಲೆ ಗುರಿ ಇಲ್ಲ, ಮುಂದಿನ ಚುನಾವಣೆಯ ಮೇಲೆ ಗುರಿ ಇಟ್ಟುಕೊಂಡು ಇವತ್ತು ಈ ರೀತಿಯಾದಂಥ ಬಜೆಟ್ ಅನ್ನು ನೀವು ಮಂಡನೆ ಮಾಡಿದ್ದೀರಿ. ಇದರಿಂದ ರಾಜ್ಯದ ಜನರಿಗೆ

ಒಳ್ಳೆಯದಾಗುವುದಿಲ್ಲ, ಆದರೆ ಜುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರುವ ಬಜೆಟ್‌ಗೆ ನಾವು ಸಂಪೂರ್ಣವಾಗಿ ವಿರೋಧ ಮಾಡುವುದಕ್ಕೆ ಇಚ್ಛಿಸುತ್ತೇವೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಜನ್ಮ ದಿನದಂದು ಬಜೆಟ್‌ಗೆ ಉತ್ತರವನ್ನು ಕೊಟ್ಟಿದ್ದಾರೆ. ಅವರು ಇದಕ್ಕೆ ಬೆಂಬಲವನ್ನು ಕೊಡಿಯೆಂದು ಓಟು ಕೂಡ ಕೇಳುತ್ತಿದ್ದಾರೆ. ನಾವೆಲ್ಲಾ ವಿರೋಧಪಕ್ಷದವರು ಸಂಪ್ರದಾಯವಾಗಿ Financial Bill ಆಗಲಿ ಏನೇ ಆಗಲಿ ನಾವು ಯಾರು ಯಾವತ್ತು ವಿರೋಧ ಮಾಡಿದಂಥಾದ್ದು ಇಲ್ಲ. ಅವರಿಗೆ ಈ ವರ್ಷ ನಮ್ಮ ವಿರೋಧಪಕ್ಷದಲ್ಲಿ ಕುಳಿತಿರುವವರೆಲ್ಲರ ಪರವಾಗಿ ಈ ಹುಟ್ಟುಹಬ್ಬದ ಸಂದರ್ಭದಲ್ಲಿ ಶುಭಾಶಯಗಳನ್ನು ಮೊದಲು ನಾವು ಅರ್ಪಿಸುತ್ತೇವೆ. ಎರಡನೆಯದಾಗಿ, ಇವತ್ತು ನಮ್ಮ ಎಂ.ಎಲ್.ಎಗಳಿಗೆ ಏನಾದರೂ ಮಾಡಬೇಕೆಂದು ತಮ್ಮ birthday ದಿವಸ ತಿರುಪತಿ ತಿಮ್ಮಪ್ಪನ ದರ್ಶನವನ್ನು ಮಾಡಿ 500 ಕೊಠಡಿಗಳನ್ನು ಕಟ್ಟಬೇಕೆಂದು ದೊಡ್ಡ ತೀರ್ಮಾನವನ್ನು ಮಾಡಿ ಬಂದಿದ್ದೀರಿ. ನಿಮಗೆ ಖಂಡಿತವಾಗಿ ಆ ತಿರುಪತಿ ಭಗವಂತನೂ ಒಳ್ಳೆಯದು ಮಾಡಲಿ, ಅಲ್ಲಿಗೆ ಹೋಗುವ ಯಾತ್ರಿಕರಿಗೂ ಕೂಡ ಅನುಕೂಲವಾಗಲಿ, ಹಿಂದೆ ನಾವು ಇದರ ಬಗ್ಗೆ ಸಂಕಲ್ಪ ಮಾಡಿ, ಪ್ರಯತ್ನ ಮಾಡಿದ್ದೆವು, ಈಗ ತಾವು ಅದನ್ನು ಮುಂದುವರೆಸಿದ್ದೀರಿ, ಒಳ್ಳೆಯ ಕೆಲಸವಾಗಿದೆ. ತಾವು Airportಗೂ ಕೆಂಪೇಗೌಡರ ಹೆಸರನ್ನು ಇಡಲು ತೀರ್ಮಾನ ತೆಗೆದುಕೊಂಡಿದ್ದೀರಿ. ಆ ವಿಚಾರಕ್ಕೂ ತಮಗೆ ಅಭಿನಂದನೆಗಳನ್ನು ಹೇಳುತ್ತೇವೆ. ಆದರೆ ಒಂದು ಮುಖ್ಯವಾದ ವಿಚಾರವೇನೆಂದರೆ ಡಾ:ನಂಜುಂಡಪ್ಪನವರ ವರದಿ ಏನು ಇದೆ, ಆ ವರದಿಗೆ ತಾವು ಹಣ ಕೊಟ್ಟಿದ್ದೇವೆಂದು ಇಟ್ಟಿದ್ದೀರಿ, specific ಆಗಿ ಸುಮ್ಮನೆ generalize ಮಾಡಬೇಡಿ. ಪ್ರತಿಯೊಂದು ಕ್ಷೇತ್ರದಲ್ಲೂ ಯಾವ್ಯಾವುದು ಹಿಂದುಳಿದಿವೆ, ಈಗ ನೀವು package ಅನ್ನು cityಗಳಿಗೆ ಯಾವ ರೀತಿಯಾಗಿ ಕೊಟ್ಟಿದ್ದೀರಿ, ನಿಮ್ಮ ಬೇಕಾದ ಕ್ಷೇತ್ರಗಳಿಗೆ ಕೊಟ್ಟಿದ್ದೀರಿ, ಡಾ:ನಂಜುಂಡಪ್ಪನವರ ವರದಿಯ ಆಧಾರದ ಮೇಲೆಯೇ ನಾವು ಕನಕಪುರಕ್ಕೆ ಕೊಡಿ, ಇನ್ನೊಂದಕ್ಕೆ ಕೊಡಿ, ಮಾಗಡಿಗೆ ಕೊಡಿಯೆಂದು ಅಲ್ಲ. ಇದಕ್ಕೆ ನಿಮ್ಮದೇ ಆದಂಥ ಒಂದು criteria ಇದೆ. ಇದರಲ್ಲಿ highest ಯಾವುದು, lowest ಯಾವುದೆಂದು ಇದೆ. ಅದರ ಮೇಲೆ ಆದರೂ ಈ ವರ್ಷ ಈ ಬಜೆಟ್‌ನಿಂದ specific ಆಗಿ ಈ ಕ್ಷೇತ್ರಕ್ಕೆಂದು number 1, number 2, 3ಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, 2 ಕೋಟಿ ಕೊಟ್ಟಿದ್ದೇವೆ, 3 ಕೋಟಿ ರೂಪಾಯಿಗಳನ್ನು ಕೊಟ್ಟದ್ದೇವೆಂದು, 5 ಕೋಟಿ ಕೊಟ್ಟಿದ್ದೇವೆಂದು, ತಾವು ಹಿಂದೆ 600 ಕೋಟಿ ರೂಪಾಯಿಗಳೆಂದು ಏನು ಮಾತನಾಡಿದ್ದೀರಿ, ಅದರ ಮೇಲೆ ಇವತ್ತು ತಾವು ಏನಾದರೂ ಒಂದು ಉತ್ತರವನ್ನು ಕೊಟ್ಟು ಬಿಟ್ಟರೆ ಅದಕ್ಕಿಂತ ದೊಡ್ಡ ಉಪಕಾರವಿಲ್ಲ, ಏಕೆಂದರೆ ನೀವು ಘೋಷಣೆಯನ್ನು ಮಾಡಿಕೊಂಡು ಬರುತ್ತಿದ್ದೀರಿ.

ನಿಮಗೆ ನಾವು ಯಾವುದಕ್ಕೂ ಅಡ್ಡಿ ಮಾಡಿಲ್ಲ, ನೀವು ಯಾವ ಮಠಕ್ಕಾದರಳೂ ಕೊಡಿ, ಯಾವ ಜನಕ್ಕಾದರೂ ಕೊಡಿ, ನೀವು electionಗೆ ಹೋಗಬೇಕು, ನೀವು ಬದ್ಧರಾಗಿರಬೇಕು. ನೀವು ಬದ್ಧರಾಗಲಿಲ್ಲವೆಂದರೆ, ನಿಮ್ಮ chair ಹೆಚ್ಚು ಕಡಿಮೆಯಾಗುತ್ತದೆ. ಅದೆಲ್ಲಾ ನಮಗೆ ಗೊತ್ತಿದೆ, ಅದರೂ ಕೂಡ ದಯವಿಟ್ಟು ನಮಗೆ ಏನಾದರೂ ಚಿಂತನೆ ಮಾಡಿ, ತಾವು ಸಹಾಯ ಮಾಡಿ ಹಿಂದುಳಿದ ತಾಲ್ಲೂಕುಗಳಿಗೆ ಏನಾದರೂ ಒಂದು announcement ಮಾಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತೇನೆ.

ಡಾ:ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ನಾಲ್ಕನೇ ಬಜೆಟ್ ಅನ್ನು ಮಂಡಿಸಿದ್ದಾರೆ. ಇವರು ಸಮ್ಮಿಶ್ರ ಸರ್ಕಾರದಲ್ಲಿ 2 ಮತ್ತು ಬಿ.ಜೆ.ಪಿ. ಸರ್ಕಾರದ ನೇತೃತ್ವವನ್ನು ವಹಿಸಿ 2 ಬಜೆಟ್ ಅನ್ನು ಸದನದ ಮುಂದಿಟ್ಟಿದ್ದಾರೆ. ಎಲ್ಲಾ ಸಂದರ್ಭಗಳಲ್ಲೂ ಅವರು ಮಾತನಾಡುತ್ತಾ, ಅನೇಕ ಅಭಿವೃದ್ಧಿಯ ಕೆಲಸಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡಿ ಹಣಕಾಸಿನ ವಿಷಯವನ್ನು ಮಂಡನೆ ಮಾಡುವಾಗ, reply ಕೊಡುವಂಥ ಸಂದರ್ಭದಲ್ಲಿ ಇದಕ್ಕೆ ಯಾರು ಕಾರಣವೆಂದು ಹೇಳುತ್ತಾ, ತಮ್ಮ ಉತ್ತರವನ್ನು ಕೊಡುತ್ತಿದ್ದಾರೆ. ಅವರು ಉತ್ತರ ಕೊಡುವ ಸಂದರ್ಭದಲ್ಲಿ ಅನೇಕ ಪತ್ರಿಕೆಗಳ ಶಿರೋನಾಮೆಯನ್ನು, ಸಂಪಾದಕೀಯವನ್ನು ಉಲ್ಲೇಖ ಮಾಡಿ ಮಾತನಾಡುತ್ತಾ ಯಾರ್ಯಾರು ಕಾರಣವೆಂದು ಮಾತನಾಡಿದ್ದಾರೆ. ಈ ದೇಶದ ಆಡಳಿತ ವ್ಯವಸ್ಥೆಯನ್ನು ಒಂದು ಸಾರಿ ನೋಡಿದಾಗ ಬಹುತೇಕ ಎಲ್ಲಾ ಪ್ರಜಾಪ್ರಭುತ್ವದ ಆಧಾರ ಸ್ಥಂಭಗಳು ತಮ್ಮ ಯಥಾಸ್ಥಿತಿ ವಾದವನ್ನು ಮುಂದುವರೆಸಿಕೊಂಡು ಬಂದಿರುವುದರಿಂದ ದೇಶದಲ್ಲಿ ಇನ್ನೂ ಬಡತನ ಮತ್ತು ಅನಕ್ಷರತೆ ಮುಂದುವರೆಯುತ್ತಾ ಹೋಗುತ್ತಿದೆ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಯಾಥಾಸ್ಥಿತಿ ವಾದ, ನೀವು ಇದಕ್ಕೆ ಕಾರಣ 63ವರ್ಷಗಳೆಂದು ಹೇಳಿದ್ದೀರಿ. ನೀವೇ ಕಾರಣವೆಂದು ಹೇಳುತ್ತಿದ್ದಾರೆ. ದಿದೇವರಾಜ ಅರಸುರವರು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯಾಗಿದ್ದಾಗ ಮಾಡಿದಂಥ ಕ್ರಾಂತಿಕಾರಕವಾದಂಥ ಬದಲಾವಣೆ, ಯಾರ್ಯಾರು ಗುಲಾಮರಾಗಿ ಜೀತ ಪದ್ಧತಿಯನ್ನು ಮಾಡುತ್ತಿದ್ದರು, ಅವರನ್ನು ಅದರಿಂದ ಬಿಡಿಸಿ, ಪುನರ್ ವಸತಿ ಕಲ್ಪಿಸಿಕೊಂಡುವಂಥ ತೀರ್ಮಾನ, ಇದು ಒಂದು ಐತಿಹಾಸಿಕವಾದ ತೀರ್ಮಾನವಾಗಿದೆ. "ಉಳುವವನೇ ಭೂಮಿಯ ಒಡೆಯ" ಎನ್ನುವಂಥಾದ್ದು, ಸಾಲ ಮಾಡಿ ತೀರಿಸುವುದಕ್ಕೆ ಆಗದೇ ಶತಮಾನಗಳಿಂದಲೂ ಜೀತ ಪದ್ಧತಿಯಲ್ಲೇ ಮುಂದುವರೆಯುವಂಥ ಘಟನೆಗಳಿವೆ. ಈ ರೀತಿ ಆನೇಕ ಕ್ರಾಂತಿಕಾರಕ ಬದಲಾವಣೆ ಕಾಂಗ್ರೆಸ್ ಮತ್ತು ದಿದೇವರಾಜ ಅರಸುರವರ ಕಾಲದಲ್ಲಿ ಮಾಡಿರುವಂಥಾದ್ದನ್ನು ನಾವೆಲ್ಲಾ ಇಡೀ .. .. .

ಅಧ್ಯಕ್ಷರು : ತಾವು ಸ್ಪಷ್ಟೀಕರಣವನ್ನು ಕೇಳಿ, ಏಕೆಂದರೆ ಇನ್ನು ಬಹಳ ಜನ ಶಾಸಕರು ಮಾತನಾಡುವವರು ಇದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಇದರ ಜೊತೆಗೆ ಅದೇ ರೀತಿಯಲ್ಲಿ ಯಾವ ಯಥಾಸ್ಥಿತಿ ವಾದಗಳು ಮಲವನ್ನು ಒಬ್ಬ ಮನುಷ್ಯ ತಲೆ ಮೇಲೆ ಹೊರುತ್ತಿದ್ದ, ಆ ಮಲ ಹೊರುವ ಪದ್ಧತಿಯನ್ನೇ ರದ್ದು ಮಾಡಿದಂಥ ಐತಿಹಾಸಿಕ ತೀರ್ಮಾನವನ್ನು ದಿಃಬಸವಲಿಂಗಪ್ಪನವರು ಮತ್ತು ಶ್ರೀಮತಿ ಇಂದಿರಾಗಾಂಧಿಯವರು ರಾಜ್ಯ ಮತ್ತು ದೇಶದ ಉದ್ಧಗಲಕ್ಕೂ ಕೈಗೊಂಡಿರುವಂಥ ತೀರ್ಮಾನಗಳಾಗಿದೆ. ಇವತ್ತು ದಲಿತರು, ಹರಿಜನರು.. ..

ಅಧ್ಯಕ್ಷರು : ಮಾನ್ಯ ಮಹದೇವಪ್ಪನವರೆ, ತಾವು ಬಜೆಟ್ ಮೇಲೆ ಏನಾದರೂ ಸ್ಪಷ್ಟೀಕರಣವನ್ನು ಕೇಳುವುದಿದ್ದರೆ ಕೇಳಿ. ಇದನ್ನು ಬೇರೆ ದಿವಸಗಳಲ್ಲಿ ಮಾತನಾಡಬಹುದು.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಏನೆಂದರೆ ನಾವೆಲ್ಲರೂ ಪದೇ ಪದೇ ಕೇಳುತ್ತಿದ್ದೇವೆ. ಕಳೆದ ಬಜೆಟ್‌ನಲ್ಲಿ ಬೆಳಗಾಂನಲ್ಲಿ ಕೇಳಿದೆವು, 3,242 ಕಓಟಿ ರೂಪಾಯಿಗಳು SC/STಗೆ ಇದೆ. ಅದರಲ್ಲಿ 23% ಅಷ್ಟೆ ಖರ್ಚು ಮಾಡಿದ್ದಾರೆ. ಅಂದರೆ ಬರೇ 811 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದಕ್ಕೆ 3,242 ಕೋಟಿ ರೂಪಾಯಿಗಳನ್ನು ಇಟ್ಟಿರುವುದು, ಇದರಲ್ಲಿ ಖರ್ಚು 811 ಕೋಟಿ ರೂಪಾಯಿಗಳನ್ನು ಮಾಡಿರುವಂಥಾದ್ದು. ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ, ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇದು plan sizeಗೆ SC/ST ಜನಸಂಖ್ಯೆ ಎಷ್ಟು ಇರುತ್ತದೆ, ಅದಕ್ಕೆ ಅನುಗುಣವಾಗಿ ಇಡಬೇಕು ಮತ್ತು ಖರ್ಚು ಮಾಡಬೇಕೆನ್ನುವಂಥಾದ್ದು. ಇದು ರಾಜ್ಯಾಂಗ ಬದ್ಧವಾಗಿರುವಂಥಾದ್ದು, ಇದನ್ನು ಏನು ದಾನ ಕೊಟ್ಟು ಬಿಡುವಂಥಾದ್ದು ಅಲ್ಲ, ಮೀಸಲಾತಿ ಎಂದರೆ ದಾನ ಕೊಟ್ಟು ಬಿಡುತ್ತಿದ್ದೇವೆ, ಪುಕ್ಕಟೆಯಾಗಿ ಕೊಟ್ಟು ಬಿಡುತ್ತಿದ್ದೇವೆ. ನಾವು ಕೊಟ್ಟಿದ್ದು, ನಾವು ಮಾಡಿದ್ದು ಎನ್ನುವಂಥಾದ್ದು ಅಲ್ಲ. ಇದನ್ನು ದೇಶದ ಐತಿಹಾಸಿಕ ತೀರ್ಮಾನದ ಮುಖಾಂತರ ಮೀಸಲಾತಿಯನ್ನು ಒಪ್ಪಿಕೊಂಡು ಶತಮಾನದಿಂದಲೂ ತುಳಿತಕ್ಕೆ ಒಳಗಾಗಿರುವವರಿಗೆ ಕೊಡುತ್ತಿರುವಂಥಾದ್ದು. ಅದುದರಿಂದ ದಯಮಾಡಿ ಇದನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಬೇಕು. ಇನ್ನು backlog ಹುದ್ದೆಗಳನ್ನು ತುಂಬುವಂಥದ್ದರ ಬಗ್ಗೆ ನಾವು ಒತ್ತಾಯ ಮಾಡಿದೆವು, ಅದನ್ನು ಇದುವರೆಗೂ ಮಾಡಿಲ್ಲ. ಎರಡನೆಯದಾಗಿ, ಸ್ವಾತಂತ್ರ್ಯ ಹೋರಾಟಗಾರರಿಗೆ 3,000 ರೂಪಾಯಿಗಳ pension ಕೊಡುತ್ತಾರೆ. ಬೇರೆಬೇರೆ ರಾಜ್ಯಗಳಲ್ಲಿ 4-5-6 ಸಾವಿರ ರೂಪಾಯಿಗಳ pensionಅನ್ನು ಕೊಡುತ್ತಿದ್ದಾರೆ. ಈ ಬಗ್ಗೆ ಸ್ವಾತಂತ್ರ್ಯ ಹೋರಾಟಗಾರರೂ ಮನವಿ ಮಾಡಿದ್ದಾರೆ. ಅದನ್ನು ಹೆಚ್ಚು ಮಾಡಿ ಎಂದು ಕೇಳಿದ್ದೇವೆ. S.C./S.T.ಗಳು ತೆಗೆದುಕೊಳ್ಳತಕ್ಕಂಥ ಸಾಲಕ್ಕೆ ಇರುವಂಥ 6% ಬಡ್ಡಿಯನ್ನು ಕಡಿಮೆ ಮಾಡಿಕೊಡಿ ಎಂದು ಕೇಳಿದ್ದೇವೆ ಮತ್ತು ಅವರ ಸಾಲವನ್ನು ಮನ್ನಾ ಮಾಡಿಕೊಡಿ ಎಂದು ಕೇಳಿದ್ದೇವೆ. ಭಾಗ್ಯಜ್ಯೋತಿ ಯೋಜನೆಯಲ್ಲಿ ಒಂದು

ಲೈಟ್‌ಗೆ 3,000–5,000–10,000 ರೂ ಬೇಕಾಗುತ್ತದೆ, ಅದನ್ನು ಮನ್ನಾ ಮಾಡಿಎಂದು ಕೇಳಿದ್ದೇವೆ. ಅದ್ಯಾವುದನ್ನೂ ಕೂಡ ಮಾಡುತ್ತಿಲ್ಲ. ಗಂಗಾ ಕಲ್ಯಾಣ ಯೋಜನೆಯ ಸಾಲವನ್ನೂ ರದ್ದು ಮಾಡಿಕೊಡಿ ಎಂದು ಕೇಳಿದ್ದೇವೆ. ಇವುಗಳ್ಯಾವುದನ್ನೂ ಮಾಡದೇ, S.C./S.T., backward classes, ಬಂಜಾರಗಳು ಇವರ ಬಗ್ಗೆ ಏನೂ ಮಾತನಾಡುತ್ತಿಲ್ಲ. ದಯವಿಟ್ಟು ಇವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹುಟ್ಟುಹಬ್ಬದ ಈ ದಿನ ಗಂಭೀರವಾಗಿ ಪರಿಗಣಿಸಬೇಕು, ಇದು ರಾಜ್ಯಾಂಗಬದ್ಧವಾದಂಥ ಹಕ್ಕು ಆಗಿರುವುದರಿಂದ ಅದನ್ನು ಜಾರಿ ಮಾಡುವುದಕ್ಕೆ ಘೋಷಣೆ ಮಾಡಬೇಕು. ಕಳೆದ ನಾಲ್ಕು ಬಜೆಟ್‌ಗಳಿಂದಲೂ ಕೇಳುತ್ತಿದ್ದೇವೆ, ಅವರು ಚಕಾರ ಎತ್ತುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಬಜೆಟ್ ಮೇಲೆ ನಾನು ಮಾತನಾಡಲಿಲ್ಲ. ಏಕೆಂದರೆ, ಇದು ಚುನಾವಣಾ ಬಜೆಟ್ ಆಗಿರುವುದರಿಂದ ಅದರ ಬಗ್ಗೆ ನಾನು ಮಾತನಾಡಬಾರದು ಎಂದು ತೀರ್ಮಾನ ತೆಗೆದುಕೊಂಡೆ. ಕೇವಲ ಎರಡು ಕ್ಲಾರಿಪಿಕೇಷನ್‌ಗಳನ್ನು ಕೇಳಬೇಕಾಗಿದೆ, ಅವನ್ನು ಕೇಳುತ್ತೇನೆ. ಒಂದು ಪಡಿತರ ಚೀಟಿಯ ಬಗ್ಗೆ, ಈಗ 78 ಲಕ್ಷ ಪಡಿತರ ಚೀಟಿಯನ್ನು ಕೊಟ್ಟಿದ್ದಾರೆ. ಈಗ additional ಆಗಿ 20 ಲಕ್ಷ ಕೊಡುತ್ತೇವೆ ಎಂದು ಹೇಲಿದ್ದಾರೆ. ಆದರೆ ಇವತ್ತು 38 ಲಕ್ಷ ಅರ್ಜಿಗಳು ಬಂದಿವೆ ಎಂದು ಹೇಳುತ್ತಾರೆ. ಇದಕ್ಕೆ 750 ಕೋಟಿ ಹಣವನ್ನು ಇಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ ಇದಕ್ಕೆ ಒಟ್ಟು 1,050 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಹಾಗಾಗಿ, ಇನ್ನೂ 300 ಕೋಟಿ ರೂಪಾಯಿಗಳನ್ನು extra ಇಡುತ್ತಾರೆಯೇ ಅಥವಾ ಕೇವಲ ಚುನಾವಣಾ ದೃಷ್ಟಿಯಿಂದ 3 ತಿಂಗಳಲ್ಲಿ ಮಾಡುವುದಕ್ಕಾಗಿ ಇದು temporary arrangement ಎನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. 10,000 ಕಿಲೋಮೀಟರ್ ರಸ್ತೆ ವಿಷಯವೆಲ್ಲ ಈಗ ಬೇಡ, ಅದೆಲ್ಲ ಏನಾಗುತ್ತದೆ ಎಂದು ಮುಂದಿನ ಅಧಿವೇಶನದಲ್ಲಿ ಕೇಳೋಣ. ನಬಾರ್ಡ್‌ನಲ್ಲಿ 12, 13, 14 ಗಳಿಗೆ ಇವತ್ತಿನವರೆಗೂ ಹಣ release ಆಗುತ್ತಿದೆಯೋ, ಇಲ್ಲವೋ, ಅದಕ್ಕೆ ಕಾರಣಗಳೇನು ಎಂದು ಹೇಳಬೇಕು. ಏಕೆಂದರೆ L.O.C.ಯನ್ನು release ಮಾಡಬೇಕಾದರೆ ದುಡ್ಡು ತೆಗೆದುಕೊಂಡು release ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನನಗೆ ಒಂದು ಮಾಹಿತಿ ಇದೆ 12, 13, ನಲ್ಲಿ ಎಷ್ಟೆಷ್ಟು release ಮಾಡುತ್ತಿದ್ದಾರೆ, release ಮಾಡದೇ ಇರಲು 'ಕಾರಣವೇನು? ನಬಾರ್ಡ್‌ನಿಂದ ದುಡ್ಡು ಕೊಡುತ್ತಿಲ್ಲವೇ ಅಥವಾ ರಾಜ್ಯ ಸರ್ಕಾರದ ಕಡೆಯಿಂದೇನಾದರೂ ತೊಂದರೆ ಇದೆಯೇ? ನಬಾರ್ಡ್‌ನಲ್ಲಿ 11ರಲ್ಲೂ ಕೊಟ್ಟಿಲ್ಲ. ಅಂಥ ಪರಿಸ್ಥಿತಿ ಇದೆ. ನಾವು ಇದ್ದಂಥ ಕಾಲದಲ್ಲಿ ನಬಾರ್ಡ್ ಕೊಟ್ಟಂಥ ಹಣವನ್ನು

ವಾಪಸ್ಸು ಕೊಡುತ್ತಿದ್ದೆವು. ಅಷ್ಟಕ್ಕೆ L.O.C. ಕೊಡುತ್ತಿದ್ದೆವು. ಈಗ release ಮಾಡದೇ ಇರಲು ಕಾರಣವೇನು ಎನ್ನುವುದನ್ನು ದಯಮಾಡಿ ಹೇಳಿ.

ಇಂಧನ ಇಲಾಖೆಯಲ್ಲಿ ಬರುವ ನಾಲ್ಕು Escomಗಳಲ್ಲಿ 400 ಕೋಟಿ ರೂಪಾಯಿಗಳ ವಿದ್ಯುತ್ ಖರೀದಿಯ bill pending ಇದೆ ಎಂದು ಹೇಳುತ್ತಾರೆ. ಆ ಕಂಪನಿಗಳು ಬಾಗಿಲು ಹಾಕುವ ಪರಿಸ್ಥಿತಿ ಇದೆ. ಆ 400 ಕೋಟಿಯನ್ನು ಸರ್ಕಾರ ತುಂಬಿ ಕೊಡುತ್ತದೆಯೇ ಅಥವಾ ಆ ಕಂಪನಿಗಳು ಮುಳುಗುವ ಪರಿಸ್ಥಿತಿ ಬರುತ್ತದೆಯೇ ಎನ್ನುವುದನ್ನು ಹೇಳಬೇಕು. ಅಥವಾ ಇಂಧನ ಇಲಾಖೆ ರೇಟನ್ನೇನಾದರೂ ಜಾಸ್ತಿ ಮಾಡಿ ಆ ಕಂಪನಿಗಳ ನಷ್ಟವನ್ನು ತುಂಬುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೇ ಎನ್ನುವುದನ್ನು ಹೇಳಬೇಕು. ಆ ನಾಲ್ಕು ಕಂಪನಿಗಳವರು K.E.R.C. ಮುಂದೆ ಅರ್ಜಿ ಹಾಕಿ ಇಷ್ಟು ದರಕ್ಕೇ ವಿದ್ಯುತ್ತನ್ನು ಖರೀದಿ ಮಾಡಬೇಕು ಎನ್ನುವುದೇನಾದರೂ ಇದೆಯೇ ಎನ್ನುವುದನ್ನು ಹೇಳಬೇಕು. ಇಂಧನ ಇಲಾಖೆ 6,500 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡುತ್ತದೆ ಎಂದು ಹೇಳಿದ್ದೀರಿ. ಅದರಲ್ಲಿ ಬಳ್ಳಾರಿಯ 500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಯೋಜನೆಯನ್ನು ಹಿಂದಿನ ಸರ್ಕಾರ ಇದ್ದಂಥ ಕಾಲದಲ್ಲೇ ಮಾಡಿ ಕೆಲಸ ಮಾಡಿರುವುದಾಗಿದೆ. ಅದು ಹಿಂದಿನ ಸರ್ಕಾರದ ಯೋಜನೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ನವೀಕರಿಸಬಹುದಾದ ಇಂಧನ ಮೂಲಗಳಿಂದ 500 ಮೆಗಾವ್ಯಾಟ್ ಎಂದು ಹೇಳುತ್ತಾರೆ. ನವೀಕರಿಸಬಹುದಾದಂಥವು ಯಾವುವು ಮತ್ತು ಎಲ್ಲೆಲ್ಲಿ ನವೀಕರಿಸುತ್ತೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕು. ಬಿಜಾಪುರದ ಹತ್ತಿರ 4,000 ಮೆಗಾವ್ಯಾಟ್ ವಿದ್ಯುತ್ತಿನ ಯೋಜನೆಯನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದರಲ್ಲಿ agreement ಏನಾಗಿದೆ ಎನ್ನುವುದನ್ನು ದಯಮಾಡಿ ತಿಳಿಸಬೇಕು. ಅದರಿಂದ ನಮ್ಮ ರಾಜ್ಯಕ್ಕೆ ಎಷ್ಟು ಬರುತ್ತದೆ? ಅದನ್ನು ಪೂರ್ತಿಯಾಗಿ N.T.P.C ಯವರೇ ಮಾಡುತ್ತಾರೋ ಅಥವಾ K.P.C.L. ಕಡೆಯಿಂದ ಮಾಡುತ್ತಾರೋ ಎನ್ನುವುದನ್ನು ದಯಮಾಡಿ ತಿಳಿಸಬೇಕು. ಅದೇ ರೀತಿ ರಾಯಚೂರಿನಲ್ಲಿ 2,400 ಮೆಗಾವ್ಯಾಟನ್ನು B.H.E.L. ಮುಖೇನ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಸಂಪೂರ್ಣವಾಗಿ B.H.E.L.ನವರಿಗೇ ಕೊಡುತ್ತಾರೆಯೇ ಅಥವಾ ಯಾವ ರೀತಿ agreement ಆಗಿದೆ ಎನ್ನುವುದನ್ನು ದುಮಾಡಿ ಸದನಕ್ಕೆ ತಿಳಿಸಬೇಕು ಎಂದು ನಾನು ಮನವಿ ಮಾಡುತ್ತೇನೆ. 17 ಲಕ್ಷ I.P. setಗಳಿಗೆ ಸಬ್ಸಿಡಿ ಹನ ಸುಮಾರು 3,800 ಕೋಟಿ ರೂಪಾಯಿ ಬೇಕಾಗುತ್ತದೆ. ಆದರೆ 2,000 ಕೋಟಿ ರೂಪಾಯಿಗಳನನು ಮಾತ್ರ ಇಟ್ಟಿದ್ದಾರೆ. ಬಾಕಿ ಹಣವನ್ನು ಸರ್ಕಾರ ಯಾವ ಮಾಲದಿಂದ ಭರಿಸುತ್ತದೆ ಎನ್ನುವುದನ್ನು ದಯಮಾಡಿ ತಿಳಿಸಬೇಕು ಎಂದು ನಾನು ಮನವಿ ಮಾಡುತ್ತೇನೆ.

ಎಚ್. ವಿ-ಕೆ-ಸಿ/ಇ

ಡಾ: ಹೆಚ್.ಎಸ್.ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಬಜೆಟ್‌ಅನ್ನು ಮಂಡಿಸುವಾಗ ಆಗಲೇ ಅಥವಾ ಅದರ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಆಗಲೀ ಅರಣ್ಯ ಇಲಾಖೆಯ ವಿಚಾರದಲ್ಲಿ ಯಾವುದೇ ಪ್ರಸ್ತಾಪಗಳನ್ನು ಮಾಡಿಲ್ಲ. ಅರಣ್ಯ ಇಲಾಖೆಗೆ ಒಬ್ಬ ಸ್ವತಂತ್ರ್ಯ ಸಚಿವರು ಕೂಡ ಈ ಸರ್ಕಾರದಲ್ಲಿ ಇಲ್ಲ. ಕೊನೆಯ ಪಕ್ಷ ಅರಣ್ಯದ ಅಂಚಿನಲ್ಲಿರತಕ್ಕಂಥ ತಾಲ್ಲೂಕುಗಳ ಸಮಸ್ಯೆಗಳೇನಿವೆ, ಅಲ್ಲಿ ಕಾಡಿನ ಸಮಸ್ಯೆಗಳೇನಿವೆ, ರೈತರ ಬವಣೆ ಏನಿದೆ ಎನ್ನುವುದರ ಬಗ್ಗೆ ನಾವು ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಿದ್ದೇವೆ. ರಾಜ್ಯ ಉಚ್ಚ ನ್ಯಾಯಲಯ ಕೂಡ ಒಂದು Public Interest Litigation ಅನ್ನು ಸ್ವೀಕಾರ ಮಾಡಿ ಅದರ ಮುಖಾಂತರ ಸರ್ಕಾರಕ್ಕೆ notice ಅನ್ನು ಕೂಡ ಜಾರಿಗೊಳಿಸಿದೆ. ಆದರೆ ಇದುವರೆಗೂ ಅಲ್ಲಿ ಕಾಡುಗಳಿಂದ ಆನೆಗಳು ಗ್ರಾಮಗಳಿಗೆ ಬರದಂತೆ ತಡೆ ಕಂದಕಗಳನ್ನು ನಿರ್ಮಾಣ ಮಾಡುವುದಾಗಲೇ, ಕಾಡು ಪ್ರಾಣಿಗಳು ಗ್ರಾಮಗಳಿಗೆ ಬರೆದಂತೆ ತಡೆಗಟ್ಟುವ ನಿಟ್ಟಿನಲ್ಲಾಗಲೀ ಯಾವುದೇ ಅನುದಾನವನ್ನು ಇದಗಿಸುವಂಥ ಪ್ರಾಸ್ತಾಪ ಮಾಡಿಲ್ಲ. ಅದರ ಬಗ್ಗೆ ಬಜೆಟ್ ನಲ್ಲಾಗಲೀ, ಅದರ ಉತ್ತರದಲ್ಲಾಗಲೀ ಹಣಕಾಸು ಸಚಿವರೂ ಆದ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿಲ್ಲ. ದಯಮಾಡಿ ಕಾಡಿನ ಅಂಚಿನಲ್ಲಿರತಕ್ಕಂಥ ಪ್ರದೇಶಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ವಿಪರೀತವಾಗಿದ್ದು ಅಲ್ಲಿನ ರೈತರು ಬಹಳ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅಲ್ಲಿ ಒಂದು ಪರಿಹಾರ ಮಾರ್ಗದ ಬಗ್ಗೆ ಒಂದು ಘೋಷಣೆಯನ್ನು ಮಾಡಬೇಕು. ಕಳೆದ ಬಾರಿ ಬಜೆಟ್ ಮಂಡಿಸುವಾಗ ಮಲೈ ಮಹದೇಶ್ವರ ಬೆಟ್ಟದಲ್ಲಿ ಜನಪದ ಅಧ್ಯಯನ ಕೇಂದ್ರ ತೆರೆಯಲು 2 ಕೋಟಿ ರೂಪಾಯಿಗಳನ್ನು ಇಡುವುದಾಗಿ ಘೋಷಣೆ ಮಾಡಿದ್ದರು. ಈಗ ಹೇಗೆ ಸುಮಾರು ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೋ, ಅದೇ ರೀತಿ ಅವತ್ತು ಇದನ್ನೂ ಘೋಷಣೆ ಮಾಡಿದ್ದರು. ಆದರೆ ಪೂರಕ ಅಂದಾಜಿನಲ್ಲಿ ಎಲ್ಲೂ ಅದರ ಬಗ್ಗೆ ಪ್ರಸ್ತಾಪವಾಗಿಲ್ಲ. ಅಂದರೆ, ಮುಖ್ಯಮಂತ್ರಿಗಳು ಸದನದಲ್ಲಿ ಘೋಷಣೆ ಮಾಡಿದಂಥಾದ್ದಕ್ಕೆ ಹಣಕಾಸು ಇಲಾಖೆಯಲ್ಲಿ ಯಾವ ರೀತಿಯ ಮಾನ್ಯತೆ ಸಿಗುತ್ತಿದೆ ಎನ್ನುವ ಬಗ್ಗೆ ಒಂದು ಸಂಶಯ ಉಂಟಾಗುತ್ತಿದೆ. ಇತ್ತೀಚೆಗೆ ಅವರು ಮಹದೇಶ್ವರ ಬೆಟ್ಟಕ್ಕೆ ಬಂದಿದ್ದಂಥ ಸಂದರ್ಭದಲ್ಲಿ ಅಲ್ಲಿನ ಅಭಿವೃದ್ಧಿಗಾಗಿ 100 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ಸುಮಾರು 24 ಕೋಟಿ ರೂಪಾಯಿಗಳ revised estimate ನಲ್ಲಿ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರಿನ ಒಂದು ಯೋಜನೆ ಇದೆ. ಪೂರಕ ಅಂದಾಜು ಪಟ್ಟಿಯಲ್ಲಿ ಕೂಡ ಅದನ್ನು ಪ್ರಸ್ತಾಪ ಮಾಡಿಲ್ಲ. ಅದನ್ನು ಘೋಷಣೆ ಮಾಡಬೇಕು ಮತ್ತು ಜಾನಪದ ಅಧ್ಯಯನ ಕೇಂದ್ರಕ್ಕೆ 5 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಬೇಕು ಮತ್ತು ಆನೆ ತಡೆ ಕಂದಕಗಳನ್ನು ನಿರ್ಮಾಣ ಮಾಡುವುದಕ್ಕೆ ಘೋಷಣೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮೊದನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ 67ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರುತ್ತೇನೆ. ಅವರು 4 ಬಾರಿ ಬಜೆಟ್‌ಅನ್ನು ಮಂಡಿಸುವ ಮುಖಾಂತರ ಈ ರಾಜ್ಯದ ಅಭಿವೃದ್ಧಿಯ ಕನಸನ್ನು ಕಂಡಿದ್ದಾರೆ, ಬಹಳ ಸಂತೋಷ. ಆದರೆ ನಾಲ್ಕು ಬಾರಿ ಬಜೆಟ್ ಮಂಡಿಸಿದಂಥ ಸಂದರ್ಭಗಳಲ್ಲೂ ಕೂಡ ತೆಂಗು ಬೆಳೆಗಾರರ ಬಗ್ಗೆ ಅವರು ಗಮನ ಹರಿಸಿಲ್ಲ. ಇವತ್ತು ನನಗೆ ಬಹಳ ಸಂತೋಷವಾಗಿರುವ ವಿಚಾರವೇನೆಂದರೆ ಅಡಿಕೆ ಬೆಳೆಗಾರರಿಗೆ ಒಂದು ಕ್ವಿಂಟಾಲ್‌ಗೆ 9,000 ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದಾರೆ. ಈಗ ತೆಂಗಿನ ಬೆಳೆಗಾರರೂ ಬಹಳ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ದಯವಿಟ್ಟು ಇವತ್ತು ಮಾನ್ಯ ಮುಖ್ಯಮಂತ್ರಿಗಳು ತಮ್ಮ 67ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ತೆಂಗು ಬೆಳೆಗಾರರಿಗೆ ತಮ್ಮದೇ ಆದಂಥ ಒಂದು ಕೊಡುಗೆಯನ್ನು ಕೊಡಬೇಕು ಎಂದು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಎರಡನೆಯ ವಿಚಾರವೆಂದರೆ, ನನ್ನ ಕ್ಷೇತ್ರ ಶಾಶ್ವತ ಬರಗಾಲಕ್ಕೆ ಒಳಗಾಗಿದೆ. ಕಳೆದ ವರ್ಷ ಎಬ್ಬೆ ಫಾಲ್ಸ್ ಯೋಜನೆಗೆ ಬೊಮ್ಮಾಯಿಯವರು ಭರವಸೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಈ ವರ್ಷ ಹಣವನ್ನು ಇಡುವುದಾಗಲೀ ಅಥವಾ ಅದರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತೇವೆ ಎನ್ನುವ ವಿಚಾರವನ್ನಾಗಲೀ ತಾವು ಪ್ರಸ್ತಾಪ ಮಾಡಿಲ್ಲ.

ನನ್ನ ಮೂರನೇ ವಿಚಾರವೆಂದರೆ, ಕುವೆಂಪು ವಿಶ್ವವಿದ್ಯಾಲಯದ ಉಪಕೇಂದ್ರ ಕಡೂರಿನಲ್ಲಿದೆ. ಅದಕ್ಕೆ ಕಳೆದ ತಮ್ಮ ಎರಡು ಬಜೆಟ್‌ಗಳಲ್ಲಿ ಎರಡೆರಡು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಆದರೆ ಈ ವರ್ಷ ಅದಕ್ಕೆ ಯಾವುದೇ ಹಣವನ್ನು ಇಡುವಂಥ ಪ್ರಯತ್ನ ಮಾಡಿಲ್ಲ. ಏತಕ್ಕೋಸ್ಕರ ಇಟ್ಟಿಲ್ಲ ಎನ್ನುವ ಬಗ್ಗೆ ತಾವು ಗಮನ ಹರಿಸಬೇಕು. ಈಗಾಗಲೇ ಅದು ಕುವೆಂಪು ವಿಶ್ವವಿದ್ಯಾಲಯದ ಉಪಕೇಂದ್ರವಾಗಿ ಒಳ್ಳೆಯ result ಬರುತ್ತಿದೆ. ಅದರಿಂದ ಆ ಭಾಗದಲ್ಲಿರುವಂಥ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ. ಅದಕ್ಕೆ ಹಣವನ್ನು ಕೊಡಲಿಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ವಿಶೇಷವಾದ ಅಭಿನಂದನೆಯನ್ನು ಪಂಡರಾಪುರದ ಭಕ್ತಾದಿಗಳ ಪರವಾಗಿ ಸಲ್ಲಿಸುತ್ತಿದ್ದೇನೆ. ಇಲ್ಲಿಯವರೆಗೆ ಸತತವಾಗಿ 4–5 ವರ್ಷಗಳಿಂದ ಪಂಡರಾಪುರದಲ್ಲಿ ಯಾತ್ರಿ ನಿವಾಸ ಕಟ್ಟಲಿಕ್ಕೆ ನಾವು ಹಣವನ್ನು ಕೇಳುತ್ತಿದ್ದೆವು. ಆದರೆ, ಈ ವರ್ಷ ತಾವು ಒಂದು ಕೋಟಿ ರೂಪಾಯಿಗಳನ್ನು ಏನು ಇವತ್ತು ಕೊಟ್ಟಿದ್ದೀರಿ, ಅದಕ್ಕೆ ನಾನು ಸ್ವಾಗತ ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಎರಡನೆಯದಾಗಿ, ತಾವು ಬೆಳಗಾಂನಲ್ಲಿ Medical College ಅನ್ನು ಮೇಲ್ದರ್ಜೆಗೇರಿಸಿದ್ದೀರಿ ಮತ್ತು 12.5 ಕೋಟಿ ರೂಪಾಯಿಗಳನ್ನು ಆ building ಸಲುವಾಗಿ ಕೊಟ್ಟಿದ್ದೀರಿ. ನಾನು ಜಿಲ್ಲಾ

ಉಸ್ತುವಾರಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಆ ಹಣವನ್ನೇನು ಬಿಡುಗಡೆ ಮಾಡಿದ್ದಾರೆ, ಬೊಮ್ಮಾಯಿಯವರು ಬೆಳಗಾಂ ಜಿಲ್ಲೆಯ ಎಲ್ಲಾ ಶಾಸಕರ ಮೀಟಿಂಗ್ ಕರೆದು ಆ ಹಣ ಸರಿಯಾಗಿ ಖರ್ಚಾಗುವ ಹಾಗೆ, ವ್ಯವಸ್ಥಿತವಾಗಿ ಆ ಕಾರ್ಯಕ್ರಮವಾಗುವ ಹಾಗೆ ದಯವಿಟ್ಟು ತಾವು ನೋಡಿಕೊಳ್ಳಬೇಕು. ಏಕೆಂದರೆ, ಆ ಹಣ ಖರ್ಚಾಗುತ್ತಿಲ್ಲ. ಈಗಾಗಲೇ building ಗೆ ಕೂಡ ತಾವು 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಆ ಹಣ ಸಹ ಸರಿಯಾಗಿ ಖರ್ಚಾಗಿಲ್ಲ. ಈ 12 ಕೋಟಿ ರೂಪಾಯಿಗಳನ್ನು ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದ್ದಾರೆ, ಅದರ ಬಗ್ಗೆ ತಕ್ಷಣ ಮಿಟಿಂಗ್ ಕರೆದು, ಸರಿಯಾಗಿ ಹಣ ಬಿಡುಗಡೆಯಾಗುವ ಹಾಗೆ ತಾವು ಕಾಳಜಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ, ಕುಡಚಿ ಮತ್ತು ಬಾಗಲಕೋಟೆಯಲ್ಲಿ ಹೊಸ ರೈಲ್ವೆ ಲೈನ್ ಹಾಕಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂನಲ್ಲಿ 50% ಹಣವನ್ನು ಕೊಡುತ್ತೇನೆಂದು ಹೇಳಿದ್ದರು. ನಾನು ನಾಲ್ಕೂ ಸಚಿವರಿಂದ ಕೇಂದ್ರದ 50% ಹಣ ಕುಡಚಿ, ಬಾಗಲಕೋಟೆ ರೈಲ್ವೆ ಲೈನ್‌ಗೆ ಬಿಡುಗಡೆ ಮಾಡಬೇಕೆಂದು ಕೇಂದ್ರದ ರೈಲ್ವೆ ಸಚಿವರಿಗೆ ಪತ್ರ ಬರೆಸಿದ್ದೇನೆ. ರೈಲ್ವೆ ಸಚಿವರು, ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಈ ನಾಲ್ಕೂ ಯೋಜನೆಗಳಿಗೆ ಏನು ಹಣ ಕೊಟ್ಟಿದ್ದಾರೆ, ಈ ಬಗ್ಗೆ ಅವರಿಂದ ನನಗೊಂದು ಪತ್ರ ಬರಬೇಕೆಂದು ಹೇಳಿದರು. ಅದಕ್ಕೆ ನಾನು ನಮ್ಮ ಬಜೆಟ್‌ನ English copy ಯನ್ನು ಕೂಡ ಅವರಿಗೆ ಕೊಟ್ಟಿದ್ದೇನೆ. ದಯವಿಟ್ಟು ತಕ್ಷಣ ಕೇಂದ್ರ ರೈಲ್ವೆ ಸಚಿವರಿಗೆ ಕೇಂದ್ರದಿಂದ 50% ಹಣ ಬಿಡುಗಡೆ ಮಾಡುವುದಕ್ಕೆ ತಾವು ಪತ್ರ ಬರೆಯಬೇಕೆಂದು ನಿಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು ಹಲವಾರು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ರೈತಾಪಿ ಜನರಿರಬಹುದು, SC/ST ವರ್ಗವಿರಬಹುದು ಇವರಿಗೆ ಅನೇಕ ರೀತಿಯ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅವರಿಗೆ 67ನೇ ಹುಟ್ಟುಹಬ್ಬದ ಶುಭಾಶಯ ಕೋರುತ್ತೇನೆ. ನಾವು ನಿಮಗೆ ಅಭಿನಂದನೆಯನ್ನು ಸಲ್ಲಿಸುವ ಸಮಯದಲ್ಲಿ ತಾವು ನಮ್ಮೆಲ್ಲ ಶಾಸಕರಿಗೆ ಉಡುಗೊರೆಯಾಗಿ ಕೊಡಬೇಕು. ಶಾಸಕರ ನಿಧಿಯನ್ನು ಒಂದು ಕೋಟಿ ರೂಪಾಯಿಗಳಿಂದ ಒಂದೂವರೆ ಕೋಟಿ ರೂಪಾಯಿಗಳಿಗೆ ಏರಿಸಬೇಕು. ಎಲ್ಲಾ ಶಾಸಕರಿಗೂ ಈ ರೀತಿಯ ಉಡುಗೊರೆಯನ್ನು ಕೊಡಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಬೆಂಗಳೂರು ನಾಗರಿಕ ಪರವಾಗಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, Metro Raill ಏನು ಮಾಡುತ್ತಿದ್ದೀರಿ, ಅದರಿಂದ ಕೇವಲ central ಭಾಗಕ್ಕೆ ಮಾತ್ರ ಅನುಕೂಲವಾಗುತ್ತದೆ.

Mono Rail ಅನ್ನು ಬೆಂಗಳೂರಿಗೆ ಮಾಡುವುದಿಲ್ಲವೆಂದರೆ, Metro Rail ಮಾಡಿದರೆ ಪ್ರಯೋಜನವಾಗುವುದಿಲ್ಲ. ಏಕೆಂದರೆ, ತಾವು ಇನ್ನೂ 500, 1000 BTS Bus ಗಳನ್ನು ಸಂಚಾರಕ್ಕೆ ಬಿಡುಗಡೆ ಮಾಡುತ್ತಿದ್ದೀರಿ. ಆದರೆ, ಬೆಂಗಳೂರಿನಲ್ಲಿ ಅಷ್ಟು ದೊಡ್ಡದಾದ, ಅಗಲವಾದ ರಸ್ತೆಗಳಿಲ್ಲ. ದಯವಿಟ್ಟು Mono Rail ವಿಚಾರದಲ್ಲಿ ತಾವು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಅಕ್ರಮ-ಸಕ್ರಮ ವಿಚಾರದಲ್ಲಿ ಹೇಳುವುದಾದರೆ, BDA ಜಾಗ ಎಂದು notification ಆಗಿದೆ, ಆದರೆ ಆ notification ಗಿಂತ ಮೊದಲೇ ಹಲವಾರು ಜಾಗಗಳಲ್ಲಿ ಬಡಾವಣೆಗಳು, ಮನೆಗಳು ನಿರ್ಮಾಣವಾಗಿವೆ. ಆ ವಿಚಾರದಲ್ಲಿ BDA ಯಲ್ಲಿ Planning Department ನವರ report ಇದೆ. ಅವರು notification ಗಿಂತ ಮೊದಲೇ ಮನೆಗಳು ನಿರ್ಮಾಣವಾಗಿವೆ ಎಂದು report ಕೊಟ್ಟಿದ್ದಾರೆ. ಆದ್ದರಿಂದ, ಅದನ್ನು regularize ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇನ್ನು, property tax ಬಗ್ಗೆ ನಾನು ಬೆಳಗಾಂ ಅಧಿವೇಶನದಲ್ಲಿ ಮಾತನಾಡಿದೆ. ಆಗ ಮುಖ್ಯಮಂತ್ರಿಯವರು ಮಾತನಾಡುತ್ತಾ, property tax ಜಾಸ್ತಿಯಾಗುವುದಿಲ್ಲ, SAS ಪ್ರಕಾರ 2000 ಎಂದು ಹೇಳಿ ಭರವಸೆ ಕೊಟ್ಟರು. ಆದರೆ, ಅನ್ಯಾಯವೇನಾಗಿದೆ ಎಂದರೆ, tax ಅನ್ನು Zone wise ಮಾಡಿದ್ದಾರೆ.

ಅಧ್ಯಕ್ಷರು : SAS ಬಗ್ಗೆ ಇಲ್ಲಿ ಈಗ discussion ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಅದರಿಂದ tax ಹೆಚ್ಚಾಗಿದೆ. Commercial ಗೆ ಏನು ಮಾಡಿದ್ದಾರೆಂದರೆ,. . . .

ಅಧ್ಯಕ್ಷರು : SAS ಬಗ್ಗೆ ಈಗ discussion ಮಾಡಿದರೆ ಹೇಗೆ? ಈಗ ಕೇವಲ ಬಜೆಟ್ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಕೆ.ಜೆ. ಜಾರ್ಜ್ : ಈ ಇಲಾಖಾ ಖಾತೆಯನ್ನು ಮುಖ್ಯಮಂತ್ರಿಯವರೇ ನಿರ್ವಹಿಸುತ್ತಿದ್ದಾರೆ. ಆದ ಅನ್ಯಾಯವನ್ನು ಸರಿಪಡಿಸಬೇಕಾದರೆ ನಾನು ಇಲ್ಲಿಯೇ ಕೇಳಬೇಕಲ್ಲವೇ? ಬೇರೆಲ್ಲಿ ಕೇಳುವುದಕ್ಕಾಗುತ್ತದೆ?

ಅಧ್ಯಕ್ಷರು : SAS ವಿಚಾರವನ್ನು ಬಜೆಟ್ ಚರ್ಚೆ ಸಂದರ್ಭದಲ್ಲಿ ಕೇಲುವುದಲ್ಲ. SAS bill ತಂದಾಗ ಅದು ಅಂದೇ discussion ಆಗಿತ್ತು.

ಶ್ರೀ ಕೆ.ಜೆ. ಜಾರ್ಜ್ : ಮೊದಲು ಇಲಾಖಾವಾರು discussion ಆಗುತ್ತಿತ್ತು. ಈಗ ಇಲಾಖಾವಾರು discussion ಆಗುತ್ತಿಲ್ಲ. ನಾನು ಇವೆತ್ತು ಬಜೆಟ್ ಮೇಲೆಯೇ discussion ಮಾಡಬೇಕಾಗುತ್ತದೆ.

ಅಧ್ಯಕ್ಷರು : ಕೇವಲ ಸ್ಪಷ್ಟೀಕರಣ ಕೇಳಿ.

ಶ್ರೀ ಕೆ.ಜೆ. ಜಾರ್ಜ್ : ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ, ತಾವು ದಯವಿಟ್ಟು ಅಲ್ಲಿ ಸರಿಪಡಿಸಬೇಕಾಗಿದೆ. ಅನ್ಯಾಯವಾಗಿದೆ, ತಾವು ಅದನ್ನು ಗಮನಕ್ಕೆ ತೆಗೆದುಕೊಂಡು ಸರಿಪಡಿಸಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ರಾಜ್ಯದ ಅನೇಕ ಮಠ ಮಾನ್ಯಗಳಿಗೆ ಹಣಕಾಸು ನೆರವನ್ನು ಒದಿಗಿಸಿ ಕಒಟ್ಟಿದ್ದಾರೆ. ಅದನ್ನೊಂದು ಕಡೆ ನಾವು ಸ್ವಾಗತ ಮಾಡುತ್ತೇವೆ. ಏಕೆಂದರೆ, ಮಠ ಮಾನ್ಯದವರು ಶಿಕ್ಷಣಕ್ಕೆ ಪೂರಕವಾದಂಥ ಕೆಲಸವನ್ನು ಮಾಡುತ್ತಿದ್ದಾರೆ. ಅದೇ ತೆರನಾಗಿ, ಕೊಪ್ಪಳ ಜಿಲ್ಲೆಯಲ್ಲಿ ಗವಿಸಿದ್ದೇಶ್ವರ ಮಠವಿದೆ. ಅಲ್ಲಿ ಸುಮಾರು 3000 ಮಕ್ಕಳಿರುವ ಹಾಸ್ಟೆಲ್ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು 5 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಡಾ: ನಂಜುಂಡಪ್ಪ ವರದಿಯಲ್ಲಿರುವಂತೆ specific ಆಗಿ ಅನುದಾನವನ್ನು ಕೊಡಬೇಕೆಂದು ನಾವೆಲ್ಲರೂ ಒತ್ತಾಯ ಮಾಡಿದ್ದೇವೆ. ಹೈದಾರಾಬಾದ್–ಕರ್ನಾಟಕ ಪ್ರದೇಶದಲ್ಲಿರುವ ಕೊಪ್ಪಳದಲ್ಲಿ ಅಂತರರಾಷ್ಟ್ರೀಯ ಮಟ್ಟದ ಒಂದು ಕ್ರೀಡಾಂಗಣ ನಿರ್ಮಾಣವಾಗುತ್ತಿದ್ದು, ಈಗಾಗಲೇ ಅದಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದಕ್ಕೆ ಇನ್ನೂ ಏಳೂವರೆ ಕೋಟಿ ರೂಪಾಯಿಗಳ estimate ಅನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಅದನ್ನು ನಂಜುಂಡಪ್ಪ ವರದಿಯಲ್ಲಿ ಸೇರಿಸಿ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣವನ್ನು ನಿರ್ಮಾಣ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ, ಬೈ–ಪಾಸ್ ರಸ್ತೆ ಮಾಡಬೇಕೆಂದು ಲೋಕೋಪಯೋಗಿ ಇಲಾಖೆಗೆ 2–3 ಸಲ ನಾವು ಪ್ರಶ್ನೆಯನ್ನು ಕಳುಹಿಸಿದ್ದೆವು. ಈಗಾಗಲೇ ನಮ್ಮ High way No.63 ಯಲ್ಲಿ Main bridge ಕುಸಿದಿದೆ ಸಾವಿರಾರು ಲಾರಿಗಳು ರಾತ್ರಿ 10 ಗಂಟೆಯ ನಂತರ ಸಿಟಿಯಲ್ಲಿ ಓಡಾಡುತ್ತಿರುವುದರಿಂದ ನಾವು ಸಂಚರಿಸುವುದಕ್ಕೆ ಸಾಧ್ಯವೇ ಇಲ್ಲ. City ಯೊಳಗಡೆಯ ರಸ್ತೆ congested ಇದೆ. ಆ ಕಾರಣಕ್ಕಾಗಿ ಬೈ–ಪಾಸ್ ರಸ್ತೆಯನ್ನು ಮಾಡಲು ಮಾನ್ಯ ಮುಖ್ಯಮಂತ್ರಿಯವರು ಈ ಸಂದರ್ಭದಲ್ಲಿ announce ಮಾಡಬೇಕೆಂದು ತಮ್ಮ ಮೂಲಕ ಹೇಳಲಿಕ್ಕೆಬಯಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿ . . . . .

(ಗೊಂದಲ)

ಅಧ್ಯಕ್ಷರು : ಎಲ್ಲರೂ ಎಲ್ಲಾ ವಿಷಯದ ಮೇಲೆ ಮಾತನಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಇದು ಬಹಳ ಉತ್ತಮವಾದ ಬಜೆಟ್ ಆಗಿದೆ. ಈ ಸಂದರ್ಭದಲ್ಲಿ ನಾನು ನನ್ನ ಪರವಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ಪ್ರಕಾರವಾಗಿ, ಬಸವಕಲ್ಯಾಣದಲ್ಲಿ 12ನೇ ಶತಮಾನದಲ್ಲಿ ಬಸವಣ್ಣನವರು ತಂದಂಥ ಸಮಾನತೆ ತಡೆಹಿಡಿದುಕೊಂಡಿತ್ತು, ಬಹಳ ವರ್ಷಗಳಿಂದ ಬಸವ ಉತ್ಸವ ಮಾಡಬೇಕೆಂಬ ಪರಿಕಲ್ಪನೆ ಇತ್ತು. ಹಿಂದಿನ ಸರ್ಕಾರವಾಗಲಿ, ಹಿಂದಿನ ಮುಖ್ಯಮಂತ್ರಿಯವರಿಂದಾಗಲಿ ಈ ಬೇಡಿಕೆ ಈಡೇರಿರಲಿಲ್ಲ. ಆದರೆ, ಇವತ್ತು ನಮ್ಮ ಶ್ರೀಮಾನ್ ಯಡಿಯೂರಪ್ಪನವರು ಬಸವ ಉತ್ಸವಕ್ಕಾಗಿ ಬಸವ ಜಯಂತಿಯ ದಿನದಂದು 50 ಲಕ್ಷ ರೂಪಾಯಿಗಳನ್ನು Government Order ಮುಖಾಂತರ ಬಿಡುಗಡೆ ಮಾಡುತ್ತಿದ್ದಾರೆ, ನಮ್ಮ ಬೀದರ್ ಜಿಲ್ಲೆ ಮತ್ತು ಎಲ್ಲ ವಿಶೇಷವಾಗಿ ಬಸವ ಬಳಗದ ಪರವಾಗಿ ನಾನು ನಮ್ಮ ಬಸವಕಲ್ಯಾಣ ಕ್ಷೇತ್ರದ ಶಾಸಕನಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆ ಸಲ್ಲಿಸತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪುರ್ : ಡಾ:ನಂಜುಂಡಪ್ಪ ವರದಿಗೆ ಸಂಬಂಧಿಸಿದಂತೆ 1100 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಒಂದು statement ಕೊಟ್ಟಿದ್ದರು. ಆದರೆ, ಕಳೆದ ವರ್ಷ, ಅದರ ಆಚೆ ವರ್ಷ ಎರಡು ಸೇರಿ 4000 ಕೋಟಿ ರೂಪಾಯಿಗಳಷ್ಟು ಏನು ಖರ್ಚಾಗಬೇಕಾಗಿತ್ತು. ಆದರೆ, 1100 ಕೋಟಿ ರೂಪಾಯಿ ಖರ್ಚಾಗಿದೆ. ಅದೂ ಕೂಡ regular scheme ಗಳಿಗೆ ಮಾತ್ರ ಖರ್ಚಾಗಿದೆ. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರು, ಡಾ:ನಂಜುಂಡಪ್ಪ ವರದಿಯ ಪ್ರಕಾರ ವಿಶೇಷವಾಗಿ ಹಣವನ್ನು ನೀಡಬೇಕು. ಏಕೆಂದರೆ, ಅಲ್ಲಿ ಆರ್ಥಿಕ ಪರಿಸ್ಥಿತಿ ಸರಿ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು) : ಎಲ್ಲ ಹಿರಿಯ ಸದಸ್ಯರಿಗೆ, ನನ್ನ ಒಂದು ಸಲಹೆ ಏನೆಂದರೆ, ಹೇಗೂ ನಾವಿಲ್ಲಿ Vote on account ಮಾಡುತ್ತಿರುವುದು. ಲೋಕಸಭಾ ಚುನಾವಣೆ ಘೋಷಣೆಯಾಗುತ್ತಿದೆ. ಯಾವುದೇ ಸರ್ಕಾರ ಬರಲಿ, ಇವತ್ತಿನ ಆರ್ಥಿಕ ಪರಿಸ್ಥಿತಿಯ ಹಿನ್ನಡೆಯಲ್ಲಿ ಹೆಚ್ಚುವರಿ ಅನುಕೂಲತೆಗಳಾಗಬಹುದು, ಹೆಚ್ಚು ಬೇರೆ ಬೇರೆ ಕಾರ್ಯಕ್ರಮ ಮಾಡುವುದಕ್ಕೆ ಅನುಕೂಲಗಳಾಗಬಹುದು. ಶಾಸಕರ ನಿಧಿ ಇರಬಹುದು, ಮತ್ತೊಂದಿರಬಹುದು, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಹೇಗೂ 4–5 ದಿವಸಗಳಲ್ಲಿ ಲೋಕಸಭಾ ಚುನಾವಣೆ ಘೋಷಣೆಯಾಗುತ್ತಿದೆ ಹಾಗಾಗಿ ಯಾವುದೂ ಕಾರ್ಯರೂಪಕ್ಕೆ ಬರುವುದಿಲ್ಲ. ಇವತ್ತೇನು vote on account ಇದೆ ಅಷ್ಟಕ್ಕೆ ಮಾತ್ರ ತಾವು ಮಂಜೂರಾತಿಯನ್ನು ನೀಡಿದರೆ, ಹೇಗೂ after election ನಾವು immediate ಆಗಿ ಸೇರುತ್ತಿದ್ದೇವೆ. ಆಗ ಕುಳಿತುಕೊಂಡು detail ಆಗಿ ಚರ್ಚಿಸಿ, ಹಣಕಾಸಿನ ಇತಿಮಿತಿ ನೋಡಿಕೊಂಡು ಯಾವುದನ್ನು ಹೇಗೆ ಮಾಡಬಹುದೆಂಬ

ಬಗ್ಗೆ ನಾನು ಪ್ರಾಮಾಣಿಕವಾಗಿ ನಿಮ್ಮ ಸಲಹೆಗಳನ್ನು ಸ್ವೀಕಾರ ಮಾಡಿದ್ದೇನೆ. ನೀವು ಈಗ ಏನು ಹೇಳಿದ್ದೀರಿ ಅದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಅದಕ್ಕೋಸ್ಕರ ದಯಮಾಡಿ ತಾವು ಸಹಕರಿಸಿ. ನಾನು ವಿಧಾನ ಪರಿಷತ್ತಿಗೂ ಹೋಗಿ ಚರ್ಚೆಗಳಲ್ಲಿ ಸ್ವಲ್ಪ ಭಾಗವಹಿಸಬೇಕು. ನಾನು ಅಲ್ಲಿ ಭಾಗವಹಿಸುತ್ತಿಲ್ಲವೆಂದು ಅಲ್ಲಿನ ಮಾನ್ಯ ಸದಸ್ಯರಿಗೆ ಬೇಸರವಿದೆ. ದಯಮಾಡಿ, vote on account pass ಮಾಡಿಕೊಟ್ಟರೆ ಒಳ್ಳೆಯದು. (ಗೊಂದಲ)

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಶಾಸಕರ ನಿಧಿಯ ಬಗ್ಗೆ ಪೂರಕ ಅಂದಾಜಿನಲ್ಲಿ 100 ಕೋಟಿ ರೂಪಾಯಿಗಳನ್ನಿಡಲಾಗಿದೆ. ಆದ್ದರಿಂದ, ಅವರ ವೆಚ್ಚಗಳನ್ನು ನೋಡಿಕೊಂಡು ಕೊಡುವುದಕ್ಕೆ ಅವರು ಒಂದು ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಈಗೇನು ನಾವು ಮಂಜೂರಾತಿ ಕೊಟ್ಟಿದ್ದೇವೆ ಏನೂ ತೊಂದರೆ ಇಲ್ಲ.

ಅಧ್ಯಕ್ಷರು : ಒಂದೂವರೆ ಕೋಟಿ ರೂಪಾಯಿ ಕೇಳಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದಾಗಲ್ಲ ಸಾರಗ. ಈಗ ಇರುವ ಹಣಕಾಸಿನ ಸ್ಥಿತಿಯಲ್ಲಿ ಅದು ಸಾಧುವಿಲ್ಲ. (ಗೊಂದಲ) ದಯಮಾಡಿ, ಒಂದು ಸಂಗತಿಯನ್ನು ಅರ್ಥಮಾಡಿಕೊಳ್ಳಿ. ಉದಾಹರಣೆಗೆ Corporation ಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ಆದರೆ, 100 ಕೋಟಿ ರೂಪಾಯಿಗಳ ಪ್ಲಾನ್ ಮಾಡಿ ಎಂದು ಹೇಳಿದ್ದೇನೆ. ಹಾಗೆಯೇ ತಾವೇನು ಎಂಎಲ್ಎಗಳಿದ್ದೀರಿ, ಒಂದು ಕೋಟಿ ರೂಪಾಯಿಗಳ ಬದಲು ಒಂದೂವರೆ ಕೋಟಿ ರೂಪಾಯಿಗಳಿಗೆ work proposal ಕೊಟ್ಟರೆ ನೀವು ಖರ್ಚು ಮಾಡಿರುವ ಒಂದು ಕೋಟಿ ರೂಪಾಯಿಗಳನ್ನು ಈ ವರ್ಷದ ಕೊನೆಯೊಳಗೆ ನಾವು ಪೂರ್ತಿ ಭರಿಸುತ್ತೇವೆ. Immediately ಇನ್ನುಳಿದ 50 ಲಕ್ಷ ರೂಪಾಯಿಗಳಿಗೆ ಕೆಲಸವಾಗುತ್ತಿರುತ್ತದೆ. ಇಲ್ಲದಿದ್ದರೆ, ಈ formalities ನಿಂದ delay ಆಗುತ್ತದೆನ್ನುವುದಕ್ಕೋಸ್ಕರ ನಾವು ಕೊಡುವುದು ಒಂದು ವರ್ಷಕ್ಕೆ ಒಂದೇ ಕೋಟಿ ರೂಪಾಯಿ. (ಗೊಂದಲ) ಒಂದೂವರೆ ಕೋಟಿ ರೂಪಾಯಿಗಳ work ಗೆ proposal ಕೊಟ್ಟರೆ ಒಂದು ಕೋಟಿ ರೂಪಾಯಿಗಳ work ಆದರೂ ಆಗುತ್ತದೆ. Payment ಮಾಡುವುದಕ್ಕೆ ಅನುಕೂಲವಾಗುತ್ತದೆ. Progress ಆಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಹೇಳಿದ್ದೇನೆ. ಉದಾಹರಣೆಗೆ, Corporation ಗೆ 50 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇನೆ. ಆದರೆ, 100 ಕೋಟಿ ರೂಪಾಯಿಗಳಿಗೆ ಪ್ಲಾನ್ ಮಾಡಿ ಎಂದು ಹೇಳಿದ್ದೇನೆ. ಅದರರ್ಥ, ನಾನು 100 ಕೋಟಿ ರೂಪಾಯಿಗಳನ್ನು ಕೊಡುವುದಿಲ್ಲ. ಆ ವರ್ಷಕ್ಕೆ 50 ಕೋಟಿ ರೂಪಾಯಿ ಮಾತ್ರ ಕೊಡುವುದು. (ಗೊಂದಲ) ಈಗ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ

ತೊಂದರೆ ಏನೂ ಇಲ್ಲ. ಒಂದು ಕೋಟಿ ರೂಪಾಯಿಗಳೇನಿದೆ, ಅದನ್ನು ಮಾರ್ಚ್ ಒಳಗಡೆ ಖರ್ಚು ಮಾಡುವುದಕ್ಕೆ ಈಗಾಗಲೇ 100 ಕೋಟಿ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ಒದಗಿಸಲಾಗಿದೆ.

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ದಿನಾಂಕ 31–03–2010ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಗಲನ್ನೂ ಸೇರಿ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1 – ಕೃಷಿ ಮತ್ತು ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 56,109.47 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 825.00 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 2 – ಪಶುಸಂಗೋಪನೆ ಮತ್ತು ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ ಮತ್ತು ಮೀನುಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 22,684.05 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,421.71 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 3 – ಆರ್ಥಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,84,186.68 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 342.21 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 4 – ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,329.27 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 5 – ಒಳಾಡಳಿತ ಮತ್ತು ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 73,375.44 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,627.77 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 6 – ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 349.24 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ

ಖಾತೆಯಲ್ಲಿ 13,705,89 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 7 – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕೃಷಿ ಮತ್ತು ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 51,717.81 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 51,641.70 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 8 – ಅರಣ್ಯ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16,328.82ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 103.16 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 9 – ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,867.71 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 439.07 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 10 – ಸಮಾಜ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 65,450.90 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,077.52 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 52,330.13 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,379.30 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,846.13 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,663.00 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 13 – ಆಹಾರ ಮತ್ತು ನಾಗರೀಕ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,695.96 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ

ಖಾತೆಯಲ್ಲಿ 594.00 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 14 – ಕಂದಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಂದಾಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 70,495.62 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,306.60 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 15 – ಮಾಹಿತಿ ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,124.54 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 547.80 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 16 – ವಸತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 24,358.51 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,289.35 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 17 – ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,87,161.97 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,610.74 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 18 – ವಾಣಿಜ್ಯ ಮತ್ತು ಕೈಗಾರಿಕೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 44,479.78 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,511.86 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,44,131.27 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 42,459.78 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ ಕಾಮಗಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 43,107.95 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 79,058.76 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 21 – ಜಲಸಂಪನ್ಮೂಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,184.01 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,48,658.06 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 64,234.04 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,779,68 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 23 – ಕಾರ್ಮಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,970.03 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 99.00 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 24 – ಇಂಧನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 80,500.42 ಲಕ್ಷ ರೂ. ಗಳಿಗಿಂತ

ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,146.00 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 25 – ಕನ್ನಡ ಮತ್ತು ಸಂಸ್ಕೃತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,425.22 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 389.94 ಲಕ್ಷ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 26 – ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,017.48 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 27 – ಕಾನೂನು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,558.15 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,364.58 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಪೂರಕ ಅನುದಾನ ಬೇಡಿಕೆಗಳು 2008–09
ಪೂರಕ ಅಂದಾಜುಗಳು(2ನೇ ಕುರಿತು)

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 31–03–2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 5, 7 ರಿಂದ 14 ಮತ್ತು 17 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ದಿನಾಂಕ 31–03–2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 5, 7 ರಿಂದ 14 ಮತ್ತು 17 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆ ಮಂಜೂರು ಮಾಡುವುದು."

LA.V.S.F./14

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದಂತೆ ಮಂಜೂರಾದ ಬೇಡಿಕೆಗಳನ್ನು ಕೆಳಗೆ ನಮೂದಿಸಲಾಗಿದೆ)